
ಗೌರಿ ಲಂಕೇಶರ

ಲಂಕೇಶ್

ಜೂನ್ 20, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಕಳ್ಳರ ನಡುವೆ ಸುಳ್ಳಿ ದಾಮಿನಿ



ಗಣೇಶನ ದುರ್ಗತಿ



ಚೆಲುವನ ಬಂಡಾಯ



ಗುತ್ತೇದಾರ್ ಪಾಟೀಲ್ ಸಮರ



ಉದಾಸಿ ಸಾರಥ್ಯದಲ್ಲಿ ವರದಾ ಷುಗರ್ಸ್ ದಿವಾಳಿ


ಮತ್ತೆ ಬರಲಿದೆ ಕರೆಂಟು ಶಾಕ್!!

ಮತ್ತೊಮ್ಮೆ ಎಲ್ಲಾ ಎಸ್ಕಾಮ್‌ಗಳು ವಿದ್ಯುತ್ ಪ್ರಾಧಿಕಾರದ ಮುಂದೆ ವಿದ್ಯುತ್ ದರ ಏರಿಸಬೇಕೆಂಬ ಪ್ರಸ್ತಾಪ ಮುಂದಿಟ್ಟಿವೆ. ಕಳೆದ ಬಾರಿ ಇವು ತಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದಾಗ ಅದರ ಬಗ್ಗೆ ತೀರ್ಮಾನ ಮಾಡುವ ಪರಮಾಧಿಕಾರ ಉಳ್ಳ ಕೆಇಆರ್‌ಸಿ ಎಸ್ಕಾಮ್ ಕಂಪನಿಗಳ ಬೇಡಿಕೆಯನ್ನು ಸಾರಾಸಗಟು ತಳ್ಳಿ ಹಾಕಿತ್ತು. ಕಾರಣ ಎಸ್ಕಾಮ್‌ಗಳ ಲೆಕ್ಕಾಚಾರದಂತೆಯೇ ಅವೆಲ್ಲವೂ ಲಾಭ ಮಾಡುತ್ತಿದ್ದವೇ ವಿನಃ ನಷ್ಟವನ್ನಲ್ಲ. ಹೀಗಾಗಿ ಈ ಎಲ್ಲಾ ವಿದ್ಯುತ್ ವಿತರಣಾ ಎಸ್ಕಾಮ್ ಕಂಪನಿಗಳು ಯುನಿಟ್ಟಿಗೆ 40 ಪೈಸೆ ಬೆಲೆ ಏರಿಸುವ ಪ್ರಸ್ತಾಪವಿಟ್ಟಿದ್ದರೂ ಅದನ್ನು ಒಪ್ಪದೆ ಪ್ರತಿ ಯುನಿಟ್ಟಿಗೆ ಹತ್ತು ಪೈಸೆ ಬೆಲೆ ಇಳಿಸಬೇಕೆಂಬ ಆದೇಶವನ್ನು ನೀಡಿತ್ತು.

ಆದರೆ ನಮ್ಮ ವಿದ್ಯುತ್ ದರಗಳೇನೂ ಕಡಿಮೆ ಆಗಲಿಲ್ಲ. ಕಾರಣ? ಈ ಎಸ್ಕಾಮ್‌ಗಳು ಕೇಂದ್ರ ವಿದ್ಯುತ್ ಪ್ರಾಧಿಕಾರದ ಮುಂದೆ ದೂರು ತೆಗೆದುಕೊಂಡು ಹೋದವು. ಮತ್ತು ಆ ಕೇಂದ್ರೀಯ ಪ್ರಾಧಿಕಾರ ಈ ಬೆಲೆ ಇಳಿತವೆಂಬ ಅಪರೂಪದ ಜನಪರ ಕ್ರಮಕ್ಕೆ ತಡೆಯಾಜ್ಞೆ ನೀಡಿತು. ಹೀಗಾಗಿ ಇಲ್ಲಿ ಪೂಜಾರಿ ವರ ಕೊಟ್ಟರೂ ದೇವರು ಕೊಡಲಿಲ್ಲ ಅದೇ ಉಪಮೇಯವೇ ಸರಿ. ಈ ಜಾಗತೀಕರಣದ ಕಾಲ ಘಟ್ಟದಲ್ಲಿ ದೇವರೆಂದರೆ ಮಾರುಕಟ್ಟೆ ಶಕ್ತಿಗಳ ಪರವಾಗಿರುವ ಕಾನೂನುಗಳೇ ವಿನಃ ಸಾಮಾನ್ಯ ಜನರ ಪರವಾದ ಅಧಿಕಾರಿಗಳು ಅಲ್ಲ..ಕಾನೂನಿನ ವ್ಯಾಖ್ಯಾನಗಳೂ ಅಲ್ಲ.

ಈಗ ಮತ್ತೆ ಎಸ್ಕಾಮ್‌ಗಳೆಲ್ಲಾ ಒಟ್ಟು ಸೇರಿ ಮತ್ತೆ ಯೂನಿಟ್ಟಿಗೆ 80ಪೈಸೆ ಏರಿಕೆಯ ಪ್ರಸ್ತಾಪವನ್ನು ಮುಂದಿಟ್ಟಿವೆ. ಅಂದರೆ ಸರಾಸರಿ ಒಂದು ಯುನಿಟ್ಟಿಗೆ 3.66ರೂ ಇದ್ದದ್ದು ಕನಿಷ್ಠ ಪಕ್ಷ 4.64ರೂಗೆ ಏರಿಸುವ ಪ್ರಸ್ತಾಪವನ್ನು ಮುಂದಿಟ್ಟಿವೆ. ಇದನ್ನು ಒಪ್ಪಿದಲ್ಲಿ 200ಯುನಿಟ್ ಬಳಸುವ ಒಂದು ಬಡ ಮಧ್ಯಮವರ್ಗದವರ ಮನೆಯ ಕರೆಂಟ್ ಬಿಲ್ಲು 600ರೂ. ನಿಂದ 800ರೂ.ಗಳಿಗೇ ಏರಲಿದೆ. ಅಂದರೆ ಕಳೆದ ವರ್ಷ ಈ ಕಂಪನಿಗಳು ಏರಿಸಲಾಗದ ಬಾಕಿಯನ್ನು ಈ ವರ್ಷದ ಏರಿಕೆಯಲ್ಲಿ ಪಡೆದುಕೊಂಡು ಬಿಡುವ ಹುನ್ನಾರ ಈ ವಿದ್ಯುತ್ ವಿತರಣಾ ಕಂಪನಿಗಳದು. ಅವು ಸರ್ಕಾರಿ ಸ್ವಾಮ್ಯದ ಕಂಪನಿಗಳೇ ಆದರೂ ಕ್ರಮೇಣ ಈ ವಿತರಣೆಯಲ್ಲೂ ಖಾಸಗಿ, ಸ್ವದೇಶಿ ಮತ್ತು ವಿದೇಶಿ ವಿದ್ಯುತ್ ವಿತರಣ ಕಂಪನಿಗಳು ಇಲ್ಲಿರುವ ಲಾಭವನ್ನು ಕಬಳಿಸಲು ತುದಿಗಾಲಲ್ಲಿ ನಿಂತಿವೆ. ಜನರ ವಿರೋಧದ ಏಕಮಾತ್ರದ ಕಾರಣದಿಂದಾಗಿ ಮಾತ್ರ ಅದನ್ನು ತಡೆಹಿಡಿಯಲಾಗಿದೆ.

ಇದಲ್ಲದೆ ಪ್ರತಿ ವರ್ಷ ಸರ್ಕಾರ ವಿದ್ಯುತ್ ಸಬ್ಸಿಡಿಯೆಂದು ವರ್ಷಕ್ಕೆ 1800ಕೋಟಿಯನ್ನು ಬಜೆಟ್ಟಿನಿಂದ ಎತ್ತಿಕೊಡುತ್ತಿತ್ತು. ಈಗ ಐಎಂಎಫ್ ಷರತ್ತಿನ ಮೂರನೇ ಹಂತದ ಷರತ್ತಿನ ಪ್ರಕಾರ ಈ ಸಬ್ಸಿಡಿಗಳನ್ನೆಲ್ಲಾ ಸರ್ಕಾರ ಈ ವರ್ಷ ನಿಲ್ಲಿಸಬೇಕು ಮತ್ತು ಅದರಿಂದ ಉಂಟಾಗುವ ನಷ್ಟವನ್ನು ಈ ವಿತರಣಾ ಕಂಪನಿಗಳು ವಿದ್ಯುತ್ ದರ



ಏರಿಕೆಯಿಂದಲೇ ತುಂಬಿಕೊಳ್ಳಬೇಕು.. ಹೀಗಾಗಿ ಕೆಇಆರ್‌ಸಿ ಸಹಾ ಅದಕ್ಕೆ ನಿರಾಕರಿಸುವಂತಿಲ್ಲ. ಹೀಗೆ ವಿದ್ಯುತ್ ವಿತರಣೆ ಸಂಪೂರ್ಣ ಮಾರುಕಟ್ಟೆ ಶಕ್ತಿಗಳಿಗೆ ತೆರೆದುಕೊಂಡ ನಂತರ ಈ ಎಸ್ಕಾಮ್‌ಗಳನ್ನು ಸಂಪೂರ್ಣವಾಗಿ ಖಾಸಗಿ ಕಂಪನಿಗಳು ವಶಮಾಡಿಕೊಳ್ಳುತ್ತವೆ. ಪರಿಣಾಮ ವಿದ್ಯುತ್ ಉತ್ಪಾದನೆ ಹೆಚ್ಚಿದರೂ ಬಡವರ ಮನೆ ದೀಪ ಬೆಳಗಲು ಒಂದು ದೀಪವೂ ಉರಿಯುವುದಿಲ್ಲ, ಏಕೆಂದರೆ ಆ ಒಪ್ಪಂದದ ಪ್ರಕಾರ ಯಾರಿಗೂ ಪುಕ್ಕಟೆ ವಿದ್ಯುತ್ ಕೊಡುವಂತಿಲ್ಲ ಕುಡಿಯುವ ನೀರನ್ನೂ ಕೊಡುವಂತಿಲ್ಲ, ಆದ್ದರಿಂದಲೇ ಬಡವರಿಗೆ ನೀಡಿದ್ದ ಬೀದಿ ನಲ್ಲಿಗಳನ್ನೂ ಬೆಂಗಳೂರಿನಲ್ಲಿ ನಿಧಾನಕ್ಕೆ ಹಿಂತೆಗೆದುಕೊಳ್ಳಲಾಗುತ್ತಿದೆ. ಅದೇರೀತಿ ಈಗ ಬಡವರಿಗೆ ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಯೋಜನೆಯಲ್ಲಿನ ಪುಕ್ಕಟೆ ವಿದ್ಯುತ್ತನ್ನು ಕ್ರಮೇಣ ಹಿಂತೆಗೆದುಕೊಳ್ಳಲಾಗುತ್ತಿದೆ.

80ಪೈಸೆ ಬೆಲೆ ಏರಿಕೆಯಾಗುತ್ತದೆ. ಕೆಇಆರ್‌ಸಿ ಅದನ್ನು ಸರಿಯಾಗಿ ಜಾರಿಗೆ ತರುವ ಸಂಸ್ಥೆಯಾಗುತ್ತದೆ... ಬಡವರ ಮನೆಯ ಕತ್ತಲು ಕಗ್ಗತ್ತಲೆಡೆ ಸಾಗುತ್ತದೆ... ಆದರೆ ರಾಜ್ಯದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ವಿದ್ಯುತ್ ಉತ್ಪಾದನೆ ಆಗುತ್ತಲೇ ಹೋಗುತ್ತದೆ. ಕಣ್ಣೆದುರಿಗೆ ಸಮೃದ್ಧಿ ಇದ್ದರೂ, ಬಡವರ ಮನೆಯ ಹಸಿವನ್ನಾಗಲೀ, ಬಾಯಾರಿಕೆಯನ್ನಾಗಲಿ, ಕತ್ತಲನ್ನಾಗಲೀ ಅದು ನೀಗುವುದಿಲ್ಲ, ಅದೇ ಜಾಗತೀಕರಣ!!

ಥಿಂಕ್ ಗ್ರೀನ್.. ಗ್ರೋ ಗ್ರೀನ್.. ಡ್ರಿಂಕ್ ಒನ್ಲಿ ಕೋಕೋ ಕೋಲಾ!!


ಕೇರಳದ ಪ್ಲಾಚಿಮಾಡದಲ್ಲಿ ಕೋಲಾ ಕಂಪನಿಯ ಕೃತ್ಯದಿಂದಾಗಿರುವ ಪರಿಸರನಾಶ

ತಾನು ಕಾಲಿಟ್ಟ ಕಡೆಗಳೆಲ್ಲಾ ಅಂತರ್‌ಜಲವನ್ನೆಲ್ಲಾ ಕಲುಷಿತಗೊಳಿಸಿ ಅಪಾರ ಜಲಮಾಲಿನ್ಯ ಮತ್ತು ಪರಿಸರ ನಾಶ ಮಾಡಿದ ಕೊಕೋಕೋಲಾ ಕಂಪನಿ ಈಗ ದೇಶದೆಲ್ಲೆಡೆ ಪರಿಸರ ಜಾಗೃತಿಗೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆಯಂತೆ! ಅದರ ಹೆಸರು ಥಿಂಕ್ ಗ್ರೀನ್... ಗ್ರೋ ಗ್ರೀನ್ ಅಂತೆ..ಅಂದರೆ ಹಸಿರನ್ನೇ ಯೋಚಿಸಿ ಹಸಿರನ್ನು ಬೆಳೆಸಿ... ಆದರೆ ಅದರಲ್ಲಿ ಒಂದು ಬಿಟು ಹೋಗಿದೆ... ಹಸಿರು ಬಾಟಲಿನಲ್ಲಿ ಕೊಕೋಕೋಲಾವನ್ನು ಕುಡಿಯಿರಿ ಎಂಬುದು...



ಏಕೆಂದರೆ ಕೋಕೋಕೋಲಾ ಏನೇ ಮಾಡಿದರೂ ತನ್ನ ಮಾರುಕಟ್ಟೆಯನ್ನು ಬೆಳೆಸಿಕೊಳ್ಳಲು ತಾನೆ? ಇಲ್ಲಾ ಎಂದರೆ ಕೇರಳದ ಪ್ಲಾಚಿಮಾಡದಲ್ಲಿ ಅಂತರ್ಜಲಕ್ಕೆ ತನ್ನ ಫ್ಯಾಕ್ಟರಿ ಕಲ್ಮಶವನ್ನೆಲ್ಲಾ ಸುರಿಯುವಾಗ ಏಕೆ ಥಿಂಕ್ ಗ್ರೀನ್ ಜ್ಞಾಪಕಕ್ಕೆ ಬರಲಿಲ್ಲ? ದೇಶದ ಹಲವು ಕಡೆ ತನ್ನ ಪ್ಲಾಂಟ್‌ಗಳನ್ನು ಹಾಕುವಾಗ ಸಾವಿರಾರು ಮರಗಳನ್ನು ಕಡಿದಾಗ ಏಕೆ ಗ್ರೋ ಗ್ರೀನ್ ಜ್ಞಾಪಕಕ್ಕೆ ಬರಲಿಲ್ಲ? ಈಗ ಈ ಕೋಲಾಗಳಲ್ಲಿ ಕ್ರಿಮಿನಾಶಕಗಳಿವೆ ಎಂಬುದು ಜಗಜ್ಜಾಹೀರಾಗಿ ಈ ಕಂಪನಿಗಳ ಪ್ರತಿಷ್ಠೆ ಎಲ್ಲಾ ಮಣ್ಣು ಪಾಲಾದ ಮೇಲೆ ಇದ್ದಕ್ಕಿದ್ದಂತೆ ತಾವು ಎಷ್ಟೊಂದು ಜನಪರ ಎಂದು ತೋರಿಸಿಕೊಳ್ಳಲು ಈ ಹೊಸ ವರಸೆ ಶುರು ಮಾಡಿವೆ. ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಸ್ಪರ್ಧೆಯ ಪ್ರಾಯೋಜಕರು ತಾವು ಬಡವರ ಪರವಾಗಿಯೇ ಇದ್ದೇವೆ ಎಂದು ತೋರಿಸಿಕೊಳ್ಳಲು ಗೆದ್ದ ಸುಂದರಿಯ ಬಾಯಲ್ಲಿ ಬಡವರ ಬಗ್ಗೆ ಮಾತುಗಳನ್ನು ಪಲುಕಿಸಿದ ಹಾಗೆ. ಅಥವಾ ನಂಬರ್ ಒನ್ ಕ್ರಿಮಿನಲ್ ಕಂಪನಿಗಳೇ ಪೊಲೀಸ್ ಸ್ಟೇಷನ್ ಕಟ್ಟಲು ಧನಸಹಾಯ ಮಾಡಿದ ಹಾಗೆ..ಮುಂದೆ ಕೋಕೋ ಕೋಲ ಕಂಪನಿಗೆ ಜಲರಕ್ಷಕ ಪ್ರಶಸ್ತಿ ಬಂದರೂ ಆಶ್ಚರ್ಯವಿಲ್ಲ, ಏಕೆಂದರೆ ಪ್ರತಿ ವರ್ಷ ಈ ದೇಶದಲ್ಲಿ ಪರಿಸರಮಿತ್ರ ಪ್ರಶಸ್ತಿ ಮಿತ್ರ ಪ್ರಶಸ್ತಿ ಪಡೆಯುವುದು ಇಡಿ ಮಲೆನಾಡಿನ ಹಸಿರು ಕಾಡುಗಳನ್ನು ಕಡಿದಿ ಬೋಳು ಗುಡ್ಡ ಮಾಡಿಬಿಡುತ್ತಿರುವ ಕುದುರೆಮುಖ ಕಬ್ಬಿಣ ಅದಿರು ಕಂಪನಿ. ಮುಸ್ಲಿಮರ ಕಗ್ಗೊಲೆ ನಡೆಸಿ ಅಧಿಕಾರಕ್ಕೆ ಬಂದರೂ ಮಾನವ ಹಕ್ಕುಗಳಿಗೆ ಏನೂ ಭಂಗ ಬಂದಿಲ್ಲವೆಂದು ಮೋದಿಗೆ ಮಾನವ ಹಕ್ಕು ರಕ್ಷಕನೆಂಬ ಮರ್ಯಾದೆ ಸಿಗುವ ಈ ದೇಶದಲ್ಲಿ, ಹತ್ತಾರು ಸಾವಿರ ಭಾರತೀಯ ಭೂಪಾಲಿಗರನ್ನು ಕೊಂದುಹಾಕಿದ ಯೂನಿಯನ್ ಕಾರ್ಬೈಡ್ ಕಂಪನಿ ಮಾಲೀಕ ಆಂಡರ್‌ಸನ್‌ನನ್ನು ಈ ದೇಶದ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಕರೆಯುವ ಈ ದೇಶದಲ್ಲಿ ಕೋಕೋಕೋಲಾ ಕಂಪನಿಗೆ ಅತ್ಯುತ್ತಮ ಸಮಾಜ ಸೇವಕನೆಂಬ ಪ್ರಶಸ್ತಿ ಬಂದರೆ ಆಶ್ಚರ್ಯಪಡುವ ಕಾರಣವೇನಿದೆ?

ಚಾರ್ವಾಕ

ಶಿವಸುಂದರ್

ಸಾರಾಯಿ ಹೋಗಿ ಬೀರು ಬಂತು ಡುಂಡುಂಡುಂ!

ಇದೇ ಜುಲೈ ಒಂದರಿಂದ ಸಾರಾಯಿಯನ್ನು ಸರ್ಕಾರ ಕಟ್ಟು ನಿಟ್ಟಾಗಿ ನಿಷೇಧ ಮಾಡುತ್ತದಂತೆ. ಇನ್ನೂ ಅದಕ್ಕೆ ಒಂದು ತಿಂಗಳು ಬಾಕಿ ಇರುವುದರಿಂದ ಈಗಲೇ ಅದರ ಬಗ್ಗೆ ಏನೂ ಹೇಳಲಾಗುವುದಿಲ್ಲ. ಆದರೆ ಅದರ ವಿರುದ್ಧ ಸಾರಾಯಿ ಲಾಬಿಯಿಂದ ಮತ್ತು ಅಂಗಡಿ ಮಾಲಿಕರಿಂದ ನಿರೀಕ್ಷಿತ ಪ್ರತಿಭಟನೆ ಕಾಣದಿರುವುದಕ್ಕೆ ಕಾರಣವೇನು? ಕಾರಣವಿದೆ.. ಅವರಿಗೆಲ್ಲಾ ಅದೇ ಅಂಗಡಿಗಳಲ್ಲಿ ಮದ್ಯ ಮಾರಾಟವನ್ನು ಮಾಡಲು ಸರ್ಕಾರ ಅನುವು ಮಾಡಿಕೊಡುತ್ತದೆಯಂತೆ. ಮೊನ್ನೆ ಈ ಬಗ್ಗೆ ಹೇಳಿಕೆ ನೀಡಿರುವ ಸರ್ಕಾರ ಸಾರಾಯಿ ನಿಷೇಧದಿಂದ ಮದ್ಯದ ಬೇಡಿಕೆ ಜಾಸ್ತಿ ಆಗುವ ನಿರೀಕ್ಷೆ ಇದೆ. ಇದುವರೆಗೆ ಪ್ರತಿ ದಿನ 14ಲಕ್ಷ ಕೇಸುಗಳಷ್ಟು ಮದ್ಯ ಮಾರಾಟವಾಗುತ್ತಿತ್ತು, ಸಾರಾಯಿ ನಿಷೇಧವಾದ ನಂತರ ಅದರ ಮಾರಾಟ 14 ಲಕ್ಷ ಕೇಸಿನಿಂದ 28 ಲಕ್ಷ ಕೇಸಿಗೆ ಏರುವ ಸಾಧ್ಯತೆ ಇದ್ದು ಅದಕ್ಕೆ ಸರ್ಕಾರ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ ಎಂದು ಸರ್ಕಾರ ಘೋಷಿಸಿದೆ. ಮತ್ತು ಅದು ಇನ್ನೂ ಜಾಸ್ತಿಯಾದರೂ ಪೂರೈಸಲು ಮತ್ತು ನಿಭಾಯಿಸಲು ಸರ್ಕಾರ ಸಿದ್ದವಾಗಿದೆಯಂತೆ. ಅಂದರೆ ಏನರ್ಥ? ಸಾರಾಯಿ ನಿಷೇಧವನ್ನು ಆಗ್ರಹಿಸಿದ್ದಕ್ಕೆ ಕಾರಣ ಸಾರಾಯಿ ರುಚಿ ಚೆನ್ನಾಗಿರಲ್ಲ ಎಂದೇ? ಸಾರಾಯಿ ಒಂದು ಅಮಲು..ಜೂಜು ಚಟ..ಸಾರಾಯಿ ಚಟದಿಂದ ದುಡಿಯುವ ಜನ ಕುಡಿತದ ದಾಸರಾಗಿ ಬಂದ ಹಣವನ್ನೆಲ್ಲಾ ಈ ಚಟಕ್ಕೆ ತೆತ್ತು ಬರಿಗೈಯಾಗಿ ಹೆಂಡತಿ ಮಕ್ಕಳನ್ನು ಉಪವಾಸ ಕೆಡುವುತ್ತಾರೆ. ಅಮಲಿನ ಮತ್ತಿನಲ್ಲಿ ಕೌಟುಂಬಿಕ ಸ್ವಾಸ್ಥ್ಯ ಕೆಟ್ಟು ಮಹಿಳೆಯರು ಹೆಚ್ಚೆಚ್ಚು ಗೃಹ ಹಿಂಸೆಗೆ ತುತ್ತಾಗಬೇಕಾಗುತ್ತದೆ. ಇದೆಲ್ಲಕ್ಕೂ ಮೂಲ ಸಾರಾಯಿ ಹತ್ತಿಸುವ ಅಮಲು ಮತ್ತು ಚಟ.. ಹೀಗಾಗಿ ಸಾರಾಯಿ ನಿಷೇಧ ಬೇಕಿದ್ದುದು ಈ ಚಟದಿಂದ ವಿಮುಕ್ತರನ್ನಾಗಿ ಮಾಡಲು..

ಈಗ ಸಾರಾಯಿ ಬದಲು ಮದ್ಯ ಬಂದರೆ ಒಂದು ಚಟದ ಬದಲು ಮತ್ತೊಂದು ಚಟ ಪ್ರಾರಂಭವಾಗುತ್ತದಷ್ಟೆ..ಇದರಿಂದ ಜನರಿಗಾಗುವ ಒಳಿತೇನು?



No Comments

"ಇದೊಂದು ಶಾಸಕರ ಸರ್ಕಾರ. ಶಾಸಕರು ಕೇಳಿದ್ದನ್ನು ಮಾತ್ರ ಪೂರೈಸುತ್ತದೆ. ಜನರು ಕೇಳಿದ್ದನ್ನಲ್ಲ"

-ಡಿ.ಬಿ. ಚಂದ್ರೇಗೌಡ

"ಈ ಪರಿ ನೆಲಗಳ್ಳತನವನ್ನು ನೋಡಿದರೆ ಬೆಂಗಳೂರಿನಲ್ಲಿ ಕಾನೂನು ಅಸ್ತಿತ್ವದಲ್ಲಿದೆ ಎನಿಸುವುದಿಲ್ಲ"


-ಎಟಿ ರಾಮಸ್ವಾಮಿ

"ಕೊಲೆಬೆದರಿಕೆ ಪ್ರಕರಣದಲ್ಲಿ ನಾರಾಯಣಗೌಡರನ್ನು ಬಂಧಿಸಿದರೆ ನಾವೂ ಸ್ವಯಂಪ್ರೇರಿತವಾಗಿ ಬಂಧನಕ್ಕೊಳಗಾಗುತ್ತೇವೆ"

-ಜೋಸ್ಸೆಮನ್, ಕೋಡಿಹಳ್ಳಿ ಚಂದ್ರಶೇಖರ್

"ಪ್ರತಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ರೈತರೇ ಆತ್ಮಹತ್ಯೆ ಮಾಡಿಕೊಳ್ಳಬೇಡಿ..ನಿಮ್ಮ ನೆರವಿಗೆ ನಾವಿದ್ದೇವೆ ಎಂದು ಫಲಕಗಳನ್ನು ಹಾಕಬೇಕು"

-ಪುಟ್ಟಣ್ಣಯ್ಯ, ರೈತಸಂಘದ ನಾಯಕರು




"ಪರಿಪೂರ್ಣತೆ ಅನ್ನೋದು ಅಸಾಧ್ಯ. ಚಿತ್ರದಿಂದ ಚಿತ್ರಕ್ಕೆ ತಿದ್ದಿಕೊಳ್ಳುತ್ತಲೇ ಇರುತ್ತೇವೆ"

-'ದುನಿಯಾ' ಸೂರಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಉಡುಪಿ ವಿಭಾಗದ ನಕ್ಸಲ್ ಸಮಸ್ಯೆಯನ್ನು 2.60ಕೋಟಿಯಲ್ಲಿ ಬಗೆಹರಿಸಬಹುದು"

-ದೇವಿಪ್ರಸಾದ್ ಶೆಟ್ಟಿ (ಜೆಡಿಎಸ್ ಉಡುಪಿ ಜಿಲ್ಲಾ ಅಧ್ಯಕ್ಷ)



"ಭೂಗಳ್ಳರಿಂದ ವಶಪಡಿಸಿಕೊಂಡ ಜಮೀನಿನಲ್ಲಿ ಆಟೋ ಚಾಲಕರಿಗೆ ಮತ್ತು ಬಡವರಿಗೆ ಸೈಟು ಕೊಡಲಾಗುವುದು"

-ಎಚ್.ಡಿ. ಕುಮಾರಸ್ವಾಮಿ

"ಸರಕಾರವು ಸೇತುಸಮುದ್ರ ಯೋಜನೆಯನ್ನು ನಿಲ್ಲಿಸದಿದ್ದರೆ ನಾಲ್ಕೂ ಶಂಕರಾಚಾರ್ಯರು ಸೇರಿ 1750000 ಲಕ್ಷ ವರ್ಷಗಳಷ್ಟು ಹಳೆಯದಾದ ಸೇತುವೆಯನ್ನು ಉಳಿಸಲು ಜನಾಂದೋಲನವನ್ನು ನಡೆಸುತ್ತೇವೆ"

-ಸ್ವಾಮಿ ಪರಮಾನಂದ ಸರಸ್ವತಿ

ವಾರದ ವಿವೇಕ



"ಕೋಮು ಸೌಹಾರ್ದ, ಜೀವ ವೈವಿಧ್ಯ ಮತ್ತು ಜನಸಂಸ್ಕೃತಿ ಇವು ಒಂದಕ್ಕೊಂದು ಪೂರಕ ಸಂಬಂಧಗಳನ್ನು ಹೊಂದಿದ ಅಂಶಗಳು. ಇವಕ್ಕೆ ಯಾವುದೇ ಮೂಲದಿಂದ ಅಪಾಯ ಒದಗಿದರೂ ಮೌನವಾಗಿದ್ದು ಬಿಡುವುದು ಅಪಾಯಕಾರಿ"

-ನಂದಿತಾ ದಾಸ್, ಚಿತ್ರನಟಿ

ವಾರದ ಸತ್ಯ

"ಗುಜರಾತ್ ಸರ್ಕಾರ ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳ ಬಗ್ಗೆ ಸತ್ಯವನ್ನು ಮರೆಮಾಚುತ್ತಿದೆ. ಕಳೆದ ಒಂದು ವರ್ಷದಲ್ಲಿ ಗುಜರಾತಿನಲ್ಲಿ 300 ರೈತರು ಆತ್ಮಹತ್ಯೆಗಳನ್ನು ಮಾಡಿಕೊಂಡಿದ್ದಾರೆ. ಆದರೆ ಆ ಬಗ್ಗೆ ಠಾಣೆಯ ದೂರನ್ನು ದಾಖಲಿಸಿಕೊಳ್ಳುವುದಿಲ್ಲ. ಬದಲಿಗೆ ಮುಖ್ಯಮಂತ್ರಿ ಮೋದಿಯವರು ಗುಜರಾತಿನ ರೈತರು ಮಾರುತಿ ಕಾರಿನಲ್ಲಿ ಓಡಾಡುತ್ತಾರೆ ಎಂದು ಹೇಳುತ್ತಾರೆ"

-ಪ್ರಫುಲ್ಲ ಸಾಂಜೇಕರ್, ಬಿಕೆಎಸ್(ಬಿಜೆಪಿಯ ರೈತ ವಿಭಾಗ) ಗುಜರಾತ್ ಅಧ್ಯಕ್ಷ

ವಾರದ ಅವಿವೇಕ



"ತಪ್ಪು ಮಾಡಿ..ತಪ್ಪುಗಳನ್ನು ಮಾಡಿ.. ಎರಡು ಬಾರಿ ಮಾಡಿ.. ನಾಲಕ್ಕು ಬಾರಿ ಮಾಡಿ..ಆದರೆ ಮಾಡಿದ ತಪ್ಪುಗಳನ್ನೇ ಮಾಡಬೇಡಿ..ಬೆಳಿಗ್ಗೆ ತಪ್ಪು ಮಾಡಬೇಡಿ... ಮಧ್ಯಾಹ್ನ ಮಾಡಿ"

-ಮುನಿಶ್ರೀ ತರುಣಸಾಗರ

ಬೇ ನಖಾಬ್

"ಮೀಸಲು ವ್ಯವಸ್ಥೆ ಸಮಾಜವನ್ನು ಅಧಿಕಾರಕ್ಕಾಗಿ ವಿಭಜಿಸುವ ತಂತ್ರ"

-ಆರೆಸ್ಸೆಸ್, ಪಾಂಚಜನ್ಯದಲ್ಲಿ

ವಿ'ರಕ್ತ' ವಾತ

"'ಆನುದೇವಾ..' ಪುಸ್ತಕವನ್ನು ಮಾತ್ರವಲ್ಲ... ಅದನ್ನು ಬರೆದವರನ್ನು ಸುಡಬೇಕು"

-ಹುಬ್ಬಳ್ಳಿಯ ವಿರಕ್ತ ಸ್ವಾಮೀಜಿ

ವಿಠಲ ಹೆಗ್ಗಡೆಗೆ ಸರ್ಕಾರದ ಬೆದರಿಕೆ


ಯಾವುದೇ ಪ್ರಜಾಪ್ರಭುತ್ವವು ಆರೋಗ್ಯಕರವಾಗಿರಬೇಕಾದರೆ, ಭಿನ್ನಮತವೂ ಮುಖ್ಯ ಎಂಬುದು ಎಲ್ಲರಿಗೂ ಗೊತ್ತಿರುವ ಮಾತು. ಯಾಕೆಂದರೆ ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆಯು ಭಿನ್ನಮತವನ್ನು ತನ್ನನ್ನು ತಿದ್ದುವ ಅಂಶ ಎಂದು ಪರಿಗಣಿಸಿದರೆ, ಸರ್ವಾಧಿಕಾರಿ ವ್ಯವಸ್ಥೆಯು ಅದನ್ನು ಕಿರಿಕಿರಿ ಎಂದು ಭಾವಿಸಿ ದಮನ ಮಾಡುತ್ತದೆ. ಆದರೆ ನಮ್ಮ ಈ ದೊಡ್ಡ ಬಲಶಾಲಿ ಪ್ರಜಾಪ್ರಭುತ್ವವು ಭಿನ್ನಮತವನ್ನು ಹೇಗೆ ಪರಿಗಣಿಸುತ್ತದೆ ಎಂದು ತೋರಿಸಲು ಇಲ್ಲೊಂದು ಉದಾಹರಣೆಯನ್ನು ನೀಡುತ್ತೇನೆ.

ತಮಗೆಲ್ಲ ಗೊತ್ತಿರುವಂತೆ ಹಲವಾರು ವರ್ಷಗಳಿಂದ ನಮ್ಮ ಕಲ್ಕುಳಿ ವಿಠಲ ಹೆಗ್ಗಡೆ ಕುದುರೆಮುಖ ಅರಣ್ಯದ ಆದಿವಾಸಿಗಳನ್ನು ಒಕ್ಕಲೆಬ್ಬಿಸುವುದನ್ನು ವಿರೋಧಿಸಿ ಹೋರಾಟ ನಡೆಸುತ್ತಿದ್ದಾರೆ. ಆ ಕಾರಣಕ್ಕಾಗಿಯೇ ಅವರು ಸರ್ಕಾರದ ಕೆಂಗಣ್ಣಿಗೆ ಮತ್ತು ಚಡ್ಡಿಗಳ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಅಷ್ಟೇ ಅಲ್ಲ, ಹೆಗ್ಗಡೆಯವರಿಗೆ ಸಾಧ್ಯವಾದಷ್ಟು ಕಿರುಕುಳಗಳನ್ನು ಸರ್ಕಾರವು ಮತ್ತು ಅದರೊಂದಿಗೆ ಕೈಜೋಡಿಸಿರುವ ದುಷ್ಟರು ನೀಡುತ್ತಲೇ ಬಂದಿದ್ದಾರೆ. ಇದಕ್ಕೊಂದು ಪುಟ್ಟ ಉದಾಹರಣೆಯನ್ನು ನೀಡಬಹುದು. ಯಾವ 'ಮುಸ್ಲಿಮ್' ರಾಜ ಟಿಪ್ಪು ಸುಲ್ತಾನದಿಂದ ಹಿಂದೊಮ್ಮೆ ರಕ್ಷಣೆ ಮತ್ತು ಅಪಾರ ದೇಣಿಗೆಗಳನ್ನು ಶೃಂಗೇರಿ ಮಠ ಪಡೆದಿತ್ತೋ, ಅದೇ ಮಠ ಇವತ್ತು ಹಿಂದೂತ್ವವಾದಿಗಳ ಕೇಂದ್ರ ಸ್ಥಾನಗಳಲ್ಲಿ ಒಂದಾಗಿದೆ. ಸಹಜವಾಗಿಯೇ ಕೋಮುವಾದ, ಹಿಂದೂತ್ವವಾದ, ಆದಿವಾಸಿಗಳ ಶೋಷಣೆಯ ವಿರುದ್ಧ ವಿಠಲ ಹೆಗ್ಗಡೆ ದನಿ ಎತ್ತುತ್ತಿರುವುದು ಮಠದವರಿಗೆ ಸಹಿಸದಾಗಿದೆ. ಇದಕ್ಕೆ ಸರಿಯಾಗಿ ಮಠದ ಬ್ರಾಹ್ಮಣರ ಭೋಜನಕ್ಕೆ (ಈ ಪದ ಎಷ್ಟು ತಮಾಷೆಯಾಗಿದೆ ನೋಡಿ. ಬೇರೆ ಜಾತಿಯವರೆಲ್ಲ ಊಟ ಮಾಡಿದರೆ, ಬ್ರಾಹ್ಮಣರು ಭೋಜನ ಮಾಡುತ್ತಾರೆ!) ತಿಂಡಿ ತಿನಿಸುಗಳನ್ನು ತಯಾರಿಸಲೆಂದು ಮಠದ ಆವರಣದಲ್ಲಿ ಸೋಲಾರ್ ಸ್ಟೌವ್‌ಗಳನ್ನು ಅಳವಡಿಸಲಾಯಿತು. ಆದರೆ ದುರಾದೃಷ್ಟವಶಾತ್, ವಿಠಲ ಹೆಗ್ಗಡೆಯವರ ಅಡಿಕೆ ತೋಟ ಈ ಸೋಲಾರ್ ಸ್ಟೌವ್‌ಗಳಿಗೆ ಅಡ್ಡಿಯಾಗಿತ್ತು. ಇದರ ಬಗ್ಗೆ ಮುನ್ನವೇ ಯೋಚಿಸದ ಮಠದ ಅಧಿಕಾರಿಗಳು ವಿಠಲ ಹೆಗ್ಗಡೆಯವರ ತೋಟವನ್ನೇ ನಾಶ ಮಾಡಲು ಸಂಚು ರೂಪಿಸಿದರು. ಆ ಸಂಚಿಗೆ ಹೋಮ, ಹವನಗಳ ಪರಮಾಪ್ತ ಭಕ್ತರಾದ ದೇವೇಗೌಡ-ರೇವಣ್ಣ-ಕುಮಾರಸ್ವಾಮಿ ಎಂಬ ಶೂದ್ರ ಶಿಖಾಮಣಿಗಳು ಸೈ ಅಂದರು. ಪ್ರತಿಫಲವಾಗಿ ಮಠದ ಹಲವು ಪೂಜಾರಿಗಳ ಮನೆಗಳಿಗೆಂದೇ ನೂರಾರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸ ಡಾಂಬರು ರಸ್ತೆಯನ್ನು ನಿರ್ಮಿಸುವ ಯೋಚನೆಗೆ ಹಸಿರು ನಿಶಾನೆ ಸಿಕ್ಕಿತು. ಅಂದಹಾಗೆ ಆ ರಸ್ತೆಯು ವಿಠಲ ಹೆಗ್ಗಡೆಯವರ ತೋಟದ ಮೇಲೇ ಹಾಯ್ದು ಹೋಗುತ್ತಾದ್ದರಿಂದ ಅವರ ತೋಟದ ಅರ್ಧಭಾಗವನ್ನು ನಾಶ ಮಾಡಲು ಸರ್ಕಾರ ಈಗ ಸಜ್ಜಾಗಿ ನಿಂತಿದೆ!

ಹೇಗಿದೆ ನಮ್ಮ ಪ್ರಜಾಪ್ರಭುತ್ವ?!!

ಆದರೆ ಮಠಕ್ಕೆ ಬೇರೆ ರಸ್ತೆ ಇದ್ದು ಅದನ್ನೇ ದುರಸ್ತಿ ಮಾಡಿದರೆ ಮಠದ ಪೂಜಾರಿಗಳಿಗೂ, ಇತರೆ ಜನಸಾಮಾನ್ಯರಿಗೂ ಉಪಯುಕ್ತವಾಗುತ್ತದೆ; ಅದರ ಬದಲಾಗಿ ಸಾರ್ವಜನಿಕರ ಹಣವನ್ನು ಹೀಗೆ ದುಂದು ವೆಚ್ಚ ಮಾಡುವುದು ಸರಿಯೇ ಎಂದು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲನ್ನು ಏರುವ ಮೂಲಕ ವಿಠಲ ಹೆಗ್ಗಡೆಯವರು ತಮ್ಮ ವಿರೋಧಿಗಳ ಕೋಪವು ನೆತ್ತಿಗೇರುವಂತೆ ಮಾಡಿದ್ದಾರೆ. (ಅಲ್ಲಾ, ಬ್ರಾಹ್ಮಣ ಪೂಜಾರಿಗಳು ಉಪಯೋಗಿಸುವ ರಸ್ತೆಯಲ್ಲೇ ಕೆಳಜಾತಿಯವರೂ ನಡೆದಾಡಿದರೆ ಪಾಪ ಜನಿವಾರಿಗಳ ಮಡಿ ನಾಶವಾಗುತ್ತದೆ ಎಂಬ ಚಿಂತೆ ಇರಬಹುದೇ ಅವರಿಗೆ?!)

ಅದೆಲ್ಲ ಬದಿಗಿರಲಿ, ವಿಠಲ ಹೆಗ್ಗಡೆಯವರ ಇಂತಹ ಅಧಿಕ ಪ್ರಸಂಗಿತನವನ್ನು ಹೇಗೆ ನಮ್ಮ ಪ್ರಜಾಪ್ರಭುತ್ವ ಸರ್ಕಾರ ತಡೆಯುತ್ತದೆ? ಅದಕ್ಕೆಂದು ಈಗ ಇನ್ನೊಂದು ಸಂಚು ರೂಪಗೊಂಡಿದೆ. ಅದರ ಉದ್ದೇಶ ಏನೆಂದರೆ ಇನ್ನು ಮುಂದೆ ವಿಠಲ ಹೆಗ್ಗಡೆಯವರು ಎಂದೂ


ಕಲ್ಕುಳಿ ವಿಠಲ್ ಹೆಗ್ಡೆ

ಯಾವುದರ ವಿರುದ್ಧವೂ ಚಕಾರವೆತ್ತದಂತೆ ಮಾಡುವುದೇ ಆಗಿದೆ. ಇದಕ್ಕೆ ಇತ್ತೀಚೆಗೆ ಚಿಕ್ಕಮಗಳೂರು ಉಪ ವಿಭಾಗೀಯ ದಂಡಾಧಿಕಾರಿಗಳ (ಎ.ಸಿ. ಆಫೀಸ್) ನ್ಯಾಯಾಲಯ ವಿಠಲ ಹೆಗ್ಗಡೆಯವರಿಗೆ ಜಾರಿ ಮಾಡಿರುವ ಆದೇಶ ಒಂದು ನಿದರ್ಶನ.

ಕಳೆದ ಎರಡು ವರ್ಷಗಳಿಂದ ವಿಠಲ ಹೆಗ್ಗಡೆಯವರ ವಿರುದ್ಧ ಸಂಘ ಪರಿವಾರದ ವಿವಿಧ ಅಂಗ ಸಂಸ್ಥೆಗಳ ಸದಸ್ಯರು ನೀಡಿರುವ ದೂರುಗಳನ್ನೇ ಆಧರಿಸಿ ಹೊರಡಿಸಲಾಗಿರುವ ಈ ಆದೇಶ ನಮ್ಮ ವ್ಯವಸ್ಥೆಯು ಪ್ರಜಾತಂತ್ರ ಮೌಲ್ಯಗಳನ್ನು ಎಷ್ಟರಮಟ್ಟಿಗೆ ಎತ್ತಿ ಹಿಡಿಯುತ್ತದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಆ ಆದೇಶದ ಪ್ರಕಾರ 22.5.07 ರಂದು ನಡೆದ ಸಭೆಯಲ್ಲಿ ವಿಠಲ ಹೆಗ್ಗಡೆಯವರು "ನಾವು ಪ್ರಜಾತಾಂತ್ರಿಕವಾಗಿ ಕಳೆದ ಒಂಭತ್ತು ವರ್ಷಗಳಿಂದ ಕುದುರೆಮುಖ ಉದ್ಯಾನವನದ ನಿವಾಸಿಗಳ ಹಿತರಕ್ಷಣೆಗಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಕಳೆದ ಬಾರಿ ಶೃಂಗೇರಿಯ ಸಮಾವೇಶದಲ್ಲಿ ಸರ್ಕಾರಕ್ಕೆ ಎಚ್ಚರಿಕೆ ನೀಡಿ ನೀವು ಏನೇ ಕಾರಣಕ್ಕೂ ನಮ್ಮನ್ನು ಒಕ್ಕಲೆಬ್ಬಿಸಲಾಗುವುದಿಲ್ಲ. ನಮಗೆ ಪುನರ್ವಸತಿ ಮಾಡದೇ ನೀವು ಒಕ್ಕಲೆಬ್ಬಿಸಿದರೆ ನಾವು ನಕ್ಸಲೈಟರನ್ನು ಬೆಂಬಲಿಸಬೇಕಾಗುತ್ತದೆ. ಆದ್ದರಿಂದ ನಮಗೆ ಮೂಲಭೂತ ಸೌಕರ್ಯ ಕೊಡಿ. ಇಲ್ಲದಿದ್ದಲ್ಲಿ ನಾವು ಸರ್ಕಾರದ ವಿರುದ್ಧವಾಗಿ ತೀರ್ಮಾನ ಮಾಡಬೇಕು" ಎಂದು ಭಾಷಣ ಮಾಡಿದರು ಎಂದು ಆರೋಪಿಸಲಾಗಿದೆ.

ಕಳೆದ ಒಂದು ದಶಕದಿಂದ ವಿಠಲ ಹೆಗ್ಗಡೆಯವರು ಪ್ರಜಾತಾಂತ್ರಿಕವಾಗಿ ಹೋರಾಟ ಮಾಡಿಕೊಂಡು ಬಂದಿರುವುದು ನಿಜ, ಈ ಅವಧಿಯಲ್ಲಿ ಸರ್ಕಾರ ಯಾವ ಮೂಲಭೂತ ಸೌಕರ್ಯಗಳನ್ನು ನೀಡದಿರುವುದೂ ನಿಜ. ಆದರೆ ಹೆಗ್ಗಡೆ ಮತ್ತವರ 'ಆದಿವಾಸಿಗಳ ಹಿತರಕ್ಷಣಾ ಒಕ್ಕೂಟ'ವು ಯಾವುದೇ ಕಾರಣಕ್ಕೂ ತಾವು ಜಾಗ ಬಿಟ್ಟು ಕದಲುವುದಿಲ್ಲ ಎಂದೂ, ಪುನರ್ವಸತಿ ಬೇಡವೆಂದೂ ಹೇಳುತ್ತಾ ಬಂದಿರುವಾಗ ವಿಠಲ ಹೆಗ್ಗಡೆಯವರು "ನಮಗೆ ಪುನರ್ವಸತಿ ಮಾಡದೇ ಒಕ್ಕಲೆಬ್ಬಿಸಿದರೆ ನಕ್ಸಲೈಟರನ್ನು ಬೆಂಬಲಿಸುತ್ತೇವೆ" ಎಂದು ಹೇಗೆ ಹೇಳಲು ಸಾಧ್ಯ?! ಹೆಗ್ಗಡೆಯವರ ಮತ್ತು ಆದಿವಾಸಿಗಳ ಪ್ರಜಾತಾಂತ್ರಿಕ ಹೋರಾಟಕ್ಕೆ ನಕ್ಸಲೀಯರ ಬೆಂಬಲಿಗರು ಎಂಬ ಆರೋಪ ಹಚ್ಚಿ ಅವರ ಬಾಯಿ ಮುಚ್ಚಿಸುವ ಸರ್ಕಾರದ ತರ್ಕ ಇದರಲ್ಲಿ ಸ್ಪಷ್ಟವಾಗುತ್ತದೆ.

ಇನ್ನು ನಮ್ಮ ಇಡೀ ವ್ಯವಸ್ಥೆ ಎಷ್ಟು ಕೇಸರಿಮಯವಾಗಿದೆ ಎಂಬುದಕ್ಕೆ 27.9.06 ರಂದು ನಡೆದ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದನ್ನು ಕುರಿತು ವಿಠಲ ಹೆಗ್ಗಡೆಗೆ ಹೊರಡಿಸಿರುವ ಆದೇಶದ ಇನ್ನೊಂದು ಪ್ಯಾರಾವೇ ಸಾಕ್ಷಿ. ಸಂಘ ಪರಿವಾರದ ಅಕ್ರಮ ಮತ್ತು ನ್ಯಾಯಾಲಯದ ತೀರ್ಪಿನ ಉಲ್ಲಂಘನೆಯಾದ 'ದತ್ತಮಾಲೆಯ ಶೋಭಾಯಾತ್ರೆ'ಯನ್ನು ವಿರೋಧಿಸಿದ್ದನ್ನೇ ಒಂದು ಅಪರಾಧ ಎಂದು ಪರಿಗಣಿಸಿರುವ ವ್ಯವಸ್ಥೆ ವಿಠಲ ಹೆಗ್ಗಡೆಯವರು ಅದೇ ಸಂದರ್ಭದಲ್ಲಿ ಬಿಜೆಪಿಯವರನ್ನು "ಜನಿವಾರದ ನಾಯಿಗಳು, ಲೋಫರ್‌ಗಳು" ಎಂದೆಲ್ಲಾ ಕರೆದರು ಎಂದು ಸುಳ್ಳು ಆರೋಪಗಳನ್ನು ಹೊರಿಸಿದೆ. ಹೆಗ್ಗಡೆಯವರು ಆಡದೇ ಇರುವ ಮಾತನ್ನು ಸರ್ಕಾರವೇ ತನ್ನ ಆದೇಶದಲ್ಲಿ ಆಡುತ್ತದೆ ಎಂದರೆ ಕಿಡಿಗೇಡಿ ಬುದ್ಧಿ ಯಾರದ್ದು ಎಂಬುದರ ಬಗ್ಗೆ ಜನ ಚಿಂತಿಸಬೇಕಿದೆ.

ಅಷ್ಟೇ ಅಲ್ಲದೆ, ಅದೇ ಸಭೆಯಲ್ಲಿ ವಿಠಲ ಹೆಗ್ಗಡೆ ಮಚ್ಚು, ಲಾಂಗುಗಳನ್ನು ಹಿಡಿದು "ಸಾರ್ವಜನಿಕರಲ್ಲಿ ಪ್ರಾಣ ಬೆದರಿಕೆ" ಉಂಟು ಮಾಡಿದರೆಂದೂ, ಹಿಂದೂ ದೇವತೆಗಳನ್ನು ನಿಂದಿಸಿದರೆಂದೂ, ಇನ್ನೂ ಏನೇನೋ ಅಂದರೆಂದೂ ಸುಳ್ಳುಸುಳ್ಳು ಆರೋಪಗಳನ್ನು ಸರ್ಕಾರ ಮಾಡಿದೆ.

ನಿಮಗೆಲ್ಲ ಗೊತ್ತಿರುವಂತೆ ಕಳೆದ ಡಿಸೆಂಬರ್ ತಿಂಗಳಲ್ಲಿ ಸಂಘ ಪರಿವಾರದ ದತ್ತ ಜಯಂತಿ ಮತ್ತು ಶೋಭಯಾತ್ರೆಗಳನ್ನು ವಿರೋಧಿಸಿದ್ದಕ್ಕೆ ಚಿಕ್ಕಮಗಳೂರಿನ ಪೊಲೀಸರು ಎರಡನೇ ಬಾರಿಗೆ ನಮ್ಮನ್ನೆಲ್ಲ ಬಂಧಿಸಿ ಜೈಲಿನಲ್ಲಿಟ್ಟಿದ್ದರು. ಆದರೆ ಅವತ್ತು ಏನಾಯಿತು ಎಂದರೆ, ವಿಠಲ ಹೆಗ್ಗಡೆ ಸೇರಿದಂತೆ ಸುಮಾರು ಐವತ್ತು ಜನರನ್ನು ಮುಂಜಾನೆ 5.30 ಕ್ಕೇ ಅವರಿದ್ದ ಜಾಗಗಳಿಗೆ ಬಂದ ಪೊಲೀಸರು ಬಂಧಿಸಿದ್ದರು. ಆನಂತರ ಸುಮಾರು 9.30 ಕ್ಕೆ ನಾನು ಮತ್ತು ಇತರರು ಚಿಕ್ಕಮಗಳೂರಿನ ಬಸ್‌ಸ್ಟ್ಯಾಂಡಿನಿಂದ ಜಿಲ್ಲಾಧಿಕಾರಿಗಳ ಕಚೇರಿಯತ್ತ ಹೋಗುತ್ತಿದ್ದಾಗ ನಮ್ಮನ್ನು ಬಂಧಿಸಿದ್ದರು. ವಾಸ್ತವ ಸಂಗತಿ ಹೀಗಿದ್ದರೂ ವಿಠಲ ಹೆಗ್ಗಡೆಯವರು ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಪ್ರತಿಭಟನಾ ರ್‍ಯಾಲಿ ನಡೆಸಿದರೆಂದೂ, ದತ್ತ ಜಯಂತಿ ಕಾರ್ಯಕ್ರಮವನ್ನು ವಿರೋಧಿಸಿರೆಂದೂ, ಆ ಮೂಲಕ ಸಾರ್ವಜನಿಕ ಅಶಾಂತಿಗೆ ಕಾರಣರಾದರೆಂದೂ ವ್ಯವಸ್ಥೆ ಆರೋಪಿಸಿದೆ. ಇದೆಲ್ಲಕ್ಕಿಂತ ವಿಚಿತ್ರವಾಗಿರುವುದು 8.4.07 ರಂದು ನಡೆದ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವ್ಯವಸ್ಥೆ ಮಾಡಿರುವ ಆರೋಪ. ಅದನ್ನು ಯಥಾವತ್ತಾಗಿ ನೀಡುತ್ತೇನೆ:



ಕಂಡಹಾಗೆ

• "ಸಂಘಟನೆಗಳು ಮತ್ತು ಹೋರಾಟಗಳು ನಮಗೆಲ್ಲ (ಆದಿವಾಸಿ ಗಿರಿಜನರಿಗೆ) ಅಗತ್ಯವಾಗಿದೆ. ಸಂಘಟನೆ ನಮಗೆ ಶಕ್ತಿಯನ್ನು ಕೊಡುತ್ತದೆ. ಈ ಪ್ರಭುತ್ವ ನಿಂತಿರುವುದು ಸುಳ್ಳಿನ ಮೇಲೆ. ಚುನಾವಣೆ ಬರುವುದಕ್ಕಿಂತ ಮೊದಲೇ ಒಂದು ಸರ್ಕಾರಕ್ಕೆ ಬಹಿಷ್ಕಾರ ಹಾಕಿ ಸರ್ಕಾರ ಬೇಡಿಕೆ ಈಡೇರಿಸದಿದ್ದಲ್ಲಿ ನಾವು ಒಂದಾಗಿ ಚುನಾವಣೆ ಸಂದರ್ಭದಲ್ಲಿ ನಮ್ಮಲ್ಲಿ ಓಟನ್ನು ಕೇಳಲು ಬರುವ ಅಭ್ಯರ್ಥಿಗೆ ಬಹಿಷ್ಕಾರ ಹಾಕಬೇಕು. ಅವರಿಗೆ ಎಚ್ಚರಿಕೆಯನ್ನು ನೀಡಬೇಕು. ಸರ್ಕಾರ ನಮ್ಮ ಬದುಕಿಗೆ ಬೇಕಾದ ಮೂಲ ಸೌಕರ್ಯವನ್ನು ಕೊಡಲಿಕ್ಕೆ ಆಗಿಲ್ಲ, ಅದರ ಬದಲು ನಿಮ್ಮ ಬದುಕನ್ನು ಕಿತ್ತುಕೊಳ್ಳಲು ಸರ್ಕಾರ ಪ್ರಯತ್ನಿಸುತ್ತಿದೆ" ಎಂದು ಹೇಳುವ ಮೂಲಕ ವಿಠಲ ಹೆಗ್ಗಡೆಯವರು "ಸರ್ಕಾರದ ವಿರುದ್ಧ ಆದಿವಾಸಿ ಗಿರಿಜನರನ್ನು ಹೋರಾಟಕ್ಕೆ ಎತ್ತಿಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ" ಎಂದು ಆರೋಪಿಸಲಾಗಿದೆ. ಯಾವಾಗಿನಿಂದ ತಮ್ಮ ಮೂಲಭೂತ ಅಗತ್ಯಗಳಿಗೆ ಜನರನ್ನು ಸಂಘಟಿಸುವುದು, ಓಟ್ ಪಡೆದ ನಂತರ ಮತದಾರರನ್ನೇ ಮರೆಯುವ ಜನಪ್ರತಿನಿಧಿಗಳಿಗೆ ತಮ್ಮ ಜವಾಬ್ದಾರಿಗಳ ಬಗ್ಗೆ ಎಚ್ಚರಿಸುವುದು, ಚುನಾವಣೆಗಳಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಇಡೀ ಹಳ್ಳಿಗಳೇ ತೀರ್ಮಾನಿಸುವುದು ನಮ್ಮ ಪ್ರಜಾತಂತ್ರದ ವಿರೋಧಿ ಕ್ರಿಯೆಗಳಾಗಿವೆ? ಈ ಪ್ರಶ್ನೆಗೆ ಚಿಕ್ಕಮಗಳೂರಿನ ಆಡಳಿತ ಮತ್ತು ರಾಜ್ಯ ಸರ್ಕಾರ ಉತ್ತರವನ್ನು ನೀಡುತ್ತದೆಯೇ?

ಈ ಆದೇಶದ ಕೊನೆಯ ಭಾಗದಲ್ಲಿ ವಿಠಲ ಹೆಗ್ಗಡೆಯವರಿಂದ 25 ಸಾವಿರ ರೂಪಾಯಿಗಳ ಸ್ವಂತ ಮುಚ್ಚಳಿಕೆಯನ್ನು, ಸಾಕಷ್ಟು ಆಸ್ತಿ ಹೊಂದಿರುವ ಎರಡು ಧಡೂತಿ (ಹೌದು, ಧಡೂತಿ ಎಂದೇ ಸರ್ಕಾರಿ ಆದೇಶ ಹೇಳಿದೆ, ಇದು printers devil ನಿಂದಾಗಿರುವ ತಪ್ಪಲ್ಲ!) ವ್ಯಕ್ತಿಗಳಿಂದ ಜಾಮೀನು ಪಡೆಯುವುದೆಂದೂ ಹೇಳಲಾಗಿದೆ. ಇದೆಲ್ಲದರ ಅರ್ಥ ಇಷ್ಟೇ: ಇನ್ನು ಮುಂದೆ ಹೆಗ್ಗಡೆಯವರು ಯಾವ ಪ್ರತಿಭಟನೆಯಲ್ಲೂ ಭಾಗವಹಿಸದೆ, ತಾವು ವ್ಯವಸ್ಥೆಯ ದೌರ್ಜನ್ಯಕ್ಕೆ ಗುರಿಯಾದರೂ ವಿರೋಧಿಸದೆ ಸುಮ್ಮನಿರಬೇಕು ಎಂಬ ಹುನ್ನಾರ!


ನಮ್ಮ ಪ್ರಜಾಪ್ರಭುತ್ವ ಎಷ್ಟು ಚೆಂದವಾಗಿದೆ ಅಲ್ಲವೇ?

-ಗೌರಿ ಲಂಕೇಶ್

ಉದಾಸಿ ಸಾರಥ್ಯದಲ್ಲಿ ವರದಾ ಶುಗರ್ಸ್ ದಿವಾಳಿ

ಹಾವೇರಿ

ಪ್ರಾಯಶಃ ಕರ್ನಾಟಕದಲ್ಲಿ ಹಾವೇರಿ ಜಿಲ್ಲೆಯಲ್ಲಿಯೇ ಇನ್ನು ಮುಂದೆ ಹೆಚ್ಚು ರೈತರ ಆತ್ಮಹತ್ಯೆಗಳು ಸಂಭವಿಸಬಹುದೇನೋ. ಕೊ-ಬಾ ಸರ್ಕಾರದ ಹಿರಿಯ ಮಂತ್ರಿ ಎಂದು ಕರೆಸಿಕೊಳ್ಳುವ ಜಿಲ್ಲಾ ಉಸ್ತುವಾರಿ ಮಂತ್ರಿ ಸಿ.ಎಂ. ಉದಾಸಿ ಎಂಬ ಕಾಡು ಹೆಗ್ಗಣ ಹಾಗೂ ಶಾಸಕ ಶಿವರಾಜ ಸಜ್ಜನ ಎಂಬ ನಾಡು ಹೆಗ್ಗಣಗಳ ಸಾರಥ್ಯದಲ್ಲಿ ವರದಾ ಶುಗರ್ಸ್ ಎಂಬ ಜಿಲ್ಲೆಯ ಏಕೈಕ ಸಹಕಾರಿ ಸಕ್ಕರೆ ಕಾರ್ಖಾನೆ ದಿವಾಳಿ ಎದ್ದು ಕಬ್ಬು ಅರೆಯುವುದನ್ನೇ ನಿಲ್ಲಿಸಿ ಇನ್ನೇನು ಹರಾಜು ಹಾಕಿಸಿಕೊಳ್ಳುವುದಕ್ಕೆ ರೆಡಿಯಾಗಿ ನಿಂತಿದೆ. ಈ ಕಾರ್ಖಾನೆಯನ್ನೇ ನಂಬಿ ಕಬ್ಬು ಬೆಳೆದ ರೈತರು ಫ್ಯಾಕ್ಟರಿಯ ಗೇಟಿನ ಮುಂದೆ ತಮ್ಮ ಲಾರಿ, ಟ್ರ್ಯಾಕ್ಟರ್, ಎತ್ತಿನ ಬಂಡಿ ನಿಲ್ಲಿಸಿ ಗೋಳೋ ಎಂದು ರೋದಿಸುತ್ತಿದ್ದಾರೆ.



ಸಿ.ಎಂ. ಉದಾಸಿ

ನಮ್ಮದು ರೈತಪರ ಸರ್ಕಾರ ಎಂದು ಮೈಕ್ ಹಿಡಿದು ಪುಂಖಾನುಪುಂಖವಾಗಿ ಭಾಷಣ ಬಿಗಿಯುವ ಮುದ್ದೆ ಕುಮಾರ ಹಾಗೂ ಚೆಡ್ಡಿ ಯಡ್ಡಿಗಳಿಗೆ ಹಾವೇರಿ ಜಿಲ್ಲೆಯಲ್ಲಿ ಈಗಾಗಲೇ ಸಂಭವಿಸಿರುವ 10-12 ರೈತರ ಆತ್ಮಹತ್ಯೆಗಳು ಗಮನಕ್ಕೆ ಬಂದಿಲ್ಲ ಎಂದು ಕಾಣುತ್ತೆ. ಈಗ ವರದಾ ಶುಗರ್ಸ್ ಕಬ್ಬು ಅರೆಯುವುದನ್ನು ನಿಲ್ಲಿಸಿರುವುದರಿಂದ ಅದನ್ನೆ ನಂಬಿ ಕಬ್ಬು ಬೆಳೆದ ರೈತರು ಬೆಳೆದು ನಿಂತ ಕಬ್ಬಿಗೆ ಬೆಂಕಿ ಹಚ್ಚಿ ಅದರೊಳಗಡೆ ತಾವೂ ಸುಟ್ಟು ಕರಕಲಾದಾಗ ಮಾತ್ರ ಇವರು ಹಾವೇರಿ ಕಡೆ ತಿರುಗಿ ನೋಡುತ್ತಾರೆ ಅಂತ ಕಾಣುತ್ತೆ.

ಒಂದು ಕಡೆ ಸಾಲಸೋಲ ಮಾಡಿ ತಿಂಗಳುಗಟ್ಟಲೇ ಶ್ರಮವಹಿಸಿ ಬೆಳೆದ ಕಬ್ಬನ್ನು ಫ್ಯಾಕ್ಟರಿಯವರು ಕೊಳ್ಳಲಿಲ್ಲ ಎಂದರೆ ಗತಿ ಏನು? ಮಾಡಿದ ಸಾಲವನ್ನು ತೀರಿಸುವುದಾದರೂ ಹೇಗೆ? ಮುಂದಿನ ವರ್ಷದ ಬೆಳೆಗಳಿಗಾಗಿ ಮತ್ತೆ ಎಲ್ಲಿಂದ ಸಾಲ ತರುವುದು? ಎಂಬಿತ್ಯಾದಿ ಆತಂಕಕಾರಿ ಚಿಂತನೆಗಳಲ್ಲಿ ರೈತರು ಮುಳುಗಿದ್ದಾರೆ. ಇನ್ನೊಂದು ಕಡೆ ವರದಾ ಶುಗರ್ಸ್‌ನ್ನು ಇಲ್ಲಿಯವರೆಗೆ ದಿವಾಳಿಯೆಬ್ಬಿಸಿದ್ದು ಸಾಲದೆಂಬಂತೆ ಅದನ್ನು ಸಂಪೂರ್ಣವಾಗಿ ಹೇಗೆ ಮುಳುಗಿಸಬೇಕು ಹಾಗು ಆ ಮೂಲಕ ಹೇಗೆ ತಮ್ಮ ಜೇಬುಗಳನ್ನು ಭರ್ತಿ ಮಾಡಿಕೊಳ್ಳಬೇಕು ಎಂದು ಕಂತ್ರಿ ಮಂತ್ರಿ ಉದಾಸಿ, ಶಾಸಕ ಸಜ್ಜನ ಹಾಗು ಆಡಳಿತ ಮಂಡಳಿಯ ಅಧ್ಯಕ್ಷ ಸದಾಶಿವ ಬೆಲ್ಲದ ಸ್ಕೆಚ್ ಹಾಕುತ್ತಿದ್ದಾರೆ. ಸರ್ಕಾರದಿಂದ ಈ ಕಾರ್ಖಾನೆಯನ್ನು ಅನಾಮತ್ತು 30 ವರ್ಷಗಳಿಗೆ ಬೇರೆಯವರಿಗೆ ಲೀಸ್ ಮೇಲೆ ಕೊಟ್ಟು ಕಮೀಷನ್ ತಿಂದು ಕೈ ತೊಳೆದುಕೊಳ್ಳುವ ಇವರ ಬ್ಲೂ ಪ್ರಿಂಟ್ ಈಗಾಗಲೆ ಸಿದ್ಧಗೊಂಡಿದೆ. ಇದೇನಾದರೂ ಕಾರ್ಯರೂಪಕ್ಕೆ ಬಂದರೆ ಒಂದು ಕಡೆಯಿಂದ ಫ್ಯಾಕ್ಟರಿಯ ಕಾರ್ಮಿಕರು ಮತ್ತೊಂದು ಕಡೆಯಿಂದ ಕಬ್ಬು ಬೆಳೆಗಾರರು ಈ ತ್ರಿಮೂರ್ತಿಗಳನ್ನು ಹಾವೇರಿಯ ಬೀದಿಗಳಲ್ಲಿ ಅಟ್ಟಾಡಿಸಿಕೊಂಡು ಹೊಡೆದರೆ ಆಶ್ಚರ್ಯವೇನಿಲ್ಲ.


ವರದಾ ಶುಗರ್ಸ್‌ನ್ನು ಲೂಟಿ ಮಾಡಿದ ರೇಣುಕಾ ಶುಗರ್ಸ್

ಕಳೆದ ವರ್ಷ ವರದಾ ಶುಗರ್ಸ್ ಎಂಬ ಈ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಬೆಳಗಾವಿಯ ರೇಣುಕಾ ಶುಗರ್ಸ್ ಎಂಬ ಕಾರ್ಖಾನೆಯ ಆಡಳಿತ ಮಂಡಳಿಗೆ ಲೀಸ್ ಮೇಲೆ ವಹಿಸಲಾಗಿತ್ತು. ಅವರು ವರದಾ ಶುಗರ್ಸ್‌ನ್ನು ಮನಸೋಯಿಚ್ಛೆ ಸೂರೆ ಹೊಡೆದು, ಇಲ್ಲಿನವರಿಗೂ ಒಂದಿಷ್ಟು ತಿನ್ನಿಸಿ, ಕೊನೆಗೆ ಫ್ಯಾಕ್ಟರಿಯ ಕಾರ್ಮಿಕರಿಗೆ ಸಂಬಳವನ್ನೂ ಕೊಡದೆ ಮೂರು ನಾಮಾ ಹಾಕಿ ಮಿನಿಮಮ್ 42 ಲಕ್ಷ ರೂಪಾಯಿಗಳನ್ನು ಗುಳುಂ ಮಾಡಿ ಮೇ 9ರಂದು ರಾತ್ರೋರಾತ್ರಿ ಓಡಿ ಹೋದರು. ಅವರು ಹೀಗೆ ಓಡಿಹೋಗುವುದಕ್ಕೆ ಸೆಕ್ಯೂರಿಟಿ ನೀಡಿದವನೇ ಅಧ್ಯಕ್ಷ ಬೆಲ್ಲದ. ಹೋಗುವ ಮುನ್ನ ಅವರು ನೀಡಿದ್ದ 1000 ಚೀಲ ಸಕ್ಕರೆಗೆ ಬಾಯ್ತೆರೆದುಕೊಂಡಿದ್ದ ವರದಾ ಶುಗರ್ಸ್‌ನ ಆಡಳಿತ ಮಂಡಳಿ ಆ ಚೀಲಗಳನ್ನೆಲ್ಲಾ ಅಕ್ಕಿ ಆಲೂರಿನ ಗೋದಾಮಿಗೆ ಸಾಗಿಸಿ ರೇಣುಕಾ ಶುಗರ್ಸ್‌ನವರಿಗೆ ಗುಡ್‌ಬೈ ಹೇಳಿದ್ದಾರೆ. 1.60 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆದು 160000 ಲಕ್ಷ ಕ್ವಿಂಟಾಲ್ ಸಕ್ಕರೆ ಉತ್ಪಾದಿಸಿದ್ದ ಇವರು ರೈತರಲ್ಲಿ ಒಂದಿಷ್ಟು ವಿಶ್ವಾಸ ಹುಟ್ಟಿಸಿದ್ದರು; ರೈತರಿಗೆ ಬೇಕಾದಷ್ಟು ಅಶ್ವಾಸನೆ ನೀಡಿ ಕಬ್ಬು ಬೆಳೆಯುವಂತೆ ಹುರಿದುಂಬಿಸಿದ್ದರು. ಇವರ ಮಾತನ್ನು ನಂಬಿದ ರೈತರು ಸಾಲಸೋಲ ಮಾಡಿ ಕಬ್ಬು ಬೆಳೆದರೆ ಈಗ ಫ್ಯಾಕ್ಟರಿಯನ್ನು ಮುಚ್ಚಿ ರಾತ್ರೋರಾತ್ರಿ ಪರಾರಿಯಾಗಿದ್ದಾರೆ. ಹೀಗಾಗಿ ರೈತರು ತಮ್ಮ ಟ್ರ್ಯಾಕ್ಟರ್, ಲಾರಿ, ಎತ್ತಿನ ಬಂಡಿ ಕಟ್ಟಿಕೊಂಡು ಬಂದು ಫ್ಯಾಕ್ಟರಿ ಮುಂದೆ ಗೋಳೋ ಎಂದು ಅಳುತ್ತಿದ್ದಾರೆ. ರೈತ-ಕಾರ್ಮಿಕರ ಹಿತವೇ ತನ್ನ ಮೊದಲ ಗುರಿ ಎಂದು ಕಂಡಕಂಡಲ್ಲಿ ಬೊಗಳುವ ಸಚಿವ ಉದಾಸಿ ಮತ್ತವರ ಚೇಲಾದಂತಿರುವ ಆಡಳಿತ ಮಂಡಳಿ ಕದ್ದು ಸಕ್ಕರೆ ತಿಂದು ಗೂಡು ಸೇರಿಕೊಂಡಿದ್ದಾರೆ.


ಜಿಲ್ಲೆಯ 5 ಚೆಡ್ಡಿ ಶಾಸಕ-ಮಂತ್ರಿಗಳಂತೂ "ನಾನು ರೈತ, ನಮ್ಮಪ್ಪ ರೈತ, ನಮ್ಮ ಅಜ್ಜ ರೈತ, ನಾವೆಲ್ಲ ರೈತರ ಪರವಾಗಿಯೇ ಇದ್ದೇವೆ" ಎಂದು ಕಂಡಕಂಡಲ್ಲಿ ಬಾಯಿಚಪಲ ತೀರಿಸಿಕೊಂಡರೇ ಹೊರತು ರೈತರಿಗೆ ಮೋಸ ಮಾಡುತ್ತಿದ್ದ ಶುಗರ್ಸ್ ಫ್ಯಾಕ್ಟರಿಗಳ ಬಗ್ಗೆ ತುಟಿ ಎರಡು ಮಾಡಲಿಲ್ಲ; ರೈತರು ಬೆಳೆದ ಎಲ್ಲಾ ಕಬ್ಬನ್ನು ನ್ಯಾಯಯುತ ಬೆಲೆಯಲ್ಲಿ ಖರೀದಿಸಿ ಆ ನಂತರ ಖಾಲಿ ಮಾಡಿ ಎಂದು ಯಾವೊಬ್ಬ ರಾಜಕಾರಣಿಯೂ ಹೇಳಲಿಲ್ಲ.

ಹೇಳಿದ್ದೇ ರೇಟು, ಮಾಡಿದ್ದೇ ರೂಲ್ಸು

ಹಾವೇರಿಗೆ ಕಾಲಿಟ್ಟ ಹೊಸದರಲ್ಲಿ ರೇಣುಕಾ ಶುಗರ್ಸ್‌ನವರು ಪ್ರತಿ ಟನ್‌ಗೆ 1050 ರೂಪಾಯಿಗಳಂತೆ ರೈತರಿಂದ ಕಬ್ಬು ಖರೀದಿಗಿಳಿದು ರೈತರಲ್ಲಿ ಹೊಸ ಆಶಾಭಾವನೆಯನ್ನು ಸೃಷ್ಟಿಸಿದ್ದರು. ಯಾವಾಗ ರೈತರು ಹೆಚ್ಚೆಚ್ಚು ಕಬ್ಬು ತರಲಾರಂಭಿಸಿದರೋ ನಿಧಾನವಾಗಿ ಅಧ್ಯಕ್ಷ ಬೆಲ್ಲದ್‌ನೊಂದಿಗೆ ಕೈಮಿಲಾಯಿಸಿ ಬೇಕಾಬಿಟ್ಟಿ ರೇಟು ಫಿಕ್ಸ್ ಮಾಡಲಾರಂಭಿಸಿದರು. ಮೊದಮೊದಲು ಕಬ್ಬಿನ ರೇಟನ್ನು 1000ಕ್ಕೆ ಇಳಿಸಿದರು. ನಂತರ 950ಕ್ಕೆ, ಆಮೇಲೆ 750ಕ್ಕೆ ಕೊನೆಗೆ 600ಕ್ಕೆ ಇಳಿಸಿ ರೈತರನ್ನು ವ್ಯವಸ್ಥಿತವಾಗಿ ಸುಲಿಯಲಾರಂಭಿಸಿದರು. ಈ ರೀತಿ ಬೇಕಾಬಿಟ್ಟಿಯಾಗಿ ಬೆಲೆ ಇಳಿಸುವುದನ್ನು ಕೆಲವು ರೈತರು ಪ್ರತಿಭಟಿಸಿದಾಗ, "ಬೇಕಾದರೆ ಕೊಡಿ, ಬೇಡಾಂದ್ರೆ ನಿಮ್ಮ ಕಬ್ಬಿನ ಹೊಲಕ್ಕೆ ಬೆಂಕಿ ಹಾಕಿ" ಎಂದು ಧಿಮಾಕಿನಿಂದ ಬಹಿರಂಗವಾಗಿ ಬೆದರಿಸಲಾಂಭಿಸಿದರು. ಜಿಲ್ಲೆಯ ಸಚಿವ-ಶಾಸಕರಿಗೆಲ್ಲ ರೇಣುಕಾ ಶುಗರ್ಸ್‌ನವರು ಚೆನ್ನಾಗಿ ಸಕ್ಕರೆ ತಿನ್ನಿಸಿದ್ದ ಕಾರಣ ಅವರ್‍ಯಾರೂ ರೈತರ ಬವಣೆಯನ್ನು ಕೇಳುವ ಗೋಜಿಗೆ ಹೋಗಲೇ ಇಲ್ಲ. ಬೇರೆ ದಾರಿ ಕಾಣದೆ ರೈತರು ಬಡಿಗಾಸಿಗೆ ತಮ್ಮ ಕಬ್ಬು ಮಾರಿ ನಷ್ಟ ಅನುಭವಿಸಿದರು. ಆದರೆ ಈಗ ಲಕ್ಷಾಂತರ ಮೆಟ್ರಿಕ್ ಟನ್‌ನಷ್ಟು ಕಬ್ಬು ಮತ್ತೆ ಬೆಳೆದುನಿಂತಿದೆ. ಕೇವಲ 1.60 ಲಕ್ಷ ಮೆಟ್ರಿಕ್ ಟನ್‌ನಷ್ಟು ಮಾತ್ರ ಅರೆದಿರುವ ರೇಣುಕಾ ಶುಗರ್ಸ್ ಗಂಟು ಮೂಟೆ ಕಟ್ಟಿಕೊಂಡು ಓಡಿಹೋಗಿದೆ. ಉಳಿದ ಕಬ್ಬನ್ನು ಏನು ಮಾಡಬೇಕು ಎಂಬ ಬಗ್ಗೆ ಜಿಲ್ಲೆಯ ಶಾಸಕ-ಮಂತ್ರಿಗಳ್ಯಾರೂ ಮಾತನಾಡುತ್ತಿಲ್ಲ. ಅದರಲ್ಲೂ ರೇಣುಕಾ ಶುಗರ್ಸ್‌ನವರ ಸಕ್ಕರೆ ತಿಂದು ಋಣ ಇಟ್ಟುಕೊಂಡಿರುವ ಜಿಲ್ಲೆಯ 5 ಚೆಡ್ಡಿ ಶಾಸಕ-ಮಂತ್ರಿಗಳಂತೂ "ನಾನು ರೈತ, ನಮ್ಮಪ್ಪ ರೈತ, ನಮ್ಮ ಅಜ್ಜ ರೈತ, ನಾವೆಲ್ಲ ರೈತರ ಪರವಾಗಿಯೇ ಇದ್ದೇವೆ" ಎಂದು ಕಂಡಕಂಡಲ್ಲಿ ಬಾಯಿಚಪಲ ತೀರಿಸಿಕೊಂಡರೇ ಹೊರತು ರೈತರಿಗೆ ಮೋಸ ಮಾಡುತ್ತಿದ್ದ ರೇಣುಕಾ ಶುಗರ್ಸ್ ಬಗ್ಗೆ ತುಟಿ ಎರಡು ಮಾಡಲಿಲ್ಲ; ಜಾಗ ಖಾಲಿ ಮಾಡುವುದಾದರೆ ರೈತರು ಬೆಳೆದ ಎಲ್ಲಾ ಕಬ್ಬನ್ನು ನ್ಯಾಯಯುತ ಬೆಲೆಯಲ್ಲಿ ಖರೀದಿಸಿ ಆ ನಂತರ ಖಾಲಿ ಮಾಡಿ ಎಂದು ಯಾವೊಬ್ಬ ರಾಜಕಾರಣಿಯೂ ಹೇಳಲಿಲ್ಲ. ಹೋಗಲಿ ಇವರಂತೂ ಏನೂ ಮಾಡಲಿಲ್ಲ. ಆದರೆ ಜಿಲ್ಲಾಧಿಕಾರಿ ಆದಿತ್ಯ ಆಮ್ಲಾನ್ ಬಿಸ್ವಾಸ್‌ರವರು ಕಬ್ಬು ಅರೆಯುವುದನ್ನು ನಿಲ್ಲಿಸದಂತೆ ರೇಣುಕಾ ಶುಗರ್ಸ್‌ನವರಿಗೆ ಆದೇಶ ಹೊರಡಿಸಿ ತಾಕೀತು ಮಾಡಿದ್ದರು. ಆದರೆ ಉಸ್ತುವಾರಿ ಮಂತ್ರಿಯನ್ನೂ ಒಳಗೊಂಡಂತೆ ಜಿಲ್ಲೆಯ ಎಲ್ಲ ರಾಜಕಾರಣಿಗಳು, ಮಂತ್ರಿ-ಶಾಸಕ ಮಹಾನುಭಾವರು ರೇಣುಕಾ ಶುಗರ್ಸ್‌ನವರ ಪರವಾಗಿಯೇ ನಿಂತದ್ದರಿಂದ ಈ ಆದೇಶ ಜಾರಿಗೆ ಬರಲೇ ಇಲ್ಲ.




ದಿವಾಳಿಯಾಗಿರುವ ವರದಾ ಶುಗರ್ಸ್ ಫ್ಯಾಕ್ಟರಿ



ಯಾರೂ ಕೊಳ್ಳದೆ, ಒಣಗಿ ಹೋಗುತ್ತಿರುವ ಕಬ್ಬಿನೊಂದಿಗೆ ರೈತ

ಉದಾಸಿ-ಬೆಲ್ಲದ್‌ಗೆ 60 ಲಕ್ಷ ಲಂಚ

ಸುಮಾರು ಎರಡು ದಶಕಗಳ ಕಾಲ ವರದಾ ಶುಗರ್ಸ್‌ನ್ನು ಆಳಿದ ಹಾಲಿ ಮಂತ್ರಿ ಸಿ.ಎಂ.ಉದಾಸಿ ಕಾರ್ಖಾನೆಯನ್ನಂತೂ ಉದ್ಧಾರ ಮಾಡಲಿಲ್ಲ, ಬದಲಿಗೆ ಲಕ್ಷಾಂತರ ರೂಪಾಯಿ ಸಾಲದ ಗಿಫ್ಟನ್ನೇ ಕೊಟ್ಟಿದ್ದಾನೆ. ಅಲ್ಲದೆ, ಕಳೆದ ವರ್ಷ ಈ ಕಾರ್ಖಾನೆಯನ್ನು ಗುತ್ತಿಗೆ ಪಡೆದ ರೇಣುಕಾ ಶುಗರ್ಸ್‌ನೊಂದಿಗೆ ಒಳಒಪ್ಪಂದ ಮಾಡಿಕೊಂಡ ಈತ ಆಡಳಿತ ಮಂಡಳಿಯ ಅಧ್ಯಕ್ಷ ಸದಾಶಿವ ಬೆಲ್ಲದ್‌ನೊಂದಿಗೆ ಸೇರಿ ಅನಾಮತ್ತು 60 ಲಕ್ಷವನ್ನು ತಿಂದು ತೇಗಿದ್ದಾನೆ; ಖರೀದಿಸಿದ ಪ್ರತಿ ಟನ್ ಕಬ್ಬಿಗೆ 50 ರೂಪಾಯಿಯಂತೆ 1.60 ಲಕ್ಷ ಮೆಟ್ರಿಕ್ ಟನ್ ಕಬ್ಬಿನ ಹಣ ಉದಾಸಿಯ ಅಂಗಳಕ್ಕೆ ಬಿದ್ದಿದೆ ಎಂಬ ಪುಕಾರುಗಳಿವೆ.



ಶಾಸಕ ಶಿವರಾಜ ಸಜ್ಜನ

1996ರಲ್ಲಿ ಕಾರ್ಖಾನೆಯ ಅಧ್ಯಕ್ಷನಾಗಿದ್ದ ಉದಾಸಿ ಹಾಗು ಉಪಾಧ್ಯಕ್ಷನಾಗಿದ್ದ ಆಗಿನ ಹಾವೇರಿ ಶಾಸಕ ಶಿವರಾಜ್ ಸಜ್ಜನ ತಮ್ಮ ಆಡಳಿತ ಅವಧಿಯಲ್ಲಿ ಮಾಡಿದ ಮೋಜಿಗೆ ಕಾರ್ಖಾನೆಯ ಲೆಕ್ಕಕ್ಕೆ ಹತ್ತು ಕೋಟಿ ರೂಪಾಯಿ ಸಾಲ ಅಮರಿಕೊಂಡಿತು. ಈ ಸಾಲದ ಪರಂಪರೆ ಯಶಸ್ವಿಯಾಗಿ ಮುಂದುವರೆದು ಈಗದು 35 ಕೋಟಿಯಾಗಿದೆ. ಒಟ್ಟಿನಲ್ಲಿ ತಮ್ಮ ಅಧಿಕಾರಾವಧಿ ಮುಗಿಯುವುದರೊಳಗಾಗಿ ಉದಾಸಿ ಅಂಡ್ ಗ್ಯಾಂಗ್ ಅನಾಮತ್ತು 10 ಕೋಟಿ ಬಾಚಿಕೊಂಡು ಬೆಚ್ಚಗಾಗಿದ್ದಾರೆ. ಈ ಕಳ್ಳರ ಲೂಟಿಯ ಬಗ್ಗೆ ಹಿಂದಿನ ಕೃಷ್ಣ ಸರ್ಕಾರ ತನಿಖೆ ನಡೆಸಿತ್ತು. ಆದರೆ ಇದಕ್ಕೆ ಈ ಕಳ್ಳರು ಹೈಕೋರ್ಟಿನ ತಡೆಯಾಜ್ಞೆ ತಂದಿದ್ದರು. ಮಂತ್ರಿ ಉದಾಸಿ ಮತ್ತು ಶಾಸಕ ಸಜ್ಜನ ಯಾವತ್ತು ಕಂಬಿ ಎಣಿಸಲು ಶುರು ಮಾಡುತ್ತಾರೋ ಎಂದು ಜನ ನಿರೀಕ್ಷಿಸುತ್ತಿದ್ದಂತೆ ಮುಂಡರಗಿ ಶಾಸಕ ಹಿಂದಿನ ಸಹಕಾರಿ ಮಂತ್ರಿ ಎಸ್.ಎಸ್. ಪಾಟೀಲ್‌ರ ನೆರವಿನಿಂದ ಹೇಗೋ ಬಚಾವಾಗಿಬಿಟ್ಟರು.

ಶಾಶ್ವತ ಗುತ್ತಿಗೆಗೆ ಹುನ್ನಾರ

ತನ್ನನ್ನು ಚುನಾವಣೆಯಲ್ಲಿ ಆರಿಸಿ ಕಳಿಸಿದ ರೈತರ ಮೇಲೇ ಉದಾಸಿಗೆ ಅದೆಷ್ಟು ವರ್ಷಗಳ ದ್ವೇಷವೋ ಗೊತ್ತಿಲ್ಲ. ಮಂತ್ರಿಯಾಗಿ ಈಗ ಅದನ್ನು ತೀರಿಸಿಕೊಳ್ಳುತ್ತಿದ್ದಾನೆ. ಈಗಾಗಲೇ ವರದಾ ಶುಗರ್ಸ್‌ನ್ನು ಮನಬಂದಂತೆ ಕೊಳ್ಳೆ ಹೊಡೆದದ್ದು ಸಾಕಾಗಿಲ್ಲವೋ ಏನೋ, ಈಗ ಅದನ್ನು ಶಾಶ್ವತವಾಗಿ 30 ವರ್ಷಗಳಿಗೆ ಗುತ್ತಿಗೆ ಕೊಡಲು ಸರ್ಕಾರದ ಮಟ್ಟದಲ್ಲಿ ಮಾತುಕತೆ ಮಾಡಲು ಮುಂದಾಗುತ್ತಿದ್ದಾನೆ. ಈ ಗುತ್ತಿಗೆಯನ್ನು ಕೊಡುತ್ತಿರುವುದು ತನಗೆ ಬೇಕಾದವರೊಬ್ಬರಿಗೆ. ಇವನ ಕುತಂತ್ರ ಮತ್ತು ಕಮಾಯಿ ರಾಜಕಾರಣದಿಂದ ಈಗಾಗಲೇ ತತ್ತರಿಸಿಹೋಗಿರುವ ವರದಾ ಶುಗರ್ಸ್ ಮತ್ತು ಕಬ್ಬು ಬೆಳೆಗಾರರು ತಮಗೆ ಇನ್ನಾವ ಗತಿ ಕಾದಿದೆಯೋ ಎಂಬ ಆತಂಕಕ್ಕೆ ಒಳಗಾಗಿದ್ದರೆ, ಮತ್ತೆ ಕೆಲವರು ಇವನಿಗೆ ಮುಂದಿನ ಚುನಾವಣೆಯಲ್ಲಿ ಸರಿಯಾದ ಪಾಠ ಕಲಿಸಲು ಈಗಲೇ ತಯಾರಿ ನಡೆಸಿದ್ದಾರೆ.

ಈ ಹಿಂದೆ ಧರಂಸಿಂಗ್ ಸರ್ಕಾರ ಪಟ್ಟಿ ಮಾಡಿದ ರಾಜ್ಯದ 4 ರೋಗಗ್ರಸ್ತ ಉದ್ಯಮಗಳಲ್ಲಿ ವರದ ಶುಗರ್ಸ್ ಕೂಡ ಇತ್ತು. ಇದನ್ನು ತಮಿಳುನಾಡಿನ ಅಂಬಿಕಾ ಶುಗರ್ಸ್ ಎಂಬ ಕಂಪೆನಿಯು 7 ವರ್ಷಕ್ಕೆ 20 ಕೋಟಿ ರೂಪಾಯಿಗಳಿಗೆ ಗುತ್ತಿಗೆ ಪಡೆಯಿತು. ನಂತರ ದುರಸ್ತಿಗಾಗಿ 55 ಲಕ್ಷ ರೂಪಾಯಿಗಳನ್ನು ಸುರಿದು ಕಬ್ಬು ಅರೆಯುವ ತಯಾರಿ ನಡೆಸಿದ್ದಾಗ ಇದೇ ಬೇತಾಳ ಉದಾಸಿ ಮತ್ತವರ ಚೆಡ್ಡಿ ಪಡೆ ಬಿಜೆಪಿಯ ಮೂಲಕ ಹೈಕೋರ್ಟಿನಲ್ಲಿ ದಾವೆ ಹೂಡಿ ಅಂಬಿಕಾ ಶುಗರ್ಸ್‌ನನ್ನು ಜಾಗ ಖಾಲಿ ಮಾಡಿಸಿದ್ದರು. ಉದಾಸಿ ಮತ್ತು ಬಿಜೆಪಿಯ ಈ ಕುತಂತ್ರದ ವಿರುದ್ಧ ಕಾರ್ಮಿಕರು ಮತ್ತು ರೈತರು ತಿರುಗಿ ಬಿದ್ದದ್ದೂ ಉಂಟು. ಈಗಲೂ ಅಂಬಿಕಾ ಶುಗರ್ಸ್‌ನವರು ಮತ್ತೆ ಕಬ್ಬು ಅರೆಯುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ಉದಾಸಿಗೆ ಅವರು ಬೇಡ. ಯಾಕೆಂದರೆ ವರದಾ ಶುಗರ್ಸ್‌ನ್ನು ಪರ್ಮನೆಂಟಾಗಿ ತನಗೆ ಬೇಕಾದವರೊಬ್ಬರಿಗೆ ಗುತ್ತಿಗೆ ನೀಡಿ ತಾನು ಪರ್ಮನೆಂಟಾಗಿ ಮೇಯುವ ಯೋಜನೆ ಉದಾಸಿಗಿದೆ.

ಒಟ್ಟಿನಲ್ಲಿ ಉದಾಸಿಯ ಆಟ ಹೀಗೇ ಮುಂದುವರಿದರೆ ರೈತನ ಸಿಟ್ಟು ರಟ್ಟೆಗೆ ಬಂದು ಅವನನ್ನು ಪರ್ಮನೆಂಟಾಗಿ ಹಾವೇರಿಯಿಂದ ಓಡಿಸುವುದರಲ್ಲಿ ಯಾವುದೇ ಅನುಮಾನ ಇಲ್ಲ.

-ಹುರುಳಿಕುಪ್ಪಿ ವಿನಯ



ಗತಿಗೆಟ್ಟ ಡೈರೆಕ್ಟರ್ ಹಿಂದೊಮ್ಮೆ ತನ್ನದೇ ಹೆಸರಿನ 'ವೆಂಕಟ್' ಅನ್ನೋ ಚಿತ್ರವೊಂದಕ್ಕೆ ಮುಹೂರ್ತ ಮಾಡಿ ಕೈಬಿಟ್ಟಿದ್ದ. ನಯಾಪೈಸೆ ಕೂಡ ಸಂಭಾವನೆ ಅಂತ ಪಡೆಯದೇ ಅದ್ಭುತ ಸಿನಿಮಾ ಮಾಡಿಕೊಡ್ತೀನಿ ಅಂದ. ಅದನ್ನು ನಂಬಿದ ಹೇಮಂತ್ ಸುವರ್ಣ ಬರೇ ಇಪ್ಪತ್ತೈದು ಲಕ್ಷದಲ್ಲಿ ತಾನು ಸಿನಿಮಾ ಪ್ರೊಡ್ಯೂಸರ್ ಆಗಿಬಿಡುತ್ತೇನೆಂದು ಉಬ್ಬಿಹೋದ. ಸಂಬಂಧಿಗಳು ಸ್ನೇಹಿತರಿಂದೆಲ್ಲ ಸಾಲ ಎತ್ತಿದ. ವೆಂಕಟ್ ಕತೆ, ಚಿತ್ರಕಥೆ, ಡೈಲಾಗು, ಸಾಂಗು ಎಲ್ಲಾ ತಂದೇ ಎಂದ. ಇಷ್ಟಾದ ಮೇಲೆ ಸಿನಿಮಾಕ್ಕೊಬ್ಬ ಹೀರೋಯಿನ್ ಬೇಕಲ್ಲ; ಅದಕ್ಕೆ ಸಿಕ್ಕವಳೇ ಸುಳ್ಳಿನ ರಾಣಿ ದಾಮಿನಿ.

ಕಳ್ಳರ ನಡುವೆ ಸುಳ್ಳಿನ ರಾಣಿ


ಗತಿಗೆಟ್ಟ ಡೈರೆಕ್ಟರ್. ಮತಿಗೆಟ್ಟ ಪ್ರೊಡ್ಯೂಸರ್. ಪೋರ್ಕಿಗಳ ಬಗ್ಗೆಯೇ ಸಿನಿಮಾ. ಇಂಥವರ ಮಧ್ಯೆ ದಾಮಿನಿ!

ಕಾಂಬಿನೇಷನ್ನೇ ಹಾಗಿರುವಾಗ ತರ್ಲೆ-ತಾಪತ್ರಯ ತಾನೇ ಬಾರದೆ ಇರುತ್ತಾ?

ಗಾಂಧಿನಗರದ ಯಾರನ್ನೇ ಕೇಳಿದರೂ 'ಸ್ವತಂತ್ರ ಪಾಳ್ಯ'ದ ರಾದ್ಧಾಂತದ ಬಗ್ಗೆ ಇದಕ್ಕಿಂತ ಒಳ್ಳೇ ಮಾತುಗಳೇ ಬರುವುದಿಲ್ಲ. ದಾಮಿನಿ ಶೂಟಿಂಗಿಗೆ ಬರದೇ ಕಾಟ ಕೊಡ್ತಿದ್ದಾಳೆ, ಲಕ್ಷಾಂತರ ರೂಪಾಯಿ ಲಾಸ್ ಆಗೋಯ್ತು ಎಂದು ಅದರ ಡೈರೆಕ್ಟರ್ ವೆಂಕಟ್ ಪ್ರೆಸ್‌ಮೀಟ್ ಕರೆದು ಕುಯ್ಯುತ್ತಿದ್ದರೆ, ಕಿಡಿಗೇಡಿ ವರದಿಗಾರನೊಬ್ಬ ಕೇಳಿಯೇಬಿಟ್ಟ-

"ಏನು? ದಾಮಿನಿ ಹೀರೋಯಿನ್ನಾ? ಹಾಗಾದ್ರೆ ಹೀರೋ ನೀನೇನಾ?"

"ನಾನಲ್ಲ; ಇವ್ನು" ಎಂದು ಪಕ್ಕದಲ್ಲೇ ನಿಂತಿದ್ದ ಗೆಂಡೆತಿಮ್ಮನಂಥ ವನೊಬ್ಬನನ್ನು ವೆಂಕಟ್ ತೋರಿಸುತ್ತಿದ್ದರೆ ಕೇಳಿದವರೆಲ್ಲ ನಕ್ಕಿದ್ದೇ ನಕ್ಕಿದ್ದು.



ಗತಿಗೆಟ್ಟ ಡೈರೆಕ್ಟರ್ ವೆಂಕಟ್

ಇದಾಗಿ ಎರಡನೇ ದಿನಕ್ಕೆ ದಾಮಿನಿಯೇ ಖುದ್ದಾಗಿ ಗ್ರೀನ್‌ಹೌಸ್‌ಗೆ ಬಂದು 'ಸ್ವತಂತ್ರಪಾಳ್ಯ'ದ ಫೈನಾನ್ಶಿಯರ್ ಶಂಕರ್ ಒಬ್ಬ ರೌಡಿ. ನನಗೆ ಬೆದರಿಕೆ ಹಾಕಿದ್ದಾನೆ. ಆತನ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ಕೊಡ್ತೀನಿ ಎಂದರೆ ಮತ್ತೊಬ್ಬ ರಿಪೋರ್ಟರ್ "ಏನು? ನಿಮಗೇ ಆವಾಜ್ ಹಾಕದ್ನಾ? ಸುಮ್ನೆ ಬಿಟ್ರಾ?" ಎಂದುಬಿಟ್ಟ!

ಅಷ್ಟಕ್ಕೂ 'ಸ್ವತಂತ್ರಪಾಳ್ಯ' ಅನ್ನೋದು ಒಂದು ಸಿನಿಮಾನಾ? ಸಿನಿಮಾಕ್ಕಿರಬೇಕಾದ ಏನಾದರು ಯೋಗ್ಯತೆ ಅದಕ್ಕಿದೆಯಾ ಅಂದರೆ ಅದೇ ಮತ್ತೊಂದು ಕತೆಯಾಗುತ್ತದೆ.

ರಾ.ಸೋ

ಹಿಂದೆ 'ಸೌಂದರ್ಯ' ಎಂಬ ಚಿತ್ರದ ಶೂಟಿಂಗಿಗೆಂದು ಶ್ರೇಯ ಎಂಬ ಬಾಲನಟಿಯನ್ನು ಹೇಮಂತ್ ಸುವರ್ಣ ಎಂಬಾತ ಕರೆತರುತ್ತಿದ್ದ. ಆ ಮಗುವಿನ ತಾಯಿ ಹೇಮಂತನಿಗೆ ಅಕ್ಕನಾಗಬೇಕು. ಅದು ಬಿಟ್ಟರೆ ಹೇಮಂತನಿಗೆ ಸಿನಿಮಾದ ಓನಾಮ ಗೊತ್ತಿಲ್ಲ. ಅಲ್ಲಿಗೆ ಶೂಟಿಂಗ್ ನೋಡಲೆಂದು ವೆಂಕಟ್ ಎಂಬ ಪೋರ್ಕಿಯೂ ಬರುತ್ತಿದ್ದ. ಇಬ್ಬರೂ ಮುಖಾಮುಖಿಯಾಗಲೇಬೇಕಲ್ಲ!

ವೆಂಕಟ್ ತಾನು ಫಿಲ್ಮ್ ಡೈರೆಕ್ಟರ್ ಅಂದ. ಹೇಮಂತ್ ಹೌದಾ? ಎಂದ. ಅಷ್ಟೇ, 'ಸ್ವತಂತ್ರಪಾಳ್ಯ' ಎಂಬ ತಮಿಳು ಕೊಂಪೆಯೇ ಚಿತ್ರದ ಹೆಸರಾಗಿ ಹೋಗಿತ್ತು. ಹಕೀಕತ್ತೆಂದರೆ ಈ ವೆಂಕಟ್‌ಗೆ ಸ್ಕ್ರಿಪ್ಟು, ಕ್ಲಾಪು, ಆಕ್ಷನ್ನು, ಆಂಗಲ್ಲು ಏನೂ ಗೊತ್ತಿಲ್ಲ. ಯಾರಾದರೂ ಡೈರೆಕ್ಟರ್ ಬಳಿ ಅಸಿಸ್ಟೆಂಟ್ ಆಗೋ ಮಾತಿರಲಿ, ಕನಿಷ್ಠ ಶೂಟಿಂಗ್‌ನಲ್ಲಿ ಕಾಫಿ-ಟೀ ಸಪ್ಲೈ ಮಾಡಿಕೊಂಡಿದ್ದ ಅನುಭವವೂ ಇಲ್ಲ!

ಅಂಥವನು ಹಿಂದೊಮ್ಮೆ ತನ್ನದೇ ಹೆಸರಿನ 'ವೆಂಕಟ್' ಅನ್ನೋ ಚಿತ್ರವೊಂದಕ್ಕೆ ಮುಹೂರ್ತ ಮಾಡಿ ಕೈಬಿಟ್ಟಿದ್ದ. ನಯಾಪೈಸೆ ಕೂಡ ಸಂಭಾವನೆ ಅಂತ ಪಡೆಯದೇ ಅದ್ಭುತ ಸಿನಿಮಾ ಮಾಡಿಕೊಡ್ತೀನಿ ಅಂದ. ಅದನ್ನು ನಂಬಿದ ಹೇಮಂತ್ ಸುವರ್ಣ ಬರೇ 25 ಲಕ್ಷದಲ್ಲಿ ತಾನು ಸಿನಿಮಾ ಪ್ರೊಡ್ಯೂಸರ್ ಆಗಿಬಿಡುತ್ತೇನೆಂದು ಉಬ್ಬಿಹೋದ. ಸಂಬಂಧಿಗಳು ಸ್ನೇಹಿತರಿಂದೆಲ್ಲ ಸಾಲ ಎತ್ತಿದ. ವೆಂಕಟ್ ಕತೆ, ಚಿತ್ರಕಥೆ, ಡೈಲಾಗು, ಸಾಂಗು ಎಲ್ಲಾ ತಂದೇ ಎಂದ. ಇಷ್ಟಾದ ಮೇಲೆ ಸಿನಿಮಾಕ್ಕೊಬ್ಬ ಹೀರೋಯಿನ್ ಬೇಕಲ್ಲ; ಅದಕ್ಕೆ ಸಿಕ್ಕವಳೇ ದಾಮಿನಿ.


ತಮಾಷೆಯೆಂದರೆ ಹೀರೋ ಯಾರು? ಅಂತ ದಾಮಿನಿ ಕೇಳಿದ್ದೇ ವೆಂಕಟ್ ಕುಳ್ಳಗೆ, ದಪ್ಪಗೆ, ಉದ್ದುದ್ದ ಜಡೆ ಬಿಟ್ಟುಕೊಂಡಿದ್ದವನೊಬ್ಬನನ್ನು ತೋರಿಸಿ ಇವನೇ ಹೀರೋ ಎಂದ. ಆತನೇ ಅರ್ಜುನ್. ಈತನ ತಂದೆ ನಾಟಕ ಆಡಿಕೊಂಡಿದ್ದ ಎಂಬುದು ಬಿಟ್ಟರೆ ಅರ್ಜುನ್‌ಗೆ ಹೀರೋ ಆಗಲು ಬೇಕಾದ ಹೈಟು, ಫೇಸು, ವಾಯ್ಸು ಏನೇನೂ ಇಲ್ಲ. ಇದ್ದದ್ದು ಕೇಜಿಗಟ್ಟಲೇ ವೇಯ್ಟು ಮಾತ್ರ.

'ಅರೇ, ಇವ್ನು ಹೀರೋ ಆಗೋದಾದ್ರೆ ಇವನಿಗಿಂತ ನಂ ಜಿಮ್ ಸೋಮನೇ ಹೀರೋ ಆಗ್ಬಹುದಲ್ವಾ? ನೋಡಿ ಮತ್ತೇ....' ಎಂದುಬಿಟ್ಟಳು ದಾಮಿನಿ. ಇವ್ನೂ ಜಿಮ್ಮಿಗೆ ಹೋಗಿಯೇ ಹೀಗಾಗವ್ನೆ ಎಂದು ಗಂಡೆ ಅರ್ಜುನನ್ನು ತೋರಿಸಿ ಬಿಟ್ಟ ವೆಂಕಟ್.



ಫೈನಾನ್ಶಿಯರ್ ಶಂಕರ್

ಪೋರ್ಕಿಗಳ ಕತೆ. ಪರೋಡಿಯೇ ಹೀರೋ. ಮಾತು ಮಾತಿಗೆ ಮಚ್ಚು ಕೊಚ್ಚು, ಇದು 'ಸ್ವತಂತ್ರಪಾಳ್ಯ'ದ ಕತೆ. ಮುಹೂರ್ತ ಮುಗಿದು ಶೂಟಿಂಗ್ ಶುರುವಾಗುತ್ತಿದ್ದಂತೆ ಡೈರೆಕ್ಟರ್ ವೆಂಕಟನ ಅಸಲೀ ರೂಪ ಬಯಲಾಯಿತು. ಪ್ರಾರಂಭದಲ್ಲಿ ದಾಮಿನಿಗೆಂದು 70 ಸಾವಿರ ರೂಪಾಯಿಯ ಸಂಭಾವನೆ ನಿಗದಿಗೊಳಿಸಿದ್ದ. ಐವತ್ತು ಸಾವಿರವನ್ನು ಅಡ್ವಾನ್ಸಾಗಿ ಕೊಟ್ಟಿದ್ದ. ಆದರೆ ಅದಕ್ಕೊಂದು ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂಬುದು ಡೈರೆಕ್ಟರ್ ವೆಂಕಟನಿಗೂ ಗೊತ್ತಿಲ್ಲ. ಪ್ರೊಡ್ಯೂಸರ್ ಹೇಮಂತ್ ಸುವರ್ಣನಿಗಂತೂ ಗೊತ್ತೇ ಇಲ್ಲ.



ನಿರ್ಮಾಪಕ ಹೇಮಂತ್ ಸುವರ್ಣ

ಅಂತೂ ಇಂತೂ ಅರ್ಧ ಶೂಟಿಂಗ್ ಮುಗಿಯುವ ಹೊತ್ತಿಗೆ ಡೈರೆಕ್ಟರ್ ವೆಂಕಟ್ ನಿರ್ಮಾಪಕ ಸುವರ್ಣನ ಅರ್ಧ ತಲೆ ಬೋಳಿಸಿಬಿಟ್ಟ. ಪ್ರಾರಂಭದಲ್ಲಿ 25 ಲಕ್ಷಕ್ಕೆ ಸಿನಿಮಾ ಮುಗಿಸ್ತೀನಿ ಎಂದಿದ್ದ ವೆಂಕಟ್ ಅರ್ಧ ರೀಲು ಸುತ್ತುವ ಹೊತ್ತಿಗೆ ಸುವರ್ಣ ತನ್ನ ಡಾಲರ್ಸ್ ಕಾಲನಿಯ ಮನೆ ಮಾರಿ ಹಾಕಿದ್ದ. ಸಿನಿಮಾ ಮುಗಿಯದೇ ಹಾಕಿದ ದುಡ್ಡು ಬರೋಲ್ಲ. ಮುಗಿಸಬೇಕೆಂದರೆ ಮತ್ತೆ ದುಡ್ಡು ಹುಟ್ಟುತ್ತಿಲ್ಲ. ಈ ಹೊತ್ತಿಗಾಗಲೇ ಸ್ನೇಹಿತರು ಸಂಬಂಧಿಕರಿಂದ ದುಡ್ಡೆತ್ತಿ ಹೈರಾಣಾಗಿದ್ದ ಹೇಮಂತ್ ಸುವರ್ಣ ಕೊನೆಕೊನೆಗೆ ಕೈ ಖಾಲಿಯಾಗಿ ಶೂಟಿಂಗನ್ನೇ ನಿಲ್ಲಿಸಿಬಿಟ್ಟ. ಮತ್ತೆ ದುಡ್ಡು ಹುಟ್ಟಿದ್ದು ತೀರ ಇತ್ತೀಚೆಗಾದರೂ ಆ ಹೊತ್ತಿಗಾಗಲೇ ಸಿನಿಮಾ ಶುರುವಾಗಿ ಒಂದೂವರೆ ವರ್ಷವಾಗಿತ್ತು.

ಅಷ್ಟಕ್ಕೂ ಫೈನಾನ್ಶಿಯರ್ ರೂಪದಲ್ಲಿ ವಕ್ಕರಿಸಿದ ಚಾಮರಾಜಪೇಟೆಯ ಶಂಕರ್ ಎಂಬಾತನೇ ಹಳೇ ವಂಚಕ. ಮೂಲತಃ ಮಳವಳ್ಳಿಯವನಾದ ಈತ ಹುಡುಗಿ ಗಲಾಟೆಯಲ್ಲೇ ಊರು ಬಿಟ್ಟು ಚಾಮರಾಜಪೇಟೆಯ ರಾಯನ್ ಸರ್ಕಲ್ಲಿನ ಎಮ್ಮಾರ್ ಟ್ರಾವಲ್ಸ್‌ನಲ್ಲಿ ಡ್ರೈವರ್ ಆಗಿದ್ದ. ಪದೇಪದೇ ಅಮರ್‌ಸಿಂಗ್ ಎಂಬ ಟ್ರಾವೆಲ್ಸ್ ಧಣಿಯನ್ನು ಟ್ರಿಪ್ಪಿಗೆ ಕರೆದೊಯ್ಯುತ್ತಿದ್ದ. ಈ ಅಮರ್‌ಸಿಂಗ್ ಮಾಜಿ ಮುಖ್ಯಮಂತ್ರಿ ಧರ್ಮಸಿಂಗರ ದೂರದ ಸಂಬಂಧಿ. ಮಹಾನ್ ಶೋಕಿಲಾಲ. ಆತನ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡ ಶಂಕರ ಆತನನ್ನು ಕುಡಿತ, ಹೆಣ್ಣಿನ ಚಟಕ್ಕೆ ಬೀಳಿಸಿ ಆತನ ಮುನ್ನೂರು ಕೋಟಿಯ 'ಕೂಡ್ಲಿ ಟ್ರಾವೆಲ್ಸ್' ಅನ್ನೇ ಲಪಟಾಯಿಸಿಬಿಟ್ಟ.


ವಿಕಟವೆಂದರೆ ಮುಂದಾಯಿಸಿದ ಗಣಿ ಆತನ ಬದಲಿಗೆ ಮಾಜಿ ಉಪಮೇಯರ್ ಬಿ.ಎಸ್. ಪುಟ್ಟರಾಜು ಪಾಲಾಯಿತು. ಪುಟ್ರಾಜನ್ನ ಇಷ್ಟರಲ್ಲೇ ಮುಗಿಸ್ಬಿಡ್ತೀನಿ ಅಂತ ರೈಲುಬಿಡುತ್ತಿದ್ದ. ಕಮೀಷನ ಕೊರಗಿಗೆ ಬಿದ್ದೇ ಅಮರ್‌ಸಿಂಗ್ ಆತ್ಮಹತ್ಯೆ ಮಾಡಿಕೊಂಡ. ಶಂಕರ ತಾನೇ ಟ್ರಾವೆಲ್ಸ್ ಧಣಿ ಎಂದುಕೊಂಡು ತಾನು ಡ್ರೈವರ್ ಆಗಿದ್ದ ಬಿಲ್ಡಿಂಗಿನ ಮಾಲೀಕರ ಮಗಳನ್ನೇ ಪಟಾಯಿಸಿದ. ಮೊದಲೇ ಮದುವೆಯಾಗಿದ್ದ ಹೆಂಡತಿ ಮಕ್ಕಳನ್ನು ಬೀದಿಗೆ ಹಾಕಿದ. ಒಂದಷ್ಟು ದಿನ ತಾನೇ ಸಿನಿಮಾ ಹೀರೋ ಅಂತಲೂ ಬಂಡಲ್ ಬಿಟ್ಟ. ಮೀಟರ್ ಬಡ್ಡಿ ಶುರು ಹಚ್ಚಿಕೊಂಡ.

ಕಂಡಕಂಡವರನ್ನು ಮುಂಡಾಯಿಸಿ ಊರೇಬಿಟ್ಟಿದ್ದ. ಅಂಥವನಿಗೆ 'ಸ್ವತಂತ್ರಪಾಳ್ಯ'ದಂಥ ಸಿನಿಮಾಕ್ಕೆ ಫೈನಾನ್ಸ್ ಮಾಡುವಂತೆ ಗಂಟುಬಿದ್ದವನು ಥಿಲ್ಲರ್ ಮಂಜನ ಅಣ್ಣ ಗುರುಮೂರ್ತಿ. ಅಷ್ಟಕ್ಕೂ ಈ ಶಂಕ್ರ ಫೈನಾನ್ಸ್ ಮಾಡಿದ್ದು ಬರೇ ಐದು ಲಕ್ಷದಷ್ಟಾದರೂ ತಾನೇ ಪ್ರೊಡ್ಯೂಸರ್ ಅಂತ ಪೋಜು ಕೊಟ್ಟ. ಇಲ್ಲಿಗೆ ವಾರದ ಹಿಂದೆ ಏಕಾಏಕಿ ಮತ್ತೆ ಶೂಟಿಂಗ್ ಶುರುವಾಗಿದೆ. ಬರೇ ಐದು ದಿನದ ಶೂಟಿಂಗ್ ಬಾಕಿಯಿತ್ತಾದ್ದರಿಂದ ಏಕಾಏಕಿ ಶೂಟಿಂಗಿಗೆ ಬಾ ಎಂದು ದಾಮಿನಿಗೆ ಫೋನ್ ಮಾಡಿ ಆವಾಜ್ ಹಾಕಿದ್ದಾನೆ.

ಒಳ್ಳೇ ಮಾತಲ್ಲಿ ಕರೆಯಬಹುದಿತ್ತು. ಮೊದಲೇ ನೀರುದ್ಯೋಗಿಯಾಗಿದ್ದ ದಾಮಿನಿ ನಿರಾಕರಿಸುತ್ತಿರಲಿಲ್ಲ. ಆದರೆ ತಾನು ರೌಡಿ ಅನ್ನಿಸಿಕೊಳ್ಳಬೇಕಲ್ಲ, ಪುಕ್ಕಟೆ ಆವಾಜ್ ಹಾಕಿದ್ದಾನೆ. ಅದಕ್ಕೆ ದಾಮಿನಿ ಸೊಪ್ಪು ಹಾಕಿಲ್ಲ. ಏಕೆಂದರೆ ಆಕೆ ಈಗಿರುವುದು ಜಯನಗರದ ಹಳೇ ರೌಡಿ ಕಂ ಲ್ಯಾಂಡ್ ಡೀಲರ್ ಜಿಮ್ ಸೋಮನ ಕೋರಮಂಗಲದ ಫ್ಲಾಟಿನಲ್ಲಿ!

ಇತ್ತಲಿಂದ ದಾಮಿನಿಯ ಹೂಂಕಾರ, ಅತ್ತಲಿಂದ ಹಳೇ ರೌಡಿ ಶಂಕ್ರನ ಠೇಂಕಾರ. ಮಾತಿಗೆ ಮಾತು ಬೆಳೆದಿದೆ. ಅಮ್ಮನ್ ಅಕ್ಕನ್ ಪ್ರಯೋಗವಾಗಿದೆ. ದಾಮಿನಿಯ ತಮ್ಮ ಎಂದುಕೊಂಡು ಜಿಮ್ ಸೋಮನೂ ಆವಾಜು ಬಿಟ್ಟಿದ್ದಾನೆ. ಅದು ಫಿಲ್ಮ್ ಛೇಂಬರಿಗೆ ದೂರು, ಮಹಿಳಾ ಆಯೋಗಕ್ಕೆ ದೂರು, ಪತ್ರಿಕಾಗೋಷ್ಠಿ ಇತ್ಯಾದಿ ಗಬ್ಬೆದ್ದು ಹೋಗಿದೆ. ಮೊದಲೇ ಅಗ್ರಿಮೆಂಟ್ ಮಾಡಿಕೊಳ್ಳದೇ ಹೋದದ್ದು ಪೋರ್ಕಿ ಡೈರೆಕ್ಟರ್ ವೆಂಕಟನ ತಪ್ಪು. ನಟಿ ಎಂಬ ಗೌರವವನ್ನೂ ಕೊಡದೇ ರೌಡಿಗತ್ತಿನಲ್ಲಿ ರೋಫು ಹಾಕಿದ್ದು ಮೀಟರ್ ಬಡ್ಡಿ ಶಂಕರನ ತಪ್ಪು. ಇಂಥ ಪರೋಡಿಗಳನ್ನು ನಂಬಿ ಸಿನಿಮಾಕ್ಕೆ ಕೈ ಹಾಕಿ ಮನೆ ಮಾರಿಕೊಂಡಿದ್ದು ಪ್ರೊಡ್ಯೂಸರ್ ಸುವರ್ಣನ ಮೊದಲ ತಪ್ಪು.

ಇನ್ನು ದಾಮಿನಿ ಸುಮ್ಮನಿರುತ್ತಾಳಾ? ಮೊದಲು ಮಾತಾಡಿದ್ದ ಎಪ್ಪತ್ತು ಸಾವಿರದ ಬದಲಿಗೆ ಈಗ ಒಂದೂವರೆ ಲಕ್ಷ ಕೊಟ್ಟರಷ್ಟೇ ಆಕ್ಟ್ ಮಾಡ್ತೀನಿ ಎಂದಿದ್ದಾಳೆ. ಮಹಿಳಾ ಆಯೋಗಕ್ಕೆ ದೂರು ಕೊಡ್ತೀನಿ ಎನ್ನುತ್ತಾಳೆ. ತಮಾಷೆಯೆಂದರೆ ಇಬ್ಬರನ್ನೂ ಕರೆದು ಸಾ.ರಾ. ಗೋವಿಂದು ಗದರಿಸುತ್ತಿದ್ದಂತೆ, ಇಡೀ ನಾಟಕಕ್ಕೆ ತೆರೆ ಬಿದ್ದಿದೆ. ಸೋಮವಾರದಿಂದ 'ಸ್ವತಂತ್ರಪಾಳ್ಯ'ದ ಶೂಟಿಂಗೂ ಶುರುವಾಗಲಿದೆ. ಇಂಥ ಚಿಲ್ಲರೆ ವಿಷಯಕ್ಕೆ ಇಷ್ಟೆಲ್ಲ ರಂಪ ಬೇಕಿತ್ತಾ? ●




ಗಂಡೆ ತಿಮ್ಮನಂತಿರುವ ಹೀರೋ ಅರ್ಜುನ್

ಜೇಬುಗಳ್ಳರ ದೆಸೆಯಿಂದ ಸಮಾಧಿ ಸೇರಿದ ಜೆಡಿಎಸ್

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದೂ ಇಲ್ಲದಂತಿದ್ದ ಜೆಡಿಎಸ್ ವಸಂತ ಬಂಗೇರಾ ಅಧ್ಯಕ್ಷರಾಗಿ ಇರೋತನಕ ಸಣ್ಣಗೆ ಉಸಿರಾಡುತ್ತಲಾದರೂ ಇತ್ತು. ಯಾವಾಗ ಬಂಗೇರಾ ಪಕ್ಷಕ್ಕೆ ಗುಡ್‌ಬೈ ಹೇಳಿ ಹೊರ ಬಂದರೋ... ಅಂದೇ ಜಿಲ್ಲೆಯ ಮಟ್ಟಿಗೆ ಜೆಡಿಎಸ್ 'ಇಂಟೆನ್ಸಿವ್ ಕೇರ್' ಸೇರಿ ಜೀವನ್ಮರಣ ಹೋರಾಟದಲ್ಲಿತ್ತು. ಉಳ್ಳಾಲ ಉಪಚುನಾವಣೆಯಲ್ಲಿ ಜೆಡಿಎಸ್ ಸ್ಪರ್ಧಿಸದೇ ಇರುತ್ತಿದ್ದರೆ, ಮೂರು ಕಾಸಿನ ಮಾನವಾದರೂ ಉಳಿಯುತ್ತಿತ್ತು. ರಾಜ್ಯದ ಮುಖ್ಯಮಂತ್ರಿಯೇ ಠಿಕಾಣಿ ಹೂಡಿ, ಹಣದ ಹೊಳೆಯೇ ಹರಿಸಿದರೂ ಮತದಾರರನ್ನು ಒಲೈಸಲು ವಿಫಲವಾದ ಜೆಡಿಎಸ್ ಉಳ್ಳಾಲ ಉಪಚುನಾವಣೆಯಲ್ಲಿ ಕನಿಷ್ಠ ಇವಗಂಟನ್ನೂ ಉಳಿಸಿಕೊಳ್ಳದೆ ದ.ಕ. ಜಿಲ್ಲೆಯ ಮಟ್ಟಿಗೆ ಕೊನೆಯುಸಿರೆಳೆದಿದೆ.

ವಿಟ್ಲದ ರಾಮಯ್ಯನಾಯ್ಕ ಪಕ್ಷದ ನೇತೃತ್ವ ವಹಿಸಿದ್ದ ಕಾಲದಲ್ಲಿ ದ.ಕ.ಜಿಲ್ಲೆಯಲ್ಲಿ ತೃತೀಯ ಶಕ್ತಿಯಾಗಿ ಮೂಡಿಬಂದಿದ್ದ ಜನತಾದಳಕ್ಕೆ ತನ್ನದೇ ಆದ ರಾಜಕೀಯ ತೂಕವಿತ್ತು. ಮುಂದೆ ದೇವೇಗೌಡ, ರಾಮಕೃಷ್ಣ ಹೆಗಡೆ ವಿರಸದಿಂದ ಧ್ರುವೀಕರಣಗೊಂಡು ಜೆಡಿಎಸ್, ಜೆಡಿಯು ಆಗಿ ಇಬ್ಭಾಗವಾದಾಗ ಅದರ ಪರಿಣಾಮದಿಂದ ದ.ಕ.ಜಿಲ್ಲೆಯಲ್ಲಿ ನೆಲಕಳೆದುಕೊಂಡಿತು. ದ.ಕ. ಜಿಲ್ಲೆಯಲ್ಲಿ ದಳಕ್ಕೆ ಅಸ್ತಿತ್ವವಿರೋದೇ ಅಮರನಾಥ ಶೆಟ್ಟಿಯ ಮೂಡಬಿದರೆ, ವಸಂತ ಬಂಗೇರಾರ ಬೆಳ್ತಂಗಡಿ, ಇನ್ನುಳಿದಂತೆ ವಿಟ್ಲ ಮತ್ತು ಮಂಗಳೂರಲ್ಲಿ. ವಿಟ್ಲದ ರಾಮಯ್ಯನಾಯ್ಕ ನಿಧನರಾದದ್ದು, ಮಂಗಳೂರಿನಲ್ಲಿ ಜೆಡಿಎಸ್‌ಗೆ ಬೇಸ್ ಆಗಿದ್ದ ಸುರೇಶ್ ಬಲ್ಲಾಳ್ ಕಾಂಗ್ರೆಸ್ ಸೇರಿದ್ದು, ಅದೇ ಹೊತ್ತಿಗೆ ಅಮರನಾಥ ಶೆಟ್ಟಿ ಅವಕಾಶವಾದಿಯಂತೆ ರಾಮಕೃಷ್ಣ ಹೆಗಡೆಯ ಜೆಡಿಯುನಲ್ಲಿ ಗುರುತಿಸಿಕೊಂಡಿದ್ದು ತೃತೀಯ ಶಕ್ತಿ ಕರಾವಳಿಯಲ್ಲಿ ನಿಸ್ಸತ್ವವಾಗಿಬಿಟ್ಟಿತು.



ವಸಂತ ಬಂಗೇರಾ

ಜೆ.ಡಿ.ಯು ಮೂಲಕ ಬಿಜೆಪಿ ಜತೆ ಅಂದೇ ರಾಜಿಯಾದ ಅಮರನಾಥ ಶೆಟ್ಟಿ ಪ್ರಧಾನಿ ವಾಜಪೇಯಿಯವರನ್ನು ಬಜ್ಪೆ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಲು ಹೋಗಿದ್ದೇ ಇಷ್ಟೂ ಆಗಿ ಮುಂದಿನ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ನಿಷ್ಠುರದಿಂದ ಸೋಲುಣ್ಣಬೇಕಾಯಿತು. ಇಷ್ಟೆಲ್ಲಾ ಆದರೂ ಯಾವುದೇ ಆಮಿಷಕ್ಕೆ ಬಲಿ ಬೀಳದೇ ಆರಂಭದಿಂದ... ಮೊನ್ನೆ ತನಕ ದೇವೇಗೌಡರಿಗೆ ನಿಷ್ಠರಾಗಿದ್ದು ಜಾತ್ಯತೀತ ನಿಲುವಿಗೆ ಬದ್ಧರಾಗಿದ್ದವರೆಂದರೆ ಬೆಳ್ತಂಗಡಿಯ ವಸಂತ ಬಂಗೇರಾ ಮಾತ್ರ. ಯಾರಿಗೂ ಕೇರ್ ಮಾಡದ ರಫ್ ಅಂಡ್ ಟಫ್ ಖ್ಯಾತಿಯ ವಸಂತ ಬಂಗೇರಾ ಜೆಡಿಎಸ್ ಜಿಲ್ಲಾಧ್ಯಕ್ಷನಾದದ್ದೇ ಆನಂತರ ಜೆಡಿಎಸ್‌ಗೆ ಬಂದ ಅಮರನಾಥ ಶೆಟ್ಟಿಗೆ ಇರಿಸುಮುರುಸಾಗಿತ್ತು. ಜತೆಗೇ ಬಂಗೇರಾ ಕೈಯಲ್ಲಿ ಮುಖಭಂಗಕ್ಕೀಡಾದ ಎಂ.ಬಿ. ಸದಾಶಿವ, ದೇವೇಗೌಡರ ಡ್ರೈವರ್ ಆಗಿಯೇ ರಾಜಕೀಯ ಮಾಡುವ ನಾಭಿರಾಜಜೈನ್ ಕೂಡಾ ಶೆಟ್ಟಿಯ ಬೆನ್ನಿಗಿದ್ದರು. ಈ ತ್ರಿಕೂಟ ಬಂಗೇರಾರನ್ನು ಅಧ್ಯಕ್ಷಗಿರಿಯಿಂದ ಇಳಿಸಲು ಹಗ್ಗ ಹೊಸೆಯುತ್ತಲೇ ಇತ್ತು.

ಇತ್ತೀಚೆಗೆ ಬಂಗೇರಾ ಬಿಜೆಪಿ ಜತೆ ಮೈತ್ರಿಗೆ ಒಪ್ಪದೇ ಪಕ್ಷ ಬಿಟ್ಟು ಹೊರಬಂದದ್ದೇ ಇವರೆಲ್ಲಾ ಹಾಲುಕುಡಿದು ಸಂಭ್ರಮಿಸಿದರು. ಬಂಗೇರಾ ಜೆಡಿಎಸ್ ತೊರೆದದ್ದೇ ಪಕ್ಷವೂ ಅವನತಿಯ ಹಾದಿ ಹಿಡಿಯಿತು. ಬಂಗೇರಾ ನಿಷ್ಠರೆಲ್ಲಾ ಪಕ್ಷ ತೊರೆದು ನಾಲಾಯಕ್ ನಾಯಕರುಗಳಷ್ಟೇ ಉಳಿದಿದ್ದರಿಂದ ದ.ಕ.ಜಿಲ್ಲೆಯ ಜೆಡಿಎಸ್ ಅಂದರೆ ಅದೊಂದು 'ರಾಜಕೀಯ ನಿರಾಶ್ರಿತರ ಶಿಬಿರ'ದಂತಾಯಿತು.

ಬಂಗೇರಾ ಹೋಗಿ ತೆರವಾದ ಅಧ್ಯಕ್ಷ ಸ್ಥಾನಕ್ಕೆ ತಾನು ಆಡಿದ್ದಕ್ಕೆಲ್ಲ ಗೋಣಲ್ಲಾಡಿಸುವ ಬಲರಾಜ ರೈ ಎಂಬ 'ಬೋನ್‌ಲೆಸ್' ಆದ್ಮಿಯನ್ನು ಅಮರನಾಥ ಶೆಟ್ಟಿ ಅಧ್ಯಕ್ಷ ಸ್ಥಾನದಲ್ಲಿ ಪ್ರತಿಷ್ಠಾಪಿಸಿದರು. ಈತ ಮೂಲತಃ ಕಾರ್ಕಳದ ವ್ಯಕ್ತಿ. ಹಿಂದೊಮ್ಮೆ ಜನತಾದಳ ಅಧಿಕಾರದಲ್ಲಿದ್ದಾಗ ಅಮರನಾಥ ಶೆಟ್ಟಿಗೆ ವಿರೋಧವಾಗಿ ಮಂತ್ರಿ ಜಯಪ್ರಕಾಶ್ ಹೆಗ್ಡೆ ಒಲವು ಗಿಟ್ಟಿಸಿಕೊಂಡ ಬಲರಾಜ ರೈ ಎ.ಪಿ.ಎಂ.ಸಿ ಅಧ್ಯಕ್ಷನಾಗಿದ್ದ. ಇದೀಗ ಅಮರನಾಥ ಶೆಟ್ಟಿಯ ರಬ್ಬರ್ ಸ್ಟ್ಯಾಂಪ್. ಇನ್ನೋರ್ವ ಜೆ.ಎಸ್. ನೋರೋನ್ಹ ಈತ ರಾಜ್ಯ ಜೆಡಿಎಸ್ ಉಪಾಧ್ಯಕ್ಷ. ಹತ್ತು ಜನರನ್ನು ಸೇರಿಸುವ ತಾಕತ್ತಿಲ್ಲದ ಈತ ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯನಂತಿದ್ದಾನೆ. ಈತನದ್ದು ರಿಯಲ್ ಎಸ್ಟೇಟ್ ದಂಧೆ. ಅದಕ್ಕೆ ಈ ರಾಜಕೀಯ ಪದವಿ, ಸಖ್ಯಗಳೇ ಬಂಡವಾಳ.


ಉಳ್ಳಾಲದಲ್ಲಿ ಈ ಹಿಂದೆ ಕಾಂಗ್ರೆಸ್‌ನಿಂದ ಎಂ.ಎಲ್.ಎ. ಸೀಟು ಕೊಟ್ಟಿಲ್ಲವೆಂಬ ಅಸಮಾಧಾನದಿಂದ ಪಕ್ಷ ಬಿಟ್ಟು ಜೆಡಿಎಸ್ ಸೇರಿದ ಹೈದರ್ ಪರ್ತಿಪುಡಿ ಹುದ್ದೆಯಲ್ಲಿ ಜೆಡಿಎಸ್ ಕೇಂದ್ರ ಕಾರ್ಯಕಾರಣಿ ಸದಸ್ಯ. ಸ್ಥಳೀಯ ಗ್ರಾಮ ಪಂಚಾಯತ್‌ನಲ್ಲೂ ಸ್ಪರ್ಧಿಸುವ ಯೋಗ್ಯತೆ ಇಲ್ಲದ ಈತ ಉಳ್ಳಾಲದ ಕೋಮುಗಲಭೆ ಸಂದರ್ಭದಲ್ಲಿ ಖಾದರ್‌ನನ್ನು ಮಟ್ಟಹಾಕಲು ಆತನಿಗೆ ಸಿಮಿ ಸಖ್ಯವಿದೆಯೆಂದು ಎಂ.ಪಿ. ಪ್ರಕಾಶ್ ಕಿವಿಯೂದಿದ ನೀಚನೀತ.

ಸುಳ್ಯದಲ್ಲಿ ಯಾರೂ ನಂಬದ ಎಂ.ಬಿ.ಸದಾಶಿವ ಮಾತಿನಲ್ಲಿ ಮಳೆ ಸುರಿಸುವ ಚತುರ. ಆದ್ದರಿಂದಲೇ ಈತ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ. ಈ ಮೊದಲು ಜಿಲ್ಲಾಧ್ಯಕ್ಷನಾಗಿದ್ದು ಅದು ತಪ್ಪಿ ಬಂಗೇರಾ ಪಾಲಾದಾಗ ಅಂಡುಸುಟ್ಟಂತಾಗಿ ಮಂಗಳೂರಿನ ವುಡ್ ಲ್ಯಾಂಡ್ಸ್‌ನಲ್ಲಿ ಪತ್ರಿಕಾಗೋಷ್ಠಿ ಕರೆದು "ದೇವೇಗೌಡರಿಗೆ ಅವರ ಮಕ್ಕಳ ಚಿಂತೆ ಮಾತ್ರ. ಈ ಅಪ್ಪ-ಮಕ್ಕಳ ಪಕ್ಷ ತೊರೆದಿದ್ದೇನೆ. ರಾಜಕೀಯ ನಿವೃತ್ತಿ ಬಯಸುತ್ತೇನೆ" ಎಂದೆಲ್ಲಾ ಒದರಿದ್ದರು. ಆನಂತರ ನಿಂತಲ್ಲಿ ನಿಲ್ಲಲಾಗದೇ ಸಿಂಧ್ಯಾ ಸಖ್ಯ ಪಡೆಯು ಜೆಡಿಯು ಪ್ರಧಾನಕಾರ್ಯದರ್ಶಿಯಾಗಿ ಗುಟ್ಟಾಗಿ ಉಳಿದದ್ದು ನಡೆಯಿತು. ಇದೀಗ ಉಳ್ಳಾಲ ಉಪಚುನಾವಣೆಯಲ್ಲಿ ಕುಮಾರಣ್ಣನ ಸುತ್ತಲೇ ಗಿರಕಿ ಹೊಡೆದ ಎಂ.ಬಿ. ಜೆಡಿಎಸ್ ಕೆರದಲ್ಲಿ ಹೊಡೆದುಕೊಂಡಂತಹ ರೀತಿಯಲ್ಲಿ ಫಲಿತಾಂಶ ಪ್ರಕಟವಾಗುತ್ತಲೇ "ಅಪ್ಪ-ಮಗನಿಗೆ ಮೊದಲೇ ಹೇಳಿದ್ದೇ ಕೇಳಲಿಲ್ಲ" ಎಂದು ವುಡ್‌ಲ್ಯಾಂಡ್ಸ್ ಹೋಟೆಲಿನ ಮತ್ತದೇ ಹಳೆಯ ಜಾಗದಲ್ಲಿ ಹಳೆಯ ಡಯಲಾಗ್ "ರಾಜಕೀಯದಲ್ಲಿ ನಿವೃತ್ತಿ ಬಯಸಿದ್ದೇನೆ" ಹೇಳಿದ್ದು ಆಗಿದೆ.

ಈ ಮೇಲಿನವರದ್ದು ರಾಜಕೀಯ ಅಪರಾ-ತಪರಾ ಒಂದಷ್ಟು ಸಮಯಸಾಧಕತನ ಹೊರತು ಬೇರೇನೂ ಅಪಾಯವಿಲ್ಲ. ಇನ್ನೂ ಉಡುಪಿ ಜಿಲ್ಲೆಗೆ ಒಬ್ಬ ಜೆಡಿಎಸ್ ಅಧ್ಯಕ್ಷನಿದ್ದಾನೆ. ಆತನ ಪುರಾಣ ಬಿಚ್ಚಿದರೆ ಅದೊಂದು ಕ್ರೈಂಸ್ಟೋರಿ ಆಗುತ್ತೆ. ಮೂಲತಃ ಸಾಧುಶೆಟ್ಟಿಯ ಬಂಟ, ತುಳುನಾಡ ಸೇನೆಯ ಅಧ್ಯಕ್ಷನಾಗಿ ಪೊಲೀಸರಿಗೆ ಬೇಕಾಗಿದ್ದ ಈ ವ್ಯಕ್ತಿ, ಜೆಡಿಎಸ್ ಜಿಲ್ಲಾಧ್ಯಕ್ಷನಾಗಿದ್ದೇ ತನ್ನ ರೋಲ್ ಕಾಲ್ ದಂಧೆಯನ್ನು ಅಧಿಕೃತವಾಗಿಸಿಕೊಂಡಿದ್ದಾನೆ. ಉಡುಪಿಯ ಲೈವ್‌ಬ್ಯಾಂಡ್ ಅಡ್ಡೆಗಳಿಂದ ಹಫ್ತಾ ವಸೂಲಿಯಿಂದ ತೊಡಗಿ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರದಿಂದ ದೊಡ್ಡ ಸೈಜಿನ ಗಂಟನ್ನು ಬಾಚಿಕೊಳ್ಳುವ ತನಕ ಈತನ ವಸೂಲಿ ಪುರಾಣ ವಿಸ್ತಾರವಾಗಿದೆ.

ಕೆಲತಿಂಗಳ ಹಿಂದೆ ಮಂಗಳೂರಿನಲ್ಲಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಸತ್ತ ಬನ್ನಂಜೆ ರಾಜಾನ ಸಹಚರ ಸುಪಾರಿ ಕಿಲ್ಲರ್ ಷಾಜಿ ಎಂಬಾತನಿಗೆ ಆಶ್ರಯ ಕೊಟ್ಟು ಸಲುಹಿದ ಧರ್ಮೇಂದ್ರ ಶೆಟ್ಟಿಯಂತಹ ಯುವ 'ನಾಯಕ'ರೂ ಜೆಡಿಎಸ್‌ನಲ್ಲಿದ್ದಾರೆ. ಅಂದರೆ ಜೆಡಿಎಸ್ ಎಂಬ ಪಕ್ಷ ಇಂಥವರ ಉದರ ಪೋಷಣೆಗಷ್ಟೇ ಉಳಿದುಕೊಂಡಿದೆ ಎಂದರ್ಥವಲ್ಲವೆ?

ಉಳ್ಳಾಲ ಚುನಾವಣೆಯಲ್ಲಿ ಜೆಡಿಎಸ್ ಚುನಾವಣಾ



ವೈಖರಿ, ಬಿಸ್ಮತ್ತಿನಂತೆ ಎಸೆಯಲ್ಪಟ್ಟ ಕಂತೆಕಂತೆ ನೋಟುಗಳನ್ನು ಕಂಡಕಂಡವರು ಜೇಬಗಿಳಿಸಿದ್ದು ಮಜಬೂತಾಗಿತ್ತು. ಈಗ ಇಲ್ಲಿ ಕೇಳಿಬರುವ ಮಾತೆಂದರೆ ಜೆಡಿಎಸ್ ನಡೆಸಿದ ರೋಡ್ ಶೋಗೆ ಸುರಿದ ಹಣ 5 ಕೋಟಿಯಂತೆ! (ಅಂದರೆ ಒಂದು ಸಾವಿರ ಮತಗಳಿಗೆ ಒಂದು ಕೋಟಿ). ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಸೂರ್ಯನಾರಾಯಣರೆಡ್ಡಿ ತಂದ 40 ಲಕ್ಷ ಸೇರಿದಂತೆ, ಡಿ.ಟಿ.ಜಯಕುಮಾರ್, ಮಿರಾಜುದ್ದೀನ್ ಪಾಟೀಲ್, ಜಮೀರ್ ಅಹ್ಮದ್, ಇಕ್ಬಾಲ್ ಅನ್ಸಾರಿ ಇವರೆಲ್ಲಾ ತಮ್ಮ ಕೈಲಾದಷ್ಟು ಹಣದ ಥೈಲಿ ಹರಿಸಿ ದೊರೆಯ ಕೃಪೆಗೆ ಪಾತ್ರರಾದರು. ಈ ನಡುವೆ ಬಂದಷ್ಟೇ ವೇಗವಾಗಿ ಫ್ಲೈಟು ಹಿಡಿದು ಹಿಂತಿರುಗಿದ ಚೆಲುವರಾಯಸ್ವಾಮಿ (ಏನೋ ರಾಂಗ್ ಆಗಿ) ಆರ್.ಟಿ.ಓ. ಮೂಲಗಳ 30 ಲಕ್ಷ ಕಲೆಕ್ಷನ್ ಮಾಡಿದ್ದಾರೆಂಬ ಗುಲ್ಲು ಹಬ್ಬತ್ತು. ಅದೇನಾಯಿತು ಎಂಬುದು ಇನ್ನೂ ನಿಗೂಢ! ಕುಮಾರಣ್ಣನ ಜತೆಗೇ ಇದ್ದು ನೋಟಿನ ಕಂತೆಯನ್ನು ವಿಲೇವಾರಿ ಮಾಡುವ ಜವಾಬ್ದಾರಿ ಹೊತ್ತಿದ್ದ ಜಮೀರ್ ಅಹ್ಮದ್ ಪಕ್ಷದಿಂದ ಕಾಂಗ್ರೆಸ್ಸಿಗೆ ಹಾರಿದ್ದ ನಜೀರ್ ಉಳ್ಳಾಲ್ ಮತ್ತು ಬೆಂಗರೆಯ ಇಮ್ತಿಯಾಜ್‌ರನ್ನು ಬರಸೆಳೆಯಲು ತಲಾ 2.5 ಲಕ್ಷ ಕಪ್ಪ ಕೊಟ್ಟಿರುವ ವದಂತಿ ಇದೆ.

ತೊಕ್ಕೊಟ್ಟುವಿನಲ್ಲಿ ಮುಖ್ಯಮಂತ್ರಿಯ ಚುನಾವಣಾ ಪ್ರಚಾರ ಸಭೆಗೆ ವಾಹನಗಳಲ್ಲಿ ಜನ ತರುತ್ತೇವೆಂದು ಹಣ ಪಡೆದ ಬೆಳ್ತಂಗಡಿಯ ಸುದರ್ಶನ ಹೆಗ್ಡೆ, ಸುಳ್ಯದ ಇಕ್ಬಾಲ್ ಎಲಿಮಲೆ, ಪುತ್ತೂರಿನ ಆಶ್ರಫ್ ಆಮೇಲೆ ಪತ್ತೆಯಾಗಿಲ್ಲ. ಮುಖ್ಯಮಂತ್ರಿಯ ಸಭೆಗೆ ಜನರ ಬರ ನೀಗಿಸಲು ನೆಹರೂ ಮೈದಾನದಿಂದ ಪಡ್ಡೆ ಹೈಕಳು-ಅಲೆಮಾರಿಗಳನ್ನು ರೂ. 150 ಕೊಟ್ಟು ಟೆಂಪೋದಲ್ಲಿ ಬಾಡಿಗೆಗೆ ಕರೆತರಬೇಕಾದ ಪರಿಸ್ಥಿತಿ ಇತ್ತು. ಮುನ್ನೂರು ಎಂಬಲ್ಲಿ ಜೆಡಿಎಸ್ ಕಚೇರಿ ತೆರೆಯದೇ ಜನ ಇಲ್ಲದೇ ಕಾಂಗ್ರೆಸ್ ಕಾರ್ಯಕರ್ತರಿಗೆ 15,000 ಕೊಟ್ಟು ತಾತ್ಕಾಲಿಕ ಕಚೇರಿಯೊಂದನ್ನು ತೆರೆದರು. ಕೊನೆಗೂ ಅಲ್ಲಿಗೆ ಮುಖ್ಯಮಂತ್ರಿ ಬಂದರೆ ಕುಮಾರಣ್ಣನಿಗೆ ಜೈ ಅನ್ನಬೇಕಿದ್ದ ಬಾಡಿಗೆ ಜನ ಅಭ್ಯಾಸಬಲದಿಂದ ಮಗದೊಮ್ಮೆ ಕಾಂಗ್ರೆಸ್‌ಗೆ ಜೈ ಅನ್ನಬೇಕೆ!

ಒಳಗೇ ತುಂಬಿಕೊಂಡಿದ್ದ ಕಳ್ಳ-ಖೂಳರಿಂದ ಒಳಗೊಳಗೇ ಕುಸಿಯುತ್ತಿದ್ದ ದ.ಕ. ಜಿಲ್ಲಾ ಜೆಡಿ(ಎಸ್)ನ ಮರ್ಮಾಂಗಕ್ಕೆ ಉಳ್ಳಾಲದ ಮತದಾರ ಮತ್ತೊಂದು ಪೆಟ್ಟುಕೊಟ್ಟು ಮೂಲೆಗೆ ಕೂರಿಸಿದ್ದಾನೆ. ಮುಖ್ಯಮಂತ್ರಿ ಕುಮಾರಸ್ವಾಮಿಯೇ ಠಿಕಾಣಿ ಹೂಡಿದರೂ ಇದನ್ನು ತಪ್ಪಿಸಲಾಗಲಿಲ್ಲ.

ಜೊತೆಗೆ ಕೆಎಫ್‌ಡಿಯಂಥ ಸಂಘಟನೆಗಳು ಬಿಜೆಪಿ-ಜೆಡಿ(ಎಸ್) ಅನೈತಿಕ ಮೈತ್ರಿಯನ್ನು ಹೇಗಾದರೂ ಮಾಡಿ ಸೋಲಿಸಬೇಕೆಂಬ ಹಠಕ್ಕೆ ಬಿದ್ದು ಹಗಲಿರುಳು ಕೆಲಸ ಮಾಡಿದ್ದು ಜೆಡಿ(ಎಸ್)ಗೆ ಠೇವಣಿ ಕೂಡ ಸಿಗದಂತೆ ಮಾಡಿತು. ಒಟ್ಟಿನಲ್ಲಿ ಈಗ ಸತ್ತು ಬಿದ್ದಿರುವ ಜಿಲ್ಲಾ ಜೆಡಿ(ಎಸ್)ನ ಶವಸಂಸ್ಕಾರ ಒಂದು ಬಾಕಿ ಇದೆ.

-ವರದಿಗಾರ



ಚುನಾವಣಾ ನೆಪದಲ್ಲಿ ಹನಿಮೂನ್

ಸಿ.ಎಂ. ಸಾಹೇಬರಿಗೆ ಕಾರಣವಿರಲಿ, ಇಲ್ಲದಿರಲಿ ಮಂಗಳೂರಿಗೆ ಬರುವುದೆಂದರೆ ಅದೆಂತಹುದೋ ಥ್ರಿಲ್. ಅದಕ್ಕೆ ಕಾರಣ ರಾಧಿಕಾ ಎಂಬ ಮಂಗಳೂರು ಮಲ್ಲಿಗೆಯ ಕಂಪು! ಮತಯಾಚನೆಯ ನೆಪದಲ್ಲಿ ಉಳ್ಳಾಲದ ಕೇರಿಗಳಲ್ಲಿ ಬಹಿರಂಗವಾಗಿ ಓಡಾಡುತ್ತಾ ಜನಸಾಮಾನ್ಯರಂತೆ ಗೂಡಂಗಡಿಗಳಲ್ಲಿ ಚಹಾ ಕುಡಿದು- ತಿಂದು ಪತ್ರಿಕೆಗಳಲ್ಲಿ ಫೋಕಸ್ ಆದ ಕುಮಾರಣ್ಣನ ಅಂತರಂಗ ಮಾತ್ರ ಕತ್ತಲಾಗುತ್ತಲೇ ಸಾಲೆತ್ತೂರು ಕಡೆ ಧಾವಿಸಲು ಹಾತೊರೆಯುತ್ತಿತ್ತು.

ಮತಯಾಚನೆ ಮುಗಿದು ರೆಸಾರ್ಟ್‌ಗೆ ಬಂದು ಮುಖಕ್ಕೆ ನೀರು ಚಿಮುಕಿಸಲಷ್ಟೇ ಪುರುಸೊತ್ತು. ಅಷ್ಟೇ ವೇಗವಾಗಿ ಹೊರಬಂದು ತನ್ನ ಎಸ್ಕಾರ್ಟ್-ರಿಸ್ಕಾರ್ಟ್‌ಗಳನ್ನೆಲ್ಲಾ ಕೈಬಿಟ್ಟು ಬೇರೆಯೇ ಕಾರಲ್ಲಿ ದೊರೆ ಮಾಯ! ಹೊರಗೆ ದೊರೆಯನ್ನು ಕಾಣಲು ಅಭಿಮಾನಿ ದೇವರುಗಳು ರಾತ್ರಿಯಿಡೀ ಕಾದು ಸುಸ್ತಾದದ್ದೇ ಬಂತು. ಕಾಣದಂತೆ ಮಾಯವಾದ ದೊರೆ ದಣಿವಾರಿದ ಧನ್ಯತೆಯಲ್ಲಿ ಮತ್ತೆ ಪ್ರತ್ಯಕ್ಷವಾಗುವುದು ಮರುದಿನವೇ.

ಅಂತೆ-ಕಂತೆಗಳೇನೇ ಇರಲಿ, ರಾಧಿಕಾಳ ಸಾಲೆತ್ತೂರಿನ ಫಾರ್ಮ್‌ಹೌಸ್‌ನಲ್ಲಿ ಚುನಾವಣಾ ಖದರು ಮೂಡಿದ್ದಂತೂ ಹೌದು. ಖುದ್ದು ರಾಧಿಕಾ ತಂದೆ ದೇವರಾಜನೇ ನಿಂತು ಕಾರ್ಯಕರ್ತರಿಗೆ ಹಣ ಬಟವಾಡೆ ಮಾಡಿದ್ದು, ರಾಧಿಕಾಳೇ ಬಿರಿಯಾನಿ ಊಟಕ್ಕೆ ಕಾರ್ಯಕರ್ತರನ್ನು ಹುರಿದುಂಬಿಸಿದ್ದು..... ಅದೆಲ್ಲಾ ಉಂಡವರು ಆಮೇಲೆ ಆಡಿದ ಮಾತುಗಳು. ಆದಾಗಲೇ ಸಾಲೆತ್ತೂರಿನ ಹವಾ ದೊರೆಯನ್ನು ಎಷ್ಟು ಆವರಿಸಿಬಿಟ್ಟಿತ್ತೆಂದರೆ, ಮೂರನೇ ತಾರೀಖು ಚುನಾವಣಾ ಪ್ರಚಾರಕ್ಕೆ ತೆರೆಬಿದ್ದರೂ, ಬಿಡಿಸಿಕೊಳ್ಳಲಾಗದ ಮನಸ್ಸು ದೊರೆಯ ಎರಡು ದಿನವನ್ನು ಅಮೂಲ್ಯವಾಗಿ ಅಲ್ಲೇ ಕಳೆಯುವಂತೆ ಮಾಡಿತ್ತು!

ಗುತ್ತೇದಾರ್ Vs ಪಾಟೀಲ್ ಸಮರ

ಬಡವಾದ ಆಳಂದ ಜನತೆ

ಗುಲ್ಬರ್ಗಾ

ಗುಲ್ಬರ್ಗಾ ಜಿಲ್ಲೆಯ ಆಳಂದ ಎಂಬ ಸತದೃಷ್ಟ ಕ್ಷೇತ್ರದಲ್ಲಿ ಲೂಟಿ ಮಾಡದಿರುವವನೇ ಪರಮ ದೌರ್ಭಾಗ್ಯಿ ಎನ್ನುವಂತಾಗಿದೆ. ಈವರೆಗೆ ಇಲ್ಲಿಂದ ಶಾಸಕರಾಗಿ ಆಯ್ಕೆಗೊಂಡವರ್ಯಾರೂ ಕ್ಷೇತ್ರದ ಅಭಿವೃದ್ಧಿಯ ಕಡೆಗೆ ಗಮನ ಹರಿಸದಿರುವುದು ಆಳಂದ ಎಂಬ ಕ್ಷೇತ್ರ ತನ್ನ ಅಂದ ಕಳೆದುಕೊಂಡು ಅನಾಥವಾಗಿದೆ. ಆಯ್ಕೆಗೊಂಡವರೆಲ್ಲರೂ ಸಮನಾಗಿ ತಿಂದು ತೇಗಿದ್ದಾರೆ ಹೊರತು ಮತ ಹಾಕಿದ ಮಹಾಜನತೆಗೆ ಮಾಡಿದ ಉಪಕಾರ ಶೂನ್ಯ.

ಸಮಾಜವಾದಿ ಹಿನ್ನೆಲೆಯ ಬಿ.ಆರ್. ಪಾಟೀಲ್, ಅಬಕಾರಿ ಕುಳ ಸುಭಾಷ್ ಗುತ್ತೇದಾರ್ ಮುಂತಾದವರು ಇದೇ ಕ್ಷೇತ್ರದಿಂದ ಆಯ್ಕೆಗೊಂಡಿದ್ದರೂ ಆಳಂದ ಜನತೆಯ ಬವಣೆಯನ್ನು ನೀಗಿಸಲಾಗಿಲ್ಲ. ಕುಡಿಯುವ ನೀರು, ಚರಂಡಿ ವ್ಯವಸ್ಥೆಯಂಥ ಕನಿಷ್ಠ ಸೌಲಭ್ಯಗಳನ್ನು ಇಲ್ಲಿನ ಜನತೆಗೆ ಕಲ್ಪಿಸಲಾಗದ ಈ ನಾಯಕ ಶಿರೋಮಣಿಗಳು ಪರಸ್ಪರ ಕಚ್ಚಾಟದಲ್ಲಿಯೇ ಕಾಲ ಕಳೆದಿದ್ದಾರೆ.



ಸುಭಾಷ್ ಗುತ್ತೇದಾರ್

ರೈತರ ಭೂಮಿಗೆ ನೀರು ಹರಿದು ಅವರ ಬಾಳು ಹಸನಾಗಿಸಬೇಕಾಗಿದ್ದ ಮಹತ್ವಾಕಾಂಕ್ಷಿ ಅಮರ್ಜಾ ಯೋಜನೆಯ ಕಾಮಗಾರಿ ಕಳೆದ 40 ವರ್ಷಗಳಿಂದ ಕುಂಟುತ್ತಾ ಸಾಗಿದೆ. ಸುಭಾಷ್ ಗುತ್ತೇದಾರ್ ಹಾಗೂ ಬಿ.ಆರ್. ಪಾಟೀಲ್ ಎಂಬ ಗಂಡ ಹೆಂಡಿರ ಜಗಳದಲ್ಲಿ ಇಲ್ಲಿನ ಜನತೆ ಬಡವಾಗಿ ಹೋಗಿದೆ. ಆಗಿನ ಮುಖ್ಯಮಂತ್ರಿ ದಿ. ವೀರೇಂದ್ರ ಪಾಟೀಲರ ಅವಧಿಯಲ್ಲಿ ಕೇವಲ 5.5 ಕೋಟಿ ರೂ. ಅಂದಾಜು ವೆಚ್ಚದೊಂದಿಗೆ ಆರಂಭವಾದ ಈ ಯೋಜನೆ ಈಗ 225 ಕೋಟಿ ರೂ.ಗೆ ಬಂದು ಮುಟ್ಟಿದೆ.


ಭ್ರಷ್ಟಾಚಾರ, ಕಳಪೆ ಕಾಮಗಾರಿ, ರಾಜಕಾರಣಿಗಳು ಮತ್ತು ಗುತ್ತಿಗೆದಾರರ ನಡುವಿನ ಒಳಒಪ್ಪಂದದಿಂದಾಗಿ ಆರಂಭದಿಂದಲೂ ವಿವಾದದ ಸುಳಿಯಲ್ಲಿರುವ ಅಮರ್ಜಾ ಯೋಜನೆ ರೈತರಿಗೆ ವರವಾಗುವ ಬದಲು ಶಾಪವಾಗಿ ಪರಿಣಮಿಸಿದೆ. ಸುಮಾರು 25 ವರ್ಷಗಳ ಹಿಂದೆಯೇ ಈ ಕಾಮಗಾರಿ ಮುಗಿದು ಇಲ್ಲಿನ ರೈತರಿಗೆ ನೀರು ಸಿಗಬೇಕಾಗಿತ್ತು. ಆದರೆ ಇದುವರೆಗೂ ಒಂದು ಹನಿ ನೀರು ಕೂಡ ಹೊಲಗಳಿಗೆ ಹರಿದಿಲ್ಲ.

ಇಂಥ ಭಯಾನಕ ಪರಿಸ್ಥಿತಿಯಲ್ಲೂ ಮಾಜಿ ಶಾಸಕ ಮತ್ತು ಕಾಂಗ್ರೆಸ್ ಪಕ್ಷದ ಮುಖಂಡ ಸುಬಾಷ್ ಗುತ್ತೇದಾರ್ ಮತ್ತು ಶಾಸಕ ಬಿ.ಆರ್. ಪಾಟೀಲ್ ಮಧ್ಯೆ ಮತ್ತೆ ರಾಜಕೀಯ ಸಮರ ಆರಂಭವಾಗಿದೆ. ಸತತ ನಾಲ್ಕು ಬಾರಿ ಸೋಲು ಅನುಭವಿಸಿ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಆಯ್ಕೆಗೊಂಡಿರುವ ಬಿ.ಆರ್. ಪಾಟೀಲ ವಿರುದ್ಧ ಸುಭಾಷ್ ಗುತ್ತೇದಾರ್ ಒಂದೇ ಸಮ ರಣಕಹಳೆ ಊದುತ್ತಿದ್ದಾರೆ.

ಇವರಿಬ್ಬರ ಕೆಸರೆರಚಾಟ ಈ ಕ್ಷೇತ್ರದ ಜನತೆಗೆ ಬಿಟ್ಟಿ ಮನೋರಂಜನೆಯ ಜತೆಗೆ ಆಕ್ರೋಶವನ್ನುಂಟು ಮಾಡುತ್ತಿದೆ. ಬದಲಾದ ರಾಜಕೀಯ ಸನ್ನಿವೇಶದಿಂದಾಗಿ ಆತ ಜೆಡಿಎಸ್‌ನಲ್ಲೂ, ಇತ್ತ ಕಾಂಗ್ರೆಸ್‌ನಲ್ಲಿಯೂ ಇಲ್ಲದ ಬಿ.ಆರ್. ಪಾಟೀಲ ಸಿದ್ದರಾಮಯ್ಯನವರೊಂದಿಗೆ ಗುರುತಿಸಿಕೊಂಡಿದ್ದಲ್ಲದೆ ಅವರ ಪರವಾಗಿ ದೆಹಲಿವರೆಗೂ ವಕಾಲತ್ತು ವಹಿಸಿ ಬಂದಿರುವುದಿರಂದ ಗುತ್ತೇದಾರ್‌ರಿಗೆ ಹೊಟ್ಟೆಯಲ್ಲಿ ಕಲಸಿದಂತಾಗುತ್ತಿದೆ.

ಖರ್ಗೆ, ಧರ್ಮಸಿಂಗ್‌ರ ಅಡಿಯಾಳಾಗಿ ತಮ್ಮ ಸ್ಥಾನವನ್ನು ಭದ್ರವಾಗಿಸಿಕೊಂಡಿದ್ದ ಗುತ್ತೇದಾರ್‌ಗೆ ಬಿ.ಆರ್. ಪಾಟೀಲ್ ಮುಂದೊಂದು ದಿನ ಪ್ರತಿಸ್ಪರ್ಧಿಯಾಗಬಹುದೆಂಬ ನಡುಕ ಉಂಟಾಗಿದೆ.


ಈ ಮಧ್ಯೆ ಚಂದ್ರಶೇಖರಯ್ಯ ಹಿರೇಮಠ ಎಂಬ ಆಸಾಮಿ ರಾಜ್ಯ ದಿನಗೂಲಿ ನೌಕರರ ಖಾಯಂಗಾಗಿ ಹೋರಾಟ ಮಾಡುವ ನಾಟಕ ಮಾಡುತ್ತಾ ಕಾಂಗ್ರೆಸ್ ಪಕ್ಷದಲ್ಲಿ ತಮ್ಮ ವಿಶ್ವಾಸ ಗಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.



ಚಂದ್ರಶೇಖರ್ ಹಿರೇಮಠ

ಕಳೆದ 25 ವರ್ಷಗಳಿಂದ ಕಟ್ಟಾ ಕಾಂಗ್ರೆಸ್ ವಿರೋಧಿಯಾಗಿ ಕೆಲಸ ಮಾಡಿರುವ ಬಿ.ಆರ್. ಪಾಟೀಲರು ಇಂದಿರಾಗಾಂಧಿ ಅವರ ಮಗ ರಾಜೀವ್‌ಗಾಂಧಿಯವರ ವಿರುದ್ಧ ಹೆಗಡೆ, ಬೊಮ್ಮಾಯಿ, ದೇವೇಗೌಡ ಹೋರಾಟ ನಡೆಸಿದಾಗ ಪ್ರಮುಖ ಸಾಲಿನಲ್ಲಿದ್ದವರು. ಸಮಾಜವಾದ ಹಾಗೂ ಲೋಹಿಯಾ ವಾದವನ್ನು ಒಪ್ಪಿ ಅದನ್ನು ಮೈಗೂಡಿಸಿಕೊಂಡಿದ್ದ ಬಿ.ಆರ್. ಪಾಟೀಲ್ ಯುವ ಜನತಾ ಪಕ್ಷದ ಅಧ್ಯಕ್ಷರಾಗಿ, ಜನತಾದಳದ ಪದಾಧಿಕಾರಿಯಾಗಿ, ಲೋಕಶಕ್ತಿಯ ಪ್ರಧಾನ ಕಾರ್ಯದರ್ಶಿಯಾಗಿ, ವಿಧಾನಸಭೆಯ ಉಪಸಭಾಪತಿಯಾಗಿ ಹೀಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪದವಿ ಅನುಭವಿಸಿದವರು.

ಇಂಥ ವ್ಯಕ್ತಿ ಸಿದ್ದರಾಮಯ್ಯನವರ ಕೋಟಾದಿಂದ ಕಾಂಗ್ರೆಸ್ ಟಿಕೆಟ್ ಬಾಚಿಕೊಂಡರೆ ತಮ್ಮ ಗತಿ ಏನು ಎಂಬ ಚಿಂತೆಯಲ್ಲಿ ಗುತ್ತೇದಾರ ಹಾಗೂ ಹಿರೇಮಠ ಮುಳುಗೇಳುತ್ತಿದ್ದಾರೆ. ಹೀಗಾಗಿ ಪಾಟೀಲರನ್ನು ಕಾಂಗ್ರೆಸ್‌ನಿಂದ ದೂರವಿಡುವ ನಿಟ್ಟನಲ್ಲಿ ಎಲ್ಲಾಪ್ರಯತ್ನಗಳು ನಡೆಯುತ್ತಿವೆ. ಇನ್ನು ಕೆಲವರು ದೆಹಲಿಗೆ ತೆರಳಿ ಪಾಟೀಲರನ್ನು ಸೇರಿಸಿಕೊಳ್ಳದಿರುವಂತೆ ಸೋನಿಯಾ ಮೇಡಂ ಅವರ ಮನೆ ಬಾಗಿಲು ತಟ್ಟಿ ಬಂದಿದ್ದಾರೆಂಬ ಪುಕಾರುಗಳಿವೆ.



ಬಿ.ಆರ್. ಪಾಟೀಲ್

ಚಾಣಾಕ್ಷರೂ ಹಾಗೂ ಚುರುಕು ಮಾತಿನ ಬಿ.ಆರ್. ಪಾಟೀಲ ತಮ್ಮ ವಿರುದ್ಧ ಪಿತೂರಿ ಮಾಡುವವರನ್ನು ರಾಜಕೀಯವಾಗಿ ಹೇಗ ಸದೆ ಬಡಿಯಬೇಕೆಂದು ಅರಿತುಕೊಂಡು ಒಂದು ವಾರದ ಹಿಂದೆ ಪತ್ರಿಕಾಗೋಷ್ಠಿಯೊಂದನ್ನು ಕರೆದು ಗುತ್ತೇದಾರರು ಜೆಡಿಎಸ್, ಬಿಎಸ್‌ಪಿ ಬಾಗಿಲು ತಟ್ಟುತ್ತಿದ್ದಾರೆಂದು ಹೇಳಿ ಗೊಂದಲವೆಬ್ಬಿಸಿದರು.

ಇದರಿಂದಾಗಿ ಗಾಯಗೊಂಡ ಹಾವಿನಂತೆ ಬುಸುಗುಡುತ್ತಿರುವ ಸುಭಾಷ್ ಗುತ್ತೇದಾರ್ ಪಾಟೀಲರ ವಿರುದ್ಧ ಸಮರ ಸಾರಿದ್ದಾರೆ. ಆಳಂದ ಮತ ಕ್ಷೇತ್ರದಲ್ಲಿ ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿದೆ ಎಂದು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಇವರಿಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭ ಎನ್ನುವಂತೆ ಧರ್ಮಸಿಂಗ್‌ರ ಪರಮಾಪ್ತ ಶಿಷ್ಯನೆಂದೇ ಗುರುತಿಸಲ್ಪಡುವ ಚಂದ್ರಶೇಖರಯ್ಯ ಹಿರೇಮಠ ಕಾಂಗ್ರೆಸ್ ಟಿಕೆಟ್ ಪಡೆಯಲು ಸತತ ಪ್ರಯತ್ನಿಸುತ್ತಿದ್ದಾನೆ. ಬಿಸಿಎಂ ಆಫೀಸಿನಲ್ಲಿ ಅಣ್ಣ ಹೊಡೆಯುವ ದುಡ್ಡಿನಲ್ಲಿ ಖರ್ಚು ಮಾಡಿಕೊಂಡು ತಿರುಗಾಡುವ ಹಿರೇಮಠ ಪತ್ರಕರ್ತರಿಗೂ ತನ್ನ ಕಪ್ಪ ಕಾಣಿಕೆ ಸಲ್ಲಿಸಿ ಈಗಾಗಲೇ ಫೀಲ್ಡಿಗಿಳಿದಿದ್ದಾನೆ.

ಒಂದು ವೇಳೆ ಕಾಂಗ್ರೆಸ್ ಟಿಕೆಟ್ ಸಿಗದಿದ್ದರೆ ಬಿಜೆಪಿ ಇಲ್ಲವೇ ಜೆಡಿಎಸ್‌ಗೆ ನೆಗೆಯಬಲ್ಲ ಈ ಆಸಾಮಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಜನಾರ್ದನ ಪೂಜಾರಿ ಗಳಸ್ಯಕಂಟಸ್ಯ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಅಂತೆಯೇ ಆಳಂದ ಕ್ಷೇತ್ರದ ಮೇಲೆಯೇ ಈ ಸಲ ಬಹುತೇಕರ ಕಣ್ಣು ಇದೆ. ವಿಶೇಷವಾಗಿ ಕಾಂಗ್ರೆಸ್‌ನಲ್ಲಿ ಸ್ಪರ್ಧಿಗಳ ಪಟ್ಟಿಯೇ ಬೆಳೆಯುತ್ತಿದೆ. ಈ ರಾಜಕೀಯ ಚದುರಂಗದಾಟ ಯಾವ ರೀತಿಯ ಅಂತ್ಯ ಕಾಣಲಿದೆ ಎಂಬುದು ಕುತೂಹಲವನ್ನುಂಟುಮಾಡಿದೆ.

ಆದರೆ ಒಂದು ಮಾತಂತೂ ಸತ್ಯ. ಜಾತ್ಯತೀತ ಮನೋಭಾವನೆಯ ಬಿ.ಆರ್. ಪಾಟೀಲರ ಕ್ಷೇತ್ರದಲ್ಲಿ ಇದೀಗ ಅವರ ಸಹೋದರನ ಮಗ ರಾಮಚಂದ್ರ ಪಾಟೀಲನದೇ ದರ್ಬಾರು. ಶಾಸಕರ ಅನುಪಸ್ಥಿತಿಯಲ್ಲಿ ತಾಲ್ಲೂಕಿನ ಎಲ್ಲಾ ವ್ಯವಹಾರಗಳನ್ನು ಈತನೇ ನಿಭಾಯಿಸುತ್ತಿದ್ದಾನೆ.

ಬಂದವರೆಲ್ಲರೂ ಬಾಚಿಕೊಂಡು ತಿಂದಿದ್ದರಿಂದ ಆಳಂದ ಕ್ಷೇತ್ರದಲ್ಲಿನ ಉದ್ಯೋಗಖಾತ್ರಿ ಯೋಜನೆಯೂ ಸಂಪೂರ್ಣವಾಗಿ ವಿಫಲವಾಗಿದೆ. ಆಳಂದ ಜನತೆ ಕಂಗಾಲಾಗಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಎಲ್ಲರಿಗೂ ತಕ್ಕ ಪಾಠ ಕಲಿಸಲು ಕಾದು ಕುಳಿತಿದ್ದಾರೆ.

-ವರದಿಗಾರ

ಕೋ-ಜಾಗಳಿಗೆ ತಿರುಗುಬಾಣ

ಉಳ್ಳಾಲ ಚುನಾವಣೆ

ಉಳ್ಳಾಲ ಉಪಚುನಾವಣೆಯ ಸಂದರ್ಭದಲ್ಲಿ ಕೋಮುವಾದಿ ಬಿಜೆಪಿ ಹಾಗೂ ಜಾತ್ಯತೀತ ಎಂಬ ಹಣೆಪಟ್ಟಿ ತಗಲುಹಾಕಿಕೊಂಡಿರುವ ದಳ ಎರಡೂ ಸೇರಿ ಹೇಗೆ ಮುಸ್ಲಿಮ್ ಹಾಗೂ ಕ್ರಿಶ್ಚಿಯನ್ನರನ್ನು ಮುಗಿಸಲು ಷಡ್ಯಂತ್ರ ರೂಪಿಸಿವೆ ಎಂಬುದನ್ನು ಜೂನ್ 6ರ 'ಲಂಕೇಶ್'ನಲ್ಲಿ ವಿವರವಾಗಿ ಬರೆಯಲಾಗಿತ್ತು. ಜೊತೆಗೆ ಈ ಕುತಂತ್ರವನ್ನು ಉಳ್ಳಾಲದ ಮತದಾರ ಅರ್ಥಮಾಡಿಕೊಂಡು ಅವರಿಬ್ಬರನ್ನೂ ಸೋಲಿಸುವ ಮೂಲಕ ಜವಾಬ್ದಾರಿತನವನ್ನು ಮೆರೆಯಬೇಕು ಎಂಬ ಕರೆ ಮತ್ತು ಆಶಯವನ್ನು ವ್ಯಕ್ತಪಡಿಸಲಾಗಿತ್ತು. ಜನಸಾಮಾನ್ಯರ ಹಿತದೃಷ್ಟಿಯಿಂದ-ಅದರಲ್ಲೂ ವಿಶೇಷವಾಗಿ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳ ಹಿತದೃಷ್ಟಿಯಿಂದ ವ್ಯಕ್ತಪಡಿಸಲಾದ ಪತ್ರಿಕೆಯ ಈ ಆಶಯ-ಉಳ್ಳಾಲ ಚುನಾವಣೆಯಲ್ಲಿ ಕೊನೆಗೂ ಈಡೇರಿತು. ಚುನಾವಣೆಯಲ್ಲಿ ಬಿಜೆಪಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾದರೆ, ಜೆಡಿ(ಎಸ್) ತನ್ನ ಠೇವಣಿಯನ್ನೂ ಉಳಿಸಿಕೊಳ್ಳಲಾಗದ ಹೀನಸ್ಥಿತಿಗೆ ಬಂದು ಹೇಳಹೆಸರಿಲ್ಲದಂತೆ ನಿರ್ನಾಮವಾಗಿ ಹೋಯಿತು.

ಕೋ-ಜಾಗಳ ಷಡ್ಯಂತ್ರ ಠುಸ್

ಚಾಮುಂಡೇಶ್ವರಿ ಉಪಚುನಾವಣೆಯ ಸಂದರ್ಭದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಎರಡೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸಿದ್ದರೂ ಸಿದ್ದರಾಮಯ್ಯ ಎಂಬ ದಿಗ್ಗಜನ ಎದುರು ಕೋ-ಜಾಗಳಿಬ್ಬರೂ ಸೋತು ಸುಣ್ಣವಾಗಿದ್ದರು. ಆ ಕಹಿ ನೆನಪು ಅವರಿಗಿನ್ನೂ ಮಾಸಿರಲಿಲ್ಲ. ಹೀಗಾಗಿ ಈ ಬಾರಿ ಇದಕ್ಕಿಂತಲೂ ಚಾಣಾಕ್ಷ ತಂತ್ರವನ್ನು ಹೆಣೆಯಲು ಕೋ-ಜಾಗಳು ಸಜ್ಜಾದವು. ಉಳ್ಳಾಲದಲ್ಲಿ ಗಣನೀಯವಾಗಿರುವ ಮುಸ್ಲಿಮ್ ಹಾಗೂ ಕ್ರಿಶ್ಚಿಯನ್ ಮತಗಳು ಎಷ್ಟು ತಿಪ್ಪರಲಾಗ ಹಾಕಿದರೂ ಬಿಜೆಪಿಗೆ ಬೀಳುವುದಿಲ್ಲ. ಅವೇನಿದ್ದರೂ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರಿಗೆ ಹೋಗುತ್ತವೆ. ಈ ಮತಗಳ ಬೆಂಬಲವಿಲ್ಲದೇ ಚುನಾವಣೆ ಗೆಲ್ಲುವುದು ಅಸಾಧ್ಯ. ಹೀಗಾಗಿ ಗೆಲ್ಲಬೇಕೆಂದರೆ ಈ ಮತಗಳು ಕಾಂಗ್ರೆಸ್ ಪಾಲಾಗದಂತೆ ಒಡೆಯುವುದು ಕೋ-ಜಾಗಳಿಗೆ ಅನಿವಾರ್ಯ. ಆದ್ದರಿಂದ ಜೆಡಿ(ಎಸ್)ನಿಂದ ಅಬೂಬಕರ್ ನಾಟೇಕಲ್ ಎಂಬ ಮುಸ್ಲಿಮ್ ಕ್ಯಾಂಡಿಡೇಟ್‌ನ್ನು ಕಣಕ್ಕಿಳಿಸಿ ಕಾಂಗ್ರೆಸ್‌ಗೆ ಹೋಗುವ ಅಲ್ಪಸಂಖ್ಯಾತರ ಓಟುಗಳನ್ನು ಒಡೆದು ಅಂತಿಮವಾಗಿ ಬಿಜೆಪಿ ಅಭ್ಯರ್ಥಿ ಗೆಲ್ಲುವಂತೆ ಮಾಡಲು ಪ್ರಯತ್ನಿಸಿತು. ಮತದಾರನನ್ನು ಫೂಲ್ ಮಾಡಲು ಹೋಗಿ ತಾವೇ ಫೂಲ್ ಆಗಿಹೋದರು. ಇವರೆಲ್ಲರ ಷಡ್ಯಂತ್ರವನ್ನು ಬಯಲಿಗೆಳೆದ ನಮ್ಮ ಪತ್ರಿಕೆಯನ್ನು ಸಾವಿರಾರು ಸಂಖ್ಯೆಯಲ್ಲಿ ಜನ ಕೊಂಡು ಓದಿದರು; ಕೋ-ಜಾಗಳ ಷಡ್ಯಂತ್ರವನ್ನು ಚೆನ್ನಾಗಿ ಅರ್ಥಮಾಡಿ ಕೊಂಡು ತಮ್ಮ ಪ್ರಜ್ಞಾವಂತಿಕೆಯನ್ನು ಮೆರೆದರು; ಬಿಜೆಪಿಗೆ ಮಾರಣಾಂತಿಕ ಪೆಟ್ಟು ನೀಡಿ ಅರೆಜೀವವನ್ನಾಗಿ ಮಾಡಿದರೆ, ಜೆಡಿ(ಎಸ್)ಗೆ ಹೊಡೆಯಬಾರದ ಜಾಗಕ್ಕೆ ಹೊಡೆದು ಚಟ್ಟಕ್ಕೇರಿಸಿಬಿಟ್ಟರು.

ಕೋ-ಜಾಕ್ಕೆ ಕೆಎಫ್‌ಡಿ ಗುದ್ದು

ಕೋ-ಜಾಗಳು ಈ ರೀತಿ ಹೀನಾಯವಾಗಿ ಮೂಲೆಗುಂಪಾಗುವುದಕ್ಕೆ ಮತ್ತೊಂದು ಪ್ರಧಾನ ಕಾರಣ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ಎಂಬ ಸಂಘಟನೆ ಮರ್ಮಾಂಗಕ್ಕೆ ಗುದ್ದಿದ್ದು. ಕೋಮುವಾದಿಗಳು ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಕರಾವಳಿಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಆಕ್ರಮಣಗಳನ್ನು ನಡೆಸುತ್ತಿರುವುದನ್ನು ಕಟುವಾಗಿ ಮತ್ತು ಕ್ರಿಯಾಶೀಲವಾಗಿ ವಿರೋಧಿಸುತ್ತಿರುವ ಕೆಎಫ್‌ಡಿ ಉಳ್ಳಾಲ ಉಪಚುನಾವಣೆಯಲ್ಲಿ ಈ ಬಾರಿ ಕೋ-ಜಾಗಳಿಗೆ ತಕ್ಕ ಪಾಠವನ್ನು ಕಲಿಸಲು ಸಜ್ಜಾಗಿತ್ತು. ಅದಕ್ಕಾಗಿ ಕಾರ್ಯತಂತ್ರ ರೂಪಿಸಿತು.

ಇದನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಕೇವಲ ದಕ್ಷಿಣ ಕನ್ನಡ ಜಿಲ್ಲೆಯೊಂದರಿಂದಲೇ ಸುಮಾರು 500-600 ಕೆಎಫ್‌ಡಿ ಕಾರ್ಯಕರ್ತರು ಕನಿಷ್ಠ ಒಂದು ವಾರ ಕಾಲ ಹಗಲಿರುಳೂ ದುಡಿದರು. ಇವರೆಲ್ಲ 4-5 ಜನರ ತಂಡಗಳನ್ನು ರಚಿಸಿಕೊಂಡು ಬಿಜೆಪಿಯ ನಿಷ್ಠ ಬೆಂಬಲಿಗರನ್ನು ಹೊರತುಪಡಿಸಿ ಉಳ್ಳಾಲದ ಉಳಿದೆಲ್ಲ ಮನೆಗಳಿಗೆ ತೆರಳಿ ಕೋ-ಜಾಗಳ ವಿರುದ್ಧ ಪ್ರಚಾರ ಮಾಡಿದರು. ಪ್ರತಿ ಮನೆಗೆ ಈ ತಂಡಗಳು ಹೋದಾಗ ಬಿಜೆಪಿ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಕರಾವಳಿಯಲ್ಲಿ ಹಚ್ಚುತ್ತಿರುವ ಕೋಮು ದಳ್ಳುರಿಗಳ ಬಗ್ಗೆ, ಬಿಜೆಪಿಯ ಅಭ್ಯರ್ಥಿ ಚಂದ್ರಶೇಖರ್ ಶೆಟ್ಟಿ ಮಾಡುತ್ತಿರುವ ಕ್ರಿಮಿನಲ್ ಚಟುವಟಿಕೆಗಳ ಬಗ್ಗೆ ಇಂತಹ ಕೋಮುವಾದಿಗಳೊಂದಿಗೆ ಕೈಜೋಡಿಸಿರುವ ಜಾತ್ಯತೀತ (!) ದಳದ ಅವಕಾಶವಾದಿತನದ ಬಗ್ಗೆ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರನ್ನು ಮುಗಿಸಲು ಕೋ-ಜಾಗಳು ಹೆಣೆದಿರುವ ಷಡ್ಯಂತ್ರದ ಬಗ್ಗೆ ಮನಮುಟ್ಟುವಂತೆ ಜನರಿಗೆ ವಿವರಿಸಿದ್ದಾರೆ; ಯಾರಿಗಾದರೂ ಓಟು ಹಾಕಿ, ಆದರೆ ಕೋ-ಜಾಗಳಿಗೆ ಮಾತ್ರ ಓಟು ಕೊಡಬೇಡಿ ಎಂದು ವಿನಂತಿ ಮಾಡಿಕೊಂಡಿದ್ದಾರೆ. ಈ ತಂಡಗಳು ತಮ್ಮೊಂದಿಗೆ 'ಲಂಕೇಶ್' ವಾರಪತ್ರಿಕೆಯ ಪ್ರತಿಗಳನ್ನು ಒಯ್ಯುವುದನ್ನು ಮರೆತಿರಲಿಲ್ಲ. ಒಟ್ಟನಲ್ಲಿ ಅವರ ಈ ಶ್ರಮ ಕೊನೆಗೂ ಸಾರ್ಥಕವಾಯಿತು. ಯಾವಾಗ ಕೆಎಫ್‌ಡಿಯವರು ಬಿಜೆಪಿ-ಜೆಡಿ(ಎಸ್) ವಿರುದ್ಧ ಪ್ರಚಾರಕ್ಕಿಳಿದರೋ ಆಗ ಕಾಂಗ್ರೆಸ್‌ನವರು ಕೂಡ ಇವರಲ್ಲಿಗೆ ಬಂದು ಏನಾದರೂ ಹಣ ಮತ್ತಿತರ ಸಹಾಯ ಬೇಕೆ ಎಂದು ಕೇಳತೊಡಗಿದರು. ಆದರೆ ಕೆಡಿಎಫ್‌ನವರು ಕಾಂಗ್ರೆಸ್‌ನ ಪರವಾಗಿ ಪ್ರಚಾರ ಮಾಡುತ್ತಿರಲಿಲ್ಲವಾದ್ದರಿಂದ ಅದನ್ನೆಲ್ಲಾ ತಿರಸ್ಕರಿಸಿ ತಮ್ಮ ಜೇಬಿನಿಂದಲೇ ಖರ್ಚುಮಾಡಿಕೊಂಡು ಪ್ರಚಾರ ಮಾಡಿದರು.

ಕೋ-ಜಾಗಳನ್ನು ಬಿಟ್ಟು ಯಾರಿಗಾದರೂ ಓಟು ಹಾಕಿ ಎಂಬ ಅವರ ಮನವಿ ಕಾಂಗ್ರೆಸ್‌ಗೆ ಓಟು ಹಾಕಿ ಎಂಬಂತಾಗಿ ಅದರ ಸಂಪೂರ್ಣ ಲಾಭವನ್ನು ಕಾಂಗ್ರೆಸ್ ಪಡೆಯಿತು. ವಾಸ್ತವದಲ್ಲಿ ಈ ಚುನಾವಣೆಯನ್ನು ಗೆಲ್ಲುವುದಕ್ಕೋಸ್ಕರ ಕಾಂಗ್ರೆಸ್ ಶ್ರಮವಹಿಸಿ ಕೆಲಸ ಮಾಡಿದ್ದು ಬಹಳ ಕಡಿಮೆಯೆಂದೇ ಹೇಳಬೇಕು. ಹಾಗಾಗಿ ನಿಜಾರ್ಥದಲ್ಲಿ ಕೋ-ಜಾಗಳನ್ನು ಸೋಲಿಸಿದ್ದು ಕಾಂಗ್ರೆಸ್ ಅಲ್ಲ, ಕೋ-ಜಾ ವಿರೋಧಿ ಅಲೆ, ಸಾಮಾಜಿಕ ಸಂಘಟನೆಯೊಂದರ ಪರಿಶ್ರಮ ಮತ್ತು ಪತ್ರಿಕೆಯ ನಿಲುವು ಇವೇ ಚಡ್ಡಿ-ಹಾಫ್‌ಚಡ್ಡಿಗಳನ್ನು ಸೋಲಿಸಿದವು ಎಂದೇ ಹೇಳಬೇಕು. ●

ತಮಿಳುಕುಮಾರನ ತಲೆದಂಡ




ರಿವೇಂಜ್ ಕಿಲ್ಲಿಂಗ್ಸ್ 33

ರಾ. ಸೋಮನಾಥ್


ಶಿವಮೊಗ್ಗ ನಾಗನ ಎನ್‌ಕೌಂಟರ್ ನಡೆದ ಎರಡೇ ವಾರಕ್ಕೆ ತಮಿಳುಕುಮಾರನನ್ನು ಶಿವಮೊಗ್ಗ ಪೊಲೀಸರು ಗುಂಡಿಟ್ಟು ಕೊಂದುಬಿಟ್ಟರು. ವಿಶೇಷವೆಂದರೆ 2006 ರ ಡಿಸೆಂಬರ್‌ನ ಮೊದಲ ಮೂರು ವಾರದೊಳಗೆ ಹೀಗೆ ಪೊಲೀಸರಿಂದ ಎನ್‌ಕೌಂಟರ್ ಹೆಸರಲ್ಲಿ ಕೊಲ್ಲಲ್ಪಟ್ಟ ಇಬ್ಬರೂ ರೌಡಿಗಳು ಮೂಲತಃ ಶಿವಮೊಗ್ಗದವರಾಗಿದ್ದರು.

ಜವಗೊಂಡನಹಳ್ಳಿ ಡಾಬಾದ ಮೇಲಿನ ದಾಳಿಯಲ್ಲಿ ಶಿವಮೊಗ್ಗ ನಾಗ ನೇರವಾಗಿ ಕಾಣಿಸಿಕೊಳ್ಳದೇ ಹೋದರೂ, ಇದ್ಯಾವುದಕ್ಕೂ ತಮಿಳುಕುಮಾರನಿಗೂ ಸೂತ್ರ ಸಂಬಂಧ ಇಲ್ಲದಿದ್ದರೂ ಒಂದರ ಮೇಲೊಂದಾಗಿ ಶಿವಮೊಗ್ಗದ ಪಾತಕಿಗಳನ್ನೇ ಏಕೆ ಪೊಲೀಸರು ಬಲಿಹಾಕಿದ್ದು?




ಹೆಬ್ಬೆಟ್ ಮಂಜ

ಹೀಗೊಂದು ಪ್ರಶ್ನೆ ಹುಟ್ಟಿಕೊಂಡಿದ್ದು ಸುಮ್ಮನೇನಲ್ಲ. ಯಾವಾಗ ಬೆಂಗಳೂರಿನ ಭೂಗತ ಲೋಕದಲ್ಲಿ ಶಿವಮೊಗ್ಗದ ರೌಡಿಗಳದ್ದೇ ಆರ್ಭಟ ಎಂಬಂತಾಯಿತೋ ಸಹಜವಾಗೇ ಬೆಂಗಳೂರು ಪೊಲೀಸರ ಕೋವಿಗಳೆಲ್ಲ ಶಿವಮೊಗ್ಗದತ್ತ ಮುಖ ಮಾಡಿಬಿಟ್ಟವು. 2006 ರ ಅಕ್ಟೋಬರ್ 16 ರಾತ್ರಿ ಜವಗೊಂಡನಹಳ್ಳಿಯ ಜೈಭಾರತ್ ಡಾಬಾದ ಮೇಲೆ ದಾಳಿ ಮಾಡಿ ದೀಪುವನ್ನು ಕೊಂದು ಕೊರಂಗುವನ್ನು ಅರೆಜೀವ ಮಾಡಿಹಾಕಿದ್ದ ಹೆಬ್ಬೆಟ್ಟು ಮಂಜ ಹೇಳಿಕೇಳಿ ಶಿವಮೊಗ್ಗ ಪಾತಕಿಯಾಗಿದ್ದ. ಬಳ್ಳಾರಿ ಜೈಲಿನಲ್ಲೇ ಕೂತು ಶಿವಮೊಗ್ಗದ ಮತ್ತೊಬ್ಬ ಕ್ರಿಮಿನಲ್ ನವುಲೆ ಆನಂದ ಮೂಲಕ ಭಯಂಕರ ರಾಬರಿಯೊಂದನ್ನು ಮಾಡಿಸಿದ್ದ. ಸೂರಿ ಕೊಲೆಯಾದ ನಂತರ ಶಿವಮೊಗ್ಗ ನಾಗನಂತೂ ಇವತ್ತಲ್ಲ ನಾಳೆ ಬೆಂಗಳೂರಿನ ಡಾನ್ ಪಟ್ಟಕ್ಕೆ ಬರುತ್ತಾನೆಂದು ಪತ್ರಿಕೆಗಳು ಬರೆಯಲಾರಂಭಿಸಿದ್ದವು. ಶಿವಮೊಗ್ಗದ ಪಾತಕಿಗಳ ಹಾವಳಿ ಬೆಂಗಳೂರಿನಲ್ಲಿ ಅದೆಷ್ಟು ವಿಪರೀತಕ್ಕೆತ್ತೆಂದರೆ ಬೆಂಗಳೂರು ಪೊಲೀಸರು ಹೆಬ್ಬೆಟ್ಟು ಮಂಜ, ಶಿವಮೊಗ್ಗ ನಾಗ, ಕಮ್ಮರಡಿ ಹನೀಫ, ತಮಿಳು ಕುಮಾರ; ಹೀಗೆ ಯಾರು ಸಿಕ್ಕರೂ ಅಂಥವರನ್ನು ಎನ್‌ಕೌಂಟರ್ ಮಾಡಿ ತಲೆತೊಳೆದುಕೊಳ್ಳಲು ತಹತಹಿಸುತ್ತಿದ್ದರು.



ಎಸ್.ಕೆ. ಉಮೇಶ್

ಹಾಗೆ ನೋಡಿದರೆ ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಶಿವಮೊಗ್ಗದ ಪಾತಕಿಗಳ ಸಂಖ್ಯೆ ತಮಿಳುನಾಡಿನ ತಿರುಪ್ಪೂರು, ಕೃಷ್ಣಗಿರಿ ಮತ್ತು ಧರ್ಮಪುರಿಗಳಿಂದ ಬಂದು ಪಾತಕವೆಸಗಿ ಪರಾರಿಯಾಗುವ ತಮಿಳು ಪಾತಕಿಗಳ ಮುಂದೆ ಏನೇನೂ ಆಗಿರಲಿಲ್ಲ. ಆದರೆ ಪತ್ರಿಕೆಗಳು ಅದನ್ನು ಮಾಮೂಲಿನ ಪ್ರವೃತ್ತಿಯೆಂದೇ ಭಾವಿಸಿ ಏಕಾಏಕಿಯಾಗಿ ತಲೆ ಎತ್ತಿದ ಶಿವಮೊಗ್ಗದ ರೌಡಿಗಳ ಬಗ್ಗೆ ವಿಶೇಷವಾಗಿ ತಲೆಕೆಡಿಸಿಕೊಂಡಿದ್ದೇ ಪೊಲೀಸರು ಇಂಥಾದ್ದೊಂದು ನಿರ್ಧಾರಕ್ಕೆ ಕಾರಣವಾಗಿತ್ತೆ?



ಕೊರಂಗು

ಬಹುಶಃ ಪೊಲೀಸರಿಗೇನಾದರೂ ಸಿಕ್ಕಿಬಿಟ್ಟಿದ್ದರೆ ಮೊದಲು ಬೀಳುತ್ತಿದ್ದದ್ದೇ ಹೆಬ್ಬೆಟ್ಟು ಮಂಜನ ತಲೆ. ತನ್ನ ಎನ್‌ಕೌಂಟರ್ ಶತಸ್ಸಿದ್ಧ ಎಂಬುದು ಹೆಬ್ಬೆಟ್ಟು ಮಂಜನಿಗಾಗಲೇ ಗ್ಯಾರಂಟಿಯಾಗಿ ಹೋಗಿತ್ತು. ಆದರೆ ಮಂಜ ಎಂಥಾ ತಲೆ ಓಡಿಸಿದನೆಂದರೆ, ಮುಂಬಯಿಯಿಂದ ಸರಿಸುಮಾರು ಐದು ಲಕ್ಷ ರೂಪಾಯಿಗಳ ನೋಟಿನ ಕಂತೆ ತಂದವನೇ ಚಿತ್ರದುರ್ಗದ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರ ಬಾಯಿಗೆ ತುರುಕಿ ಸರೆಂಡರ್ ಆಗಿ ಸೇಫಾಗಿ ಜೈಲು ಸೇರಿಕೊಂಡಿದ್ದ. ಹೆಬ್ಬೆಟ್ಟು ಮಂಜನನ್ನು ಎನ್‌ಕೌಂಟರ್ ಮಾಡಿ ಚೂರಾದರೂ ಮುಖ ಉಳಿಸಿಕೊಳ್ಳಲು ಹವಣಿಸುತ್ತಿದ್ದ ಸಿಸಿಬಿ ಪೊಲೀಸರು ತಾಳ್ಮೆಗೆಟ್ಟಿದ್ದೇ 2006 ರ ಡಿಸೆಂಬರ್ 3 ರ ಬೆಳ್ಳಂಬೆಳಗ್ಗೆ ಶಿವಮೊಗ್ಗ ನಾಗನನ್ನು ಹೊಡೆದುಹಾಕಿದ್ದರು. ಶಿವಮೊಗ್ಗದ ಮತ್ತೊಬ್ಬ ಕ್ರಿಮಿ ಹಮ್ಮರಡಿ ಹನೀಫ ಎನ್‌ಕೌಂಟರ್ ಭೀತಿಗೆ ಬಿದ್ದು ದೇಶವನ್ನೇ ತೊರೆದು ದುಬೈ ಸೇರಿಕೊಂಡನಾ ಎಂಬ ಗುಮಾನಿ ಕೂಡ ಹೋಗೆಯಾಡುತ್ತಿತ್ತು.

ಇದೆಲ್ಲದರ ಪರಿಣಾಮವೇ ತಮಿಳುಕುಮಾರನ ಎನ್‌ಕೌಂಟರ್!

ಏಕೆಂದರೆ ಶಿವಮೊಗ್ಗದ ರೌಡಿಗಳು ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ದಿನಕ್ಕೊಂದು ಅನಾಹುತ ಸೃಷ್ಟಿಸುತ್ತಿದ್ದಾರೆಂದರೆ; ಅದಕ್ಕೆ ಶಿವಮೊಗ್ಗ ಪೊಲೀಸರು ತಾನೇ ತಲೆತಗ್ಗಿಸಬೇಕು. ಈ ವೇಳೆಗಾಗಲೇ ಶಿವಮೊಗ್ಗದಲ್ಲಿ ಲವ-ಕುಶರಂಥ ರೌಡಿ ಸಹೋದರ ಜೋಡಿ ಕೊಲೆಯಾಗಿ ಎರಡು ತಿಂಗಳುಗಳಾಗಿದ್ದವು. ತನ್ನ ಶಿಷ್ಯ ಹಂದಿ ಅಣ್ಣಿಯನ್ನು ಛೂಬಿಟ್ಟು ಒಂದೇ ಏಟಿಗೆ ರೌಡಿ ಬ್ರದರ್‌ಗಳಿಬ್ಬರನ್ನೂ ಕೊಚ್ಚಿ ಹಾಕಿಸಿದ್ದ ತಮಿಳುಕುಮಾರನಿಗೆ ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲೇ ವಿಪರೀತ ಲಿಂಕುಗಳಿದ್ದವು. ಆತನಿಗೆ ಶಿವಮೊಗ್ಗ ನಾಗ, ಹೆಬ್ಬೆಟ್ಟು ಮಂಜರಷ್ಟೇ ಅಲ್ಲ; ಸ್ಪಾಟ್ ನಾಗನೂ ಗೊತ್ತಿದ್ದ. ತೊಂಡೇರಾಮ ಹಾಗೂ ತುಕಾರಾಂ ಕೊಲೆ ಕೇಸುಗಳಲ್ಲಿ ಶಿವಮೊಗ್ಗದ ಸಬ್‌ಇನ್ಸ್‌ಪೆಕ್ಟರ್ ಶಂಕರ ನಾರಾಯಣ ಅರೆಸ್ಟು ಮಾಡಿದಾಗ ತಮಿಳುಕುಮಾರ ಜೈಲಲ್ಲಿದ್ದ ಎಂಬುದನ್ನು ಬಿಟ್ಟರೆ ಉಳಿದಂತೆ ಆತ ಬೆಂಗಳೂರಿನಲ್ಲಿ ತಲೆ ಮರೆಸಿಕೊಂಡಿದ್ದುದ್ದೇ ಹೆಚ್ಚು. ಶಿವಮೊಗ್ಗದಲ್ಲಿ ಶಿವಕುಮಾರ್ ಮತ್ತು ಸಿದ್ದಣ್ಣರೆಂಬ ಇಬ್ಬರು ಸಬ್‌ಇನ್ಸ್‌ಪೆಕ್ಟರ್‌ಗಳು ಕಂಡಕಂಡ ರೌಡಿಗಳನ್ನೆಲ್ಲ ಒದ್ದು ಲಾಕಪ್ಪಿಗೆ ದಬ್ಬಲಾರಂಭಿಸಿದ್ದೇ ಬೆಂಗಳೂರಿಗೆ ಓಡಿಬಂದ ತಮಿಳುಕುಮಾರ ಸ್ಪಾಟ್ ನಾಗನ ಜೊತೆ ಸೇರಿಕೊಂಡು 2005 ರ ಮಾರ್ಚ್ 25 ರಂದು ಸುಪಾರಿ ಕೊಲೆಯೊಂದನ್ನು ಮಾಡಿದ್ದ. ಅದು ಯಶವಂತಪುರದ ಆರ್‌ಎಂಸಿ ಯಾರ್ಡ್‌ನ ಪಾತಕಿಗಳಾದ ಅನಂತ ಮತ್ತು ವಿಜಯ್‌ಕುಮಾರ್‌ರಿಂದ 3 ಲಕ್ಷಕ್ಕೆ ಸುಪಾರಿ ಪಡೆದು ಮಂಜುನಾಥ ಎಂಬ ಗ್ರೈನ್ ಮರ್ಚೆಂಟ್‌ರ ನಾಯಕನನ್ನು ನಡುರಸ್ತೆಯಲ್ಲೇ ಕತ್ತರಿಸಿ ಕೊಂದ ಅಮಾನುಷ ಕೃತ್ಯವಾಗಿತ್ತು.

ಆದರೆ ಈ ಕೇಸಿನಲ್ಲಿ ಬೇರೆಲ್ಲ ಆರೋಪಿಗಳು ಸಿಕ್ಕಿಬಿದ್ದರಾದರೂ ತಮಿಳು ಕುಮಾರ ಮಾತ್ರ ಸಿಗಲೇ ಇಲ್ಲ. ನ್ಯಾಯಾಲಯ ಆತನನ್ನು ಘೋಷಿತ ಅಪರಾಧಿ ಎಂದು ಸಾರಿಬಿಟ್ಟಿತ್ತು. ಒಂದೆಡೆ ಬೆಂಗಳೂರಿನ ಸಿಸಿಬಿ ಪೊಲೀಸರು ಮತ್ತೊಂದೆಡೆ ಶಿವಮೊಗ್ಗ ಪೊಲೀಸರು ಪರಸ್ಪರ ಪೈಪೋಟಿಗೆ ಬಿದ್ದವರಂತೆ ಆತನ ಬೆನ್ನಿಗೆ ಬಿದ್ದಾಗಿತ್ತು. ಮಚ್ಚನ ಕೊಲೆ, ಕೆಂಗೇರಿಯ ಜೋಡಿ ಕೊಲೆ, ತದನಂತರದ ಕೊರಂಗು ಮೇಲಿನ ಅಟ್ಯಾಕ್ ಇತ್ಯಾದಿಗಳಿಂದಾಗಿ ಆತಂಕಕ್ಕೀಡಾದ ಪೊಲೀಸರು ಶಿವಮೊಗ್ಗದ ರೌಡಿಗಳ ಬೆನ್ನಿಗೆ ಬಿದ್ದಿದ್ದಾರೆಂಬುದು ಗೊತ್ತಾಗಿದ್ದೇ ಅತ್ತ ಶಿವಮೊಗ್ಗದ ಎಸ್.ಪಿ. ಅರುಣ್ ಚಕ್ರವರ್ತಿ ಗಾಬರಿಗೆ ಬಿದ್ದು ಶತಾಯಗತಾಯ ತಮಿಳುಕುಮಾರನ ಎನ್‌ಕೌಂಟರ್ ಮಾಡಿಯೇ ತೀರಲು ಪಣತೊಟ್ಟರು.


ತಲೆಮರೆಸಿಕೊಂಡು ಓಡಾಡುತ್ತಿದ್ದ ತಮಿಳುಕುಮಾರನ ನಡವಳಿಕೆಗಳೇ ವಿಚಿತ್ರವಾಗಿದ್ದವು. ಶಿವಮೊಗ್ಗ ನಾಗನ ಹಾಗೆ ಯಾವತ್ತೂ ಏಕಾಂಗಿಯಾಗಿ ಓಡಾಡುತ್ತಿದ್ದ. ಹಣಕ್ಕೆ ತಾಪತ್ರಯವಾದಾಗ ಕೈಗೆ ಸಿಕ್ಕ ಯಾರನ್ನು ಬೇಕಾದರೂ ಸುಲಿಗೆ ಮಾಡುತ್ತಿದ್ದ. ಶಿವಮೊಗ್ಗ ಹೊರವಲಯದ ಚಿಕ್ಕಾಲ್, ಹೊಳೆಬೆನವಳ್ಳಿ, ಕುಸ್ಕೂರು, ಹಸೂಡಿ ಇತ್ಯಾದಿ ತಮಿಳು ಕ್ಯಾಂಪ್‌ಗಳಲ್ಲಿ ಅಡಗಿಕೊಂಡಿದ್ದು ಅಲ್ಲಿನ ತಮಿಳರದೇ ಆದ ನೆಟ್‌ವರ್ಕ್ ಒಂದನ್ನು ರೂಪಿಸಿಕೊಂಡಿದ್ದ. ಅಕ್ಕಪಕ್ಕದ ಜಮೀನ್ದಾರರು ಮತ್ತು ಶ್ರೀಮಂತರಿಗೆ ಬೆದರಿಕೆ ಹಾಕಿ ದುಡ್ಡಿಗಾಗಿ ಪೀಡಿಸುತ್ತಿದ್ದ. ಶಿವಮೊಗ್ಗದ ಹೊರವಲಯಕ್ಕೆ ಹುಡುಗರನ್ನು ಕರೆಸಿಕೊಂಡು ಬೆಳಿಗ್ಗೆಯಿಂದ ಸಂಜೆತನಕ ಕುಡಿಯುತ್ತ ಕೂತುಬಿಡುತ್ತಿದ್ದ. ವಿಶೇಷವೆಂದರೆ ತನಗೆ ಸುಪಾರಿ ಕೊಟ್ಟು ಕೊಲೆಗೆ ಹಚ್ಚುವ ಇತರೇ ರೌಡಿಗಳನ್ನೇ ಕ್ರಮೇಣ ಸುಲಿಗೆಗೆ ಈಡು ಮಾಡುತ್ತಿದ್ದ.

ತೊಂಡೇರಾಮನ ಕೊಲೆಗೆ ಮಾತ್ರವಲ್ಲದೇ ಸುಭಾಶ್ ಶೆಟ್ಟಿ ಕೊಲೆಯಲ್ಲೂ ಆತನನ್ನು ಬಳಸಿಕೊಂಡ ಲವ-ಕುಶ ರೌಡಿ ಬ್ರದರ್‌ಗಳನ್ನೇ ಕ್ರಮೇಣ ಬ್ಲಾಕ್‌ಮೇಲ್ ಮಾಡಲಾರಂಭಿಸಿದ್ದ. ಅವರ ವಿರುದ್ಧವೇ ಹಂದಿ ಅಣ್ಣಿಯನ್ನು ಜೊತೆಹಾಕಿಕೊಂಡು ಗ್ಯಾಂಗ್ ಕಟ್ಟತೊಡಗಿದ್ದ.

ಅಂತಿಮವಾಗಿ 2006 ರ ಆಗಸ್ಟ್ 7ರಂದು ಹಂದಿ ಅಣ್ಣಿ ಮತ್ತು ಆತನ ಗ್ಯಾಂಗನ್ನು ಛೂಬಿಟ್ಟು ಲವಕುಶರನ್ನು ಕೊಲ್ಲಿಸಿಬಿಟ್ಟ!

ಮಿಲ್ಕಿ ಹೋಟೇಲು ನಡೆಸುತ್ತಿದ್ದ ಹಂದಿ ಅಣ್ಣಿಗೂ ಮತ್ತು ಲವ-ಕುಶರಿಗೂ ಸೈಟೊಂದರ ವಿಷಯದಲ್ಲಿ ಜಗಳ ಶುರುವಾಗಿತ್ತು. ಹಂದಿ ಅಣ್ಣಿಯ ಮಿಲ್ಕಿ ಹೋಟೆಲ್ ಪಕ್ಕದಲ್ಲೇ ಗಣೇಶ ವೈನ್ ಅಂಗಡಿಯಿದ್ದುದರಿಂದ ಮಾರು ದೂರದಲ್ಲೇ ಇದ್ದ ಹೆವೆನ್ ಇನ್‌ಬಾರ್ ಅಂಡ್ ರೆಸ್ಟೋರೆಂಟ್‌ಗೆ ಇದರಿಂದಾಗಿ ಲುಕ್ಸಾನಾಗುತ್ತಿತ್ತು. ಇದು ಹೆವೆನ್ ಇನ್ ಮಾಲೀಕ ಶೆಟ್ಟಿಗೂ ಹಂದಿ ಅಣ್ಣಿಗೂ ವೈಮನಸ್ಯಕ್ಕೆ ಮೂಲವಾಯಿತು. ಮೊದಲೇ ಹೆವನ್ ಇನ್ ಶೆಟ್ಟಿಗೆ ಲವ-ಕುಶರ ಬೆಂಬಲವಿತ್ತು. ದುಡ್ಡಿಗಾಗಿ ಹೆವೆನ್‌ಇನ್ ಶೆಟ್ಟಿಯನ್ನು ತಮಿಳುಕುಮಾರ ಪೀಡಿಸಲಾರಂಭಿಸಿದಾಗ ಸಹಜವಾಗೇ ಲವ-ಕುಶ ತಮಿಳುಕುಮಾರನ ಮೇಲೆ ಕಿಡಿಕಾರಿದ್ದರು. ಲವ-ಕುಶರನ್ನು ತೆಗೆದುಬಿಟ್ಟರೆ ತನ್ನ ವಸೂಲಿಗೆ ಯಾವುದೇ ನಿರ್ಬಂಧವಿಲ್ಲದಂತಾಗುತ್ತದೆ ಮತ್ತು ಹಂದಿ ಅಣ್ಣಿಯ ಗ್ಯಾಂಗಿನ ಬೆಂಬಲವೂ ದಕ್ಕುತ್ತದೆ ಎಂದೇ ಲೆಕ್ಕಹಾಕಿದ ತಮಿಳುಕುಮಾರ ಹೊಳೆಬೆನವಳ್ಳಿಯ ತಮಿಳು ಕೊಂಪೆಯಲ್ಲಿ ಕೂತು ಲವ-ಕುಶರನ್ನು ಮುಗಿಸಿ ಹಾಕಿದ್ದ.

ಬಹುಶಃ ಸಿಕ್ಕಿಬಿದ್ದಿದ್ದರೆ ಆವತ್ತೇ ತಮಿಳುಕುಮಾರನನ್ನು ಶಿವಮೊಗ್ಗ ಪೊಲೀಸರು ಕೊಂದು ಹಾಕುತ್ತಿದ್ದರು. ಆದರೆ



ಪತ್ರಿಕಾಗೋಷ್ಠಿಯಲ್ಲಿ ತಮಿಳು ಕುಮಾರನ ಎನ್‌ಕೌಂಟರ್ ವಿಷಯವನ್ನು ಬಹಿರಂಗಪಡಿಸುತ್ತಿರುವ ಎಸ್ಪಿ ಅರುಣ್ ಚಕ್ರವರ್ತಿ

ಅದಕ್ಕೆ ಎರಡು ತಿಂಗಳು ತಡವಾಗಿತ್ತು. ಶಿವಮೊಗ್ಗದ ಎಸ್ಪಿ ಅರುಣ್ ಚಕ್ರವರ್ತಿ ಆತನನ್ನು ಎನ್‌ಕೌಂಟರ್ ಮಾಡಿ ಎಂದು ಇನ್ಸ್‌ಪೆಕ್ಟರ್ ಶಿವಕುಮಾರ್‌ಗೆ ವಹಿಸಿಕೊಟ್ಟಿದ್ದರು. ಹಿರಿಯೂರಿನಲ್ಲಿ ತಮಿಳುಕುಮಾರನ ಹೆಂಡತಿಯ ಮನೆಯಿತ್ತು. ಅಲ್ಲಿಗಾತ ಪದೇಪದೇ ಬರುತ್ತಾನೆಂಬ ಮಾಹಿತಿಯನ್ನು ಬೆಂಗಳೂರಿನ ಸಿಸಿಬಿ ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ ಮತ್ತು ನಂಜುಂಡೇಗೌಡರು ಕಲೆ ಹಾಕಿದ್ದರು. ಸಾಲದ್ದಕ್ಕೆ ಹೊಳೆಬೆನವಳ್ಳಿಯ ತಮಿಳುಕಾಲನಿಯಲ್ಲಿ ಆತನಿಗೊಬ್ಬಳು ಪ್ರೇಯಸಿ ಕೂಡ ಇದ್ದಳು. ಆಕೆಯ ಹೆಸರು ಅಂಬಿಕಾ!

ತಮಿಳುಕುಮಾರನನ್ನು ಹಿರಿಯೂರಿನಲ್ಲಿ ಸಿಸಿಬಿ ಪೊಲೀಸರೇ ಹಿಡಿದು ಶಿವಮೊಗ್ಗದ ಪೊಲೀಸರಿಗೊಪ್ಪಿಸಿದರೋ ಅಥವಾ ಶಿವಮೊಗ್ಗ ಪೊಲೀಸರೇ ಆತನನ್ನು ಹೊಳೆಬೆನವಳ್ಳಿಯ ಪ್ರೇಯಸಿಯ ಮನೆಯಲ್ಲಿ ಹಿಡಿದರೋ ಗೊತ್ತಿಲ್ಲ. ಅಂತೂ ಹೊಳೆಬೆನವಳ್ಳಿಯ ತಮಿಳು ಕಾಲನಿಯ ಬಳಿಯಿದ್ದ ಪಂಪ್‌ಹೌಸ್‌ನಲ್ಲಿ ಕುಡಿಯುತ್ತ ಕುಳಿತಿ[...] ತಮಿಳುಕುಮಾರನನ್ನು ಶಿವಮೊಗ್ಗದ ಇನ್ಸ್‌ಪೆಕ್ಟರ್‌ಗಳಾ[...] ಶಿವಕುಮಾರ್ ಮತ್ತು ಬಾಲರಾಜ್ ಸೇರಿಕೊಂಡು ಎನ್‌ಕೌಂಟರ್ ಮಾಡಿಬಿಟ್ಟರು. ತಲೆಗೊಂದು, ಎದೆ[...]ಗೊಂದು, ಹೊಟ್ಟೆಗೊಂದು ಹೀಗೆ ಮೂರು ಗುಂಡುಗಳು ಆತನ ದೇಹ ಹೊಕ್ಕಿದ್ದವು. On the spot ಹೆಣವಾಗಿ ಹೋಗಿದ್ದ ತಮಿಳು ಕುಮಾರ!

ಅಲ್ಲಿಗೆ ಶಿವಮೊಗ್ಗ ನಾಗನ ತರುವಾಯ ಪೊಲೀಸ[...] ಕಾರ್ಯಾಚರಣೆಗೆ ಬಲಿಯಾದ ಶಿವಮೊಗ್ಗದ ರೌಡಿಗ[...] ಪೈಕಿ ತಮಿಳುಕುಮಾರ ಎರಡನೆಯವನಾಗಿದ್ದ!

ಅದು ಕೊರಂಗು ಮೇಲಾದ ದಾಳಿಗೆ ಪ್ರತೀಕಾರವೋ[...] ಅಥವಾ ಪೊಲೀಸರ ಮಾನ ಕಾಯುವ ಯಡವಟ್ಟೋ[...] ನಿರ್ಧರಿಸುವವರ್‍ಯಾರು?

ಅಂತೂ ಕೊರಂಗು ವಿರೋಧಿ ಪಡೆಯ ಇಬ್ಬರು[...] ಪಂಟರ್‌ಗಳನ್ನು ಪೊಲೀಸರು ಬಲಿಹಾಕಿ ಆಗಿತ್ತು. ಹೇ[...] ಕೊರಂಗು ಮತ್ತು ಸುನೀಲರ ಪಾಳಯದ ಬಹುತೇ[...] ರೌಡಿಗಳೆಲ್ಲ ಜೈಲು ಪಾಲಾಗಿದ್ದರೋ ಹಾಗೇ ವಿರೋಧಿ[...] ಜೆಡಿಎಸ್ ಬೆಂಬಲಿತ ಸಿಂಡಿಕೇಟಿನ ಬನಶಂಕರಿ ಅರಸಯ[...] ತಿಮ್ಮೇನಹಳ್ಳಿ ಗೋವಿಂದ, ಕತ್ರಿಗುಪ್ಪೆಯ ಬಳ್ಳ, ಯಶವಂ[...]ಪುರದ ರಾಬರಿಗಿರಿ, ವೆಂಕಿ, ಸೈಕಲ್ ರವಿ, ಬ್ರೇಕ್ ಜಗ್ಗಿ[...] ಗ್ಯಾಂಗ್‌ಗಳೂ ಜೈಲುಪಾಲಾಗಿದ್ದವು. ಆದರೆ ಕಾಮಾ[...]ಪಾಳ್ಯದ ಬಸವ, ಆತನ ಭಾಮೈ[...] ಧರಣಿ, ಕಡಬಗೆರೆ ಪಾಯ್ಸನ್ ರಾಮ[...] ಬೆತ್ತನಗೆರೆಯ ಖತರ್‌ನಾಕ್ ಹಂತ[...] ಸೀನ, ಪಾಖಂಡಿ ಮುಲಾಮರಂ[...] ಘಟಾನುಘಟಿಗಳು ಮಾತ್ರ ಜೈಲಿಂ[...] ಹೊರಗೇ ಉಳಿದುಬಿಟ್ಟಿದ್ದರ[...] ಕೊರಂಗು-ಸುನೀಲರ ಪಾಲಿಗೆ ಜೈಲ[...] ಗೂಡಾಗಿ ಹೋಯಿತು. ಅದ[...] ಮತ್ತೊಂದು ರೀತಿಯ ಅನುಕೂಲ[...] ಜೈಲಲ್ಲೇ ಕೂತು ಸಣ್ಣಪುಟ್ಟ ಕಳ್ಳತನ[...] ಕೇಸಲ್ಲಿ ಬಂದ ಹೊಸ ಹುಡುಗರನ್ನು[...] ರೆಡಿ ಮಾಡಿ ಫೀಲ್ಡಿಗೆ ಬಿಡುವುದು[...] ಅವರ ಮೂಲಕವೇ ಅನಾಹುತಕಾ[...] ಪಾತಕಗಳನ್ನು ಮಾಡಿಸುವುದು.

ಹೀಗೆ ಕೊರಂಗು ಜೈಲಲ್ಲಿ ಕೂತೇ ರೆಡಿ ಮಾಡಿ[...] ಪೋರ್ಕಿ ಗ್ಯಾಂಗುಗಳ ಪೈಕಿ ಒಂದು ಚನ್ನಮ್ಮನಕೆ[...] ಅಚ್ಚುಕಟ್ಟು ಪ್ರದೇಶದಲ್ಲಿ ಕಾರ್ಯಾಚರಣೆಗಿಳಿಯಿತು. ಅದ[...] ಕತ್ರಿಗುಪ್ಪೆ ಲಿಂಗನ ಶಿಷ್ಯ ಮುನಿಯನದ್ದಾಗಿತ್ತು. ಮತ್ತೊಂದ[...] ಲಗ್ಗೆರೆ ಸುತ್ತಮುತ್ತ ಹಾವಳಿಗಿಳಿದ ತೊದ್ಲು ಮಂಜ[...] ಪಡೆ. ಅದನ್ನು ಸುನೀಲನ ಬಂಟ ಒಂಟೆ ಜೈಲಿಂದಲ[...] ನಿಯಂತ್ರಿಸುತ್ತಿದ್ದ. ಮತ್ತೊಂದು ಕಲಾಸಿಪಾಳ್ಯದ ಮಾರ್ಕೆಟ[...] ವೇಡಿಯ ಶಿಷ್ಯರ ಗ್ಯಾಂಗು. ಇವೆಲ್ಲಕ್ಕಿಂತಲೂ ಅನಾಹುತಕಾ[...]ಯಾದದ್ದು ಗಾಯಿತ್ರಿನಗರದ ಬಲರಾಮನ ತಂಡ. ಹೇಳಿಕೇ[...] ಇವ್ಯಾವುದೂ ಪೊಲೀಸರಿಗೆ ಪರಿಚಿತ ತಂಡಗಳಲ್ಲ. ಇವ[...] ಇರುವಿಕೆಯೂ ಪೊಲೀಸರಿಗೆ ಗೊತ್ತಿಲ್ಲ. ಎಲ್ಲರೂ ಪಿಯು[...] ಮಟ್ಟದ ಇನ್ನೂ ಮೀಸೆ ಬಲಿಯದ ಪೋರ್ಕಿ ಹುಡುಗರು[...] ಇಂಥ ಅನಾಮಿಕ, ಅವಿವೇಕಿ ಹುಡುಗರ ಅದೆಷ್ಟು[...] ತಂಡಗಳನ್ನು ಕೊರಂಗು ರೆಡಿ ಮಾಡಿದ್ದನೋ ಗೊತ್ತಿಲ್ಲ[...]

ಇವರ ಗುರಿ ಒಂದೇ. ಮೊದಲು ಮುಲಾಮನನ್ನು[...] ತೆಗೆಯಬೇಕು. ಆತ ಸಿಗದಿದ್ದರೆ ಕಡಬಗೆರೆಯ[...] ಪಾಯ್ಸನ್ ರಾಮನನ್ನು ಮುಗಿಸಬೇಕು. ಎಲ್ಲಕ್ಕಿ[...] ಮುನ್ನ ಜೈಲಿನಲ್ಲೇ ಹೆಬ್ಬೆಟ್ಟು ಮಂಜನನ್ನು ಖ[...] ಮಾಡಿಬಿಡಬೇಕು! ಇದು ಕೊರಂಗು ಮ[...] ಸುನೀಲನ ಪಡೆಯ ಮೂಲಮಂತ್ರವಾಗಿ ಬಿಟ್ಟಿತ್ತು[...] ಆದರೆ ಕೊರಂಗು ಸುನೀಲರ ಸಿಂಡಿಕೇಟಿನ ಇದ[...] ಎಲ್ಲಾ ಕಾರಸ್ಥಾನಗಳೂ ಹೇಗೋ ಪೊಲೀಸರಿ[...] ಗೊತ್ತಾಗಿಬಿಡುತ್ತಿತ್ತು. ಬೆಂಗಳೂರಿನ ಒಬ್ಬ ಪೊಲೀ[...] ಇನ್ಸ್‌ಪೆಕ್ಟರ್ ಇಡೀ ಗ್ಯಾಂಗ್‌ವಾರ್‌ನ ಎಲ್ಲಾ ಆ[...] ಹೋಗುಗಳನ್ನು ಅತ್ಯಂತ ಚಾಣಾಕ್ಷತನದಿಂದ ಕ[...] ಹಾಕುತ್ತಲೇ ಇದ್ದರು.

ಅದು ಕಲಾಸಿಪಾಳ್ಯದ ಪೊಲೀಸ್ ಇನ್ಸ್‌ಪೆಕ್ಟ[...] ಎಸ್.ಕೆ. ಉಮೇಶ್!

(ಮುಂದುವರೆಯುತ್ತ[...]

ನೀನು ಸತ್ತಂಗೆ ಮಾಡು-ನಾನು ಅತ್ತಂಗೆ ಮಾಡ್ತೀನಿ'

ನಗರಪಾಲಿಕೆ ಆಯುಕ್ತ ಪ್ರಾಣಲಿಂಗನ ತಂತ್ರ

ದಾವಣಗೆರೆ

ದಾವಣಗೆರೆ ಮಹಾ ನಗರಪಾಲಿಕೆ ಆಯುಕ್ತ ವಿಚಿತ್ರ ಹೆಸರನ್ನು ಹೊಂದಿರುವ ಪ್ರಾಣಲಿಂಗ ಶಿವಸಾಲಿ. ಇವನ ಲಫಡಾಗಳ ಬಗ್ಗೆ ಈಗಾಗಲೇ 'ಲಂಕೇಶ್' ಮೇ 9, 2007 ಸಂಚಿಕೆಯಲ್ಲಿ ವಿವರವಾಗಿ ವರದಿಯಾಗಿದೆ. ಈ ವರದಿಯಿಂದ ಜಿಲ್ಲಾ ಮಂತ್ರಿ ರವೀಂದ್ರನಾಥ ಎಚ್ಚೆತ್ತುಕೊಂಡು ಪ್ರಾಣಲಿಂಗನಿಗೆ ಪಾಠ ಕಲಿಸುವುದಿರಲಿ, ಪ್ರಾಣಲಿಂಗನ ಉಡಾಫೆ ನಡವಳಿಕೆಯ ಬಗ್ಗೆ ವಿಷಾದ ವ್ಯಕ್ತಪಡಿಸಿರುವುದನ್ನು ನೋಡಿದರೆ ಪ್ರಾಣಲಿಂಗನು ನೀಡಿದ ಪ್ರಸಾದವು ಮಂತ್ರಿವರ್ಯನ ಹೊಟ್ಟೆಯಲ್ಲಿ ಜೀರ್ಣವಾಗದೆ ಕುಳಿತಿದೆಯೊ? ಇಲ್ಲವೆ ಪ್ರಾಣಲಿಂಗನನ್ನು ಎಚ್ಚರಿಸುವುದಕ್ಕೆ ತನ್ನದೇ ಜಾತಿಯವನೆಂಬ ಜಾತಿಪ್ರಜ್ಞೆ ಅಡ್ಡಿಯಾಗಿದೆಯೋ ಅರ್ಥವಾಗುತ್ತಿಲ್ಲ.

ಜಿಲ್ಲಾ ಮಂತ್ರಿಯೇ ಪ್ರಾಣಲಿಂಗನ ವರ್ಗಾವಣೆಯನ್ನು ತಡೆದು ಇವನನ್ನು ತನ್ನ ಬಗಲಿನಲ್ಲಿಟ್ಟುಕೊಂಡು ಪೋಷಿಸುತ್ತಿರುವುದರಿಂದ ಶಿವಸಾಲಿ ತನ್ನ ಮಿತಿಮೀರಿದ ಉಡಾಫೆ ವರ್ತನೆಗಳೊಂದಿಗೆ ವಸೂಲಿಬಾಜಿಯನ್ನು ಮತ್ತಷ್ಟು ತೀವ್ರಗೊಳಿಸಿದ್ದಾನೆ. ಇದಕ್ಕೆ ತಾಜಾ ಉದಾಹರಣೆ ಸಾರ್ವಜನಿಕ ಶೌಚಾಲಯದ ಟೆಂಡರ್‌ಗೆ ಸಂಬಂಧಿಸಿದ್ದು.

ಜಿಲ್ಲಾಧಿಕಾರಿ-ನಗರ ಪಾಲಿಕೆಯ ಆಯುಕ್ತರ ಹೆಸರಿನಲ್ಲಿ ದಿನಾಂಕ 14.3.2007 ರಂದು ಟೆಂಡರ್ ಪ್ರಕಟಣೆ ನೀಡಿ ಈ ಸಂಬಂಧ ಬಂದ ಅರ್ಜಿಗಳನ್ನು ಕಾಣೆಯಾಗಿಸಿರುವ ಶಿವಸಾಲಿ ಕಮಿಷನ್ ಆಸೆಗಾಗಿ ತನಗೆ ಬೇಕಾದವರಿಗೆ ಈ ಟೆಂಡರ್‌ಗಳನ್ನು ಕೊಟ್ಟು ಮತ್ತೊಮ್ಮೆ ಶೌಚಾಲಯದ ಅಮೇಧ್ಯವನ್ನು ಮೈ ತುಂಬಾ ಬಳಿದುಕೊಂಡಿದ್ದಾನೆ.

ದಾವಣಗೆರೆ ಮಹಾನಗರಪಾಲಿಕೆಯಿಂದ ಶೌಚಾಲಯ ನಿರ್ವಹಣೆ ಕುರಿತ ಟೆಂಡರ್ 14.3.07ರಂದು ಸ್ಥಳೀಯ ಪತ್ರಿಕೆಯೊಂದರಲ್ಲಿ ಪ್ರಕಟಣೆಗೊಂಡಾಗ ಸಾಕ್ಷಿ ಇಂಟರ್‌ನ್ಯಾಷನಲ್ ಮತ್ತು ಮುಸ್ಕಾನ್ ಎಂಟರ್‌ಪ್ರೈಸಸ್ ಎಂಬ ಎರಡು ಸಂಸ್ಥೆಗಳವರು ತಲಾ 25 ಸಾವಿರ ರೂಪಾಯಿ ಡಿ.ಡಿ. (ನಂ. 681072) ಮತ್ತು ಚೆಕ್ (ನಂ. 724252)ಗಳೊಂದಿಗೆ ಟೆಂಡರ್ ಫಾರಂಗಳನ್ನು ತುಂಬಿಕೊಂಡು ದಿನಾಂಕ 28.3.07 ರಂದು ನಗರ ಪಾಲಿಕೆಗೆ ಸಲ್ಲಿಸಲು ಹೋಗಿದ್ದಾರೆ. ನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರ (ಎ.ಇ.ಇ.) ಎಸ್.ಎಸ್. ಬೀರಾದಾರ್ ಎನ್ನುವವನ ಸೂಚನೆಯಂತೆ ಅಲ್ಲಿದ್ದ ಎರಡು ಪೆಟ್ಟಿಗೆಗಳ ಪೈಕಿ ಒಂದರಲ್ಲಿ ಅರ್ಜಿ, ಚೆಕ್ಕು ಹಾಗೂ ಡಿಡಿ ಮತ್ತು ಟೆಂಡರ್ ಫಾರಂಗಳನ್ನು ಹಾಕಿ ಬಂದಿದ್ದಾರೆ. ವಿಶೇಷವೇನೆಂದರೆ ಬೇರೆಬೇರೆ ಟೆಂಡರ್ ಅರ್ಜಿಗಳನ್ನು ಸಲ್ಲಿಸಲಿಕ್ಕಾಗಿ ಮಹಾನಗರ ಪಾಲಿಕೆಯಲ್ಲಿ ಎರಡು ಬಾಕ್ಸ್ (ಪೆಟ್ಟಿಗೆ)ಗಳಿವೆ. ಆಯಾ ಟೆಂಡರುಗಳಿಗೆ ಸಂಬಂಧಿಸಿದ ಪೆಟ್ಟಿಗೆಯಲ್ಲೇ ಅರ್ಜಿಗಳನ್ನು ಹಾಕಿದ್ದರೂ ಕೂಡಾ ತಮಗೆ ಬೇಕಾದ ಅರ್ಜಿಗಳನ್ನು ಮಾತ್ರ ಪುರಸ್ಕರಿಸಿ, ಬೇಡವಾದುದನ್ನು ಸಂಬಂಧವಿಲ್ಲದ್ದೆಂದು ತಿರಸ್ಕರಿಸಲು ಈ ಎರಡು 'ಮಾಯಾ ಪೆಟ್ಟಿಗೆಗಳನ್ನು' ನಗರ ಪಾಲಿಕೆಯವರು ಬಳಸಿಕೊಳ್ಳುತ್ತಾರೆಂಬುದಕ್ಕೆ ಮೇಲೆ ಹೆಸರಿಸಿದ ಎರಡು ಟೆಂಡರ್ ಅರ್ಜಿಗಳಿಗಾದ ಗತಿಯನ್ನು ಗಮನಿಸಿದರೆ ಅರ್ಥವಾಗುತ್ತದೆ.

ದಾವಣಗೆರೆಯಲ್ಲಿ ಮೂರುನಾಲ್ಕು ಸುಲಭ್ ಶೌಚಾಲಯಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ಬಿಹಾರ ಮೂಲದ ಸತೀಶ್‌ಸಿಂಗ್ ಮತ್ತು ಎಸ್.ಎನ್. ಮಿಶ್ರಾ ಎಂಬುವವರು ಸಾಕ್ಷಿ ಇಂಟರ್‌ನ್ಯಾಷನಲ್ ಮತ್ತು ಮುಸ್ಕಾನ್ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಟೆಂಡರ್ ಹಾಕಿದ್ದಾರೆ. ಅರ್ಜಿ ಸಲ್ಲಿಸಿದ ನಂತರ ಇವರು ನಗರ ಪಾಲಿಕೆಗೆ ನಿರಂತರವಾಗಿ ಎಡತಾಕಿ ಟೆಂಡರ್ ಯಾವಾಗ ತೆಗೆಯುತ್ತೀರೆಂದು ಕೇಳಿದ್ದಾರೆ. ಎ.ಇ.ಇ. ಬೀರಾದಾರ್ ನಾಳೆ, ನಾಡಿದ್ದು ಎಂದು ಸಬೂಬು ಹೇಳಿ ಕೊನೆಗೆ ಜಿಲ್ಲಾಧಿಕಾರಿ ಮತ್ತು ನಗರ ಪಾಲಿಕೆಯ ಆಯುಕ್ತ ಇಬ್ಬರೂ ಇರಲೇಬೇಕು-ಅವರು ಊರನಲ್ಲಿಲ್ಲ ಎಂದು ಮುಂತಾಗಿ ಕೊರೆದು ಸತೀಶ್‌ಸಿಂಗ್ ಮತ್ತು ಮಿಶ್ರಾರನ್ನು ಸಾಗಹಾಕಿದ್ದಾನೆ. ಆದರೆ ದಿನಾಂಕ 9.5.2007 ರಂದೇ ಟೆಂಡರನ್ನು ತೆರೆಯಲಾಗಿದೆ ಎಂದು ಸತೀಶ್‌ಸಿಂಗ್ ಮತ್ತು ಮಿಶ್ರಾರಿಗೆ ಗೊತ್ತಾಗಿದ್ದು 30.5.2007 ರಂದು. ಇದರಿಂದ ತಲ್ಲಣಿಸಿಹೋದ ಇವರಿಬ್ಬರು ತಮ್ಮ ಟೆಂಡರು ಅರ್ಜಿ, ಡಿ.ಡಿ. ಹಾಗೂ ಚೆಕ್ಕುಗಳೇನಾದುವೆಂದು ಎ.ಇ.ಇ. ಬೀರಾದಾರನ ಮುಂದೆ ಗೋಗರೆದಾಗ 'ನೀವು ಟೆಂಡರನ್ನೇ ಹಾಕಿರುವುದಿಲ್ಲ!' ಎಂದು ಬೀರಾದಾರ ಹೇಳಿದ್ದಾನೆ.


ಪ್ರಾಣಲಿಂಗ ಶಿವಸಾಲಿ

ಅರ್ಜಿದಾರರಿಬ್ಬರೂ ನೇರವಾಗಿ ಮಹಾನಗರ ಪಾಲಿಕೆಯ ಆಯುಕ್ತ ಪ್ರಾಣಲಿಂಗ ಶಿವಸಾಲಿಯನ್ನು ಭೇಟಿ ಮಾಡಿ ಟೆಂಡರ್ ಅರ್ಜಿಗಳು ಕಾಣೆಯಾಗಿರುವ ಬಗ್ಗೆ ಕೇಳಿದಾಗ ಶಿವಸಾಲಿ ಇಂಜಿನಿಯರ್ ಬೀರಾದಾರರನ್ನು ಕರೆಸಿ 'ನನಗೇ ಗೊತ್ತಿಲ್ಲದಂತೆ ಟೆಂಡರ್ ತೆರೆದಿದ್ದೀರಾ?' ಎಂದು ಬೈದಂತೆ ನಟಿಸಿದ್ದಾನೆ. ಸಣ್ಣಪುಟ್ಟ ಕಾರಣಕ್ಕೂ ನಗರಪಾಲಿಕೆಯ ನೌಕರರು ಮತ್ತು ಇಂಜಿನಿಯರುಗಳ ಮೇಲೂ ಹರಿಹಾಯುವ ಶಿವಸಾಲಿ ತನಗೆ ಗೊತ್ತಾಗದಂತೆ ಟೆಂಡರ್ ತೆರೆದಿದ್ದರೆ ಇಷ್ಟು ದಿನಗಳ ಕಾಲ ಬಾಯಿಗೆ ಬೆಣೆ ಜಡಿದುಕೊಂಡು ಸುಮ್ಮನಿರುತ್ತಿದ್ದನೆ? ಇದು ಸಾಧ್ಯವೇ ಇಲ್ಲ ಎನ್ನುವುದು ಶಿವಸಾಲಿಯ ಅಧಿಕಾರ ದಾಹದ ಅರಿವಿರುವವರ ವಾದವಾಗಿದೆ. ಆದರೆ 'ನೀನು ಸತ್ತಂಗೆ ಮಾಡು-ನಾನು ಅತ್ತಂಗೆ ಮಾಡ್ತೀನಿ' ಎನ್ನುವ ಪಾಲಿಸಿಯನ್ನು ಆಚರಿಸುತ್ತಿರುವ ಶಿವಸಾಲಿ ದಂಡಿಯಾಗಿ ಅಮೇಧ್ಯವನ್ನು ತಿಂದು ನಗರಪಾಲಿಕೆಯ ಪುಢಾರಿಗಳ ಕಡೆಯವರಿಗೇ ಈ ಟೆಂಡರುಗಳನ್ನು ನೀಡಿರುವುದೂ ಅಲ್ಲದೆ ಅಮಾಯಕನಂತೆ ಆಕ್ಟ್ ಮಾಡಿದ್ದಾನೆ.

'ನೀವು ಟೆಂಡರನ್ನೇ ಹಾಕಿಲ್ಲ ಎನ್ನುತ್ತಲೇ-ಯಾವ ಪೆಟ್ಟಿಗೆಯೊಳಗೆ ಹಾಕಿದ್ರಿ?' ಎಂದು ಸತೀಶ್‌ಸಿಂಗ್ ಹಾಗೂ ಮಿಶ್ರಾರಿಗೆ ಬೀರಾದಾರ ಕೇಳುತ್ತಿದ್ದಾನೆ. ಇನ್ನೊಂದು ಕಡೆ 'ನನ್ನ ಗಮನಕ್ಕೇ ಬರದೆ ಟೆಂಡರ್ ನಡೆದುಹೋಗಿದೆ' ಎಂದು ಆಯುಕ್ತ ಶಿವಸಾಲಿ ಹೇಳುತ್ತಿದ್ದಾನೆ. ಟೆಂಡರ್ ಸಿಗದೇ ಇದ್ದರೆ ಹೋಗಲಿ ತಮ್ಮ ಡಿ.ಡಿ. ಮತ್ತು ಚೆಕ್ಕುಗಳೇನಾದುವೆಂದು ಬಾಯಿ ಬಡಿದುಕೊಳ್ಳುವ ಪರಿಸ್ಥಿತಿ ಸತೀಶ್ ಸಿಂಗ್ ಮತ್ತು ಮಿಶ್ರಾರದಾಗಿದೆ. ಇವರಿಗೆ ಟೆಂಡರ್ ಕೊಡದಿದ್ದರೆ ಬೇಡ ಅರ್ಜಿಗಳ ಜೊತೆಗೆ ಡಿ.ಡಿ., ಚೆಕ್ಕುಗಳನ್ನೂ ಕಾಣೆಯಾಗಿಸಿದರೆ ನಗರಪಾಲಿಕೆಯ ಅಸ್ತಿತ್ವಕ್ಕೊಂದು ಅರ್ಥವಿದೆಯಾ? ಹೀಗೇ ಮುಂದುವರೆಯಲು ಅವಕಾಶ ಸಿಕ್ಕರೆ ಆಯುಕ್ತ ಪ್ರಾಣಲಿಂಗ ನಗರಪಾಲಿಕೆಯನ್ನೇ ಹರಾಜಿಗಿಡುವ ದಿನಗಳು ದೂರವಿಲ್ಲವೆಂಬುದನ್ನು ದಾವಣಗೆರೆ ನಗರ ವಾಸಿಗಳು ಬೇಗ ಅರ್ಥಮಾಡಿಕೊಂಡರೆ ಒಳಿತು.

-ಚಂದ್ರಶೇಖರ ತೋರಣಘಟ್ಟ

ಮಹಾದಾಯಿ ಯೋಜನೆಯೂ, ಮಹಾತಾಯಿ ಯೋಚನೆಯೂ

ಸತತ ಬಾಯಾರಿಕೆಯಿಂದ ಬಳಲಿ ಬಾಯ್ತೆರೆದು ಕುಳಿತಿದ್ದ ಉತ್ತರ ಕರ್ನಾಟಕದ ಜನತೆಗೆ ಆಶಾವಾದ ಹುಟ್ಟಿಸಿದ್ದ ಮಹಾದಾಯಿ ತಿರುವು ಯೋಜನೆಗೆ ಸೋನಿಯಾ ಗಾಂಧಿ ಎಂಬ ಮಹಾತಾಯಿಯ ಯೋಚನೆಯಿಂದ ಕಲ್ಲು ಬೀಳುವ ಅಪಾಯ ಎದುರಾಗಿದೆ. ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ತಾವೊಬ್ಬ ರಾಷ್ಟ್ರನಾಯಕಿ ಎಂಬುದನ್ನು ಮರೆತು ಗೋವಾ ವಿಧಾನ ಸಭಾ ಚುನಾವಣೆಯ ಅಭ್ಯರ್ಥಿಯಂತೆ ಗೋವಾ ಮತದಾರರನ್ನು ಓಲೈಸುವ ಭರದಲ್ಲಿ ಈ ಯೋಜನೆಯನ್ನು ಜಾರಿಮಾಡಲು ಬಿಡುವುದಿಲ್ಲ ಎಂದು ಘೋಷಿಸಿದ್ದಾರೆ. ಈಗ ಗೋವಾ ವಿಧಾನಸಭಾ ಚುನಾವಣೆಯಲ್ಲಿ ಒಂದಿಷ್ಟು ಹೆಚ್ಚು ಸೀಟುಗಳನ್ನು ಕಾಂಗ್ರೆಸ್ ಗಳಿಸಿರುವುದು ನಿಜವಾದರೂ ಅವರ ಈ ಘೋಷಣೆ ಅದಕ್ಕೆಷ್ಟು ಸಹಕರಿಸಿತೋ ಗೊತ್ತಿಲ್ಲ. ಆದರೆ, ಕರ್ನಾಟಕದ ಜನತೆಯನ್ನು ಕೆರಳಿಸುವಲ್ಲಿ ಹಾಗೂ ಕರ್ನಾಟಕದ ಕಾಂಗ್ರೆಸಿಗರಿಗೆ ಒಂದಿಷ್ಟು ಇರಿಸುಮುರುಸು ಮಾಡುವಲ್ಲಿ ಮಾತ್ರ ಯಶಸ್ವಿಯಾಗಿದ್ದು ನಿಜ.

ಉತ್ತರ ಕರ್ನಾಟಕದ ಗದಗ, ಬಾಗಲಕೋಟೆ, ಧಾರವಾಡ ಜಿಲ್ಲೆಗಳ ಕುಡಿಯುವ ನೀರಿನ ಬವಣೆಯನ್ನು ಶಾಶ್ವತವಾಗಿ ಬಗೆಹರಿಸಲು ಹಲವಾರು ವರ್ಷಗಳ ಹಿಂದೆಯೇ ರೂಪುಗೊಂಡಿದ್ದ 'ಮಹದಾಯಿ ತಿರುವು ಯೋಜನೆ (ಕಳಸ-ಬಂಡೂರಿ ನಾಲಾ ಯೋಜನೆ) ಇಲ್ಲಿಯತನಕ ಹಲವಾರು ರಾಜಕೀಯ ಪುಂಡರ ಕೈಗೆ ಸಿಕ್ಕು ಓಟು ಕಮಾಯಿಸುವ ಒಂದು ಅಸ್ತ್ರವಾಗಿ ಬಳಕೆಯಾಯಿತೇ ಹೊರತು ಆ ಜಿಲ್ಲೆಗಳ ಬಾಯಾರಿಕೆಯನ್ನು ತಣಿಸಲಿಲ್ಲ. ಕರ್ನಾಟಕದಲ್ಲಿಯೇ ಹುಟ್ಟಿ ಸುಮಾರು 39 ಕಿ.ಮೀ. ಹರಿದು ನಂತರ ಗೋವಾ ಸೇರುವ ಮಹಾದಾಯಿ ನದಿಗೆ ಗದಗ ಜಿಲ್ಲೆಯ ನರಗುಂದ ಸಮೀಪದ ಕಳಸಾ-ಬಂಡೂರಿಯಲ್ಲಿ ಕಾಲುವೆ ತೋಡಿ ಅದನ್ನು ಪಕ್ಕದಲ್ಲಿಯೇ ಹರಿಯುವ ಮಲಪ್ರಭಾ ನದಿಗೆ ಜೋಡಿಸಿ ಸುಮಾರು 7.56 ಟಿಎಂಸಿ ನೀರನ್ನು ತೀರ್ಥ ಡ್ಯಾಮ್‌ನಲ್ಲಿ ಸಂಗ್ರಹಿಸಿ ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಎದುರಿಸುತ್ತಿರುವ ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗಳಿಗೆ ನೀರುಣಿಸುವ ಒಂದು ಯೋಜನೆ ಇದು. ಈ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವೇ ಈ ಯೋಜನೆಯನ್ನು ರೂಪಿಸಿ ನೀಲನಕ್ಷೆ ತಯಾರಿಸಿತ್ತಾದರೂ ನಂತರ ಅಧಿಕಾರಕ್ಕೆ ಬಂದ ಎನ್‌ಡಿಎ ಸರ್ಕಾರ ಇದಕ್ಕೆ ಒಪ್ಪಿಗೆ ನೀಡಿತ್ತು. ಆದರೆ ಈ ಯೋಜನೆಯನ್ನು ಜಾರಿಗೊಳಿಸುವಲ್ಲಿ ಅನಗತ್ಯ ಮೀನಮೇಷ ಎಣಿಸಿ ವಿಳಂಬ ಮಾಡಿದ ಕೀರ್ತಿ ಎಸ್.ಎಮ್.ಕೃಷ್ಣ ಸರ್ಕಾರಕ್ಕೆ ಸೇರಬೇಕು. ಈ ನಿರ್ಲಕ್ಷ್ಯವನ್ನು ಚೆನ್ನಾಗಿ ಬಳಸಿಕೊಂಡ ಗೋವಾ ಸರ್ಕಾರ ಕೋರ್ಟಿನ ಮೆಟ್ಟಿಲೇರಿತು. ಆದರೆ ಇದೇ ನದಿಯ ಸುಮಾರು 200 ಟಿಎಂಸಿಯಷ್ಟು ನೀರು ಅನಗತ್ಯವಾಗಿ ಅರಬ್ಬಿ ಸಮುದ್ರದ ಪಾಲಾಗುತ್ತಿರುವುದರ ಬಗ್ಗೆ ಗೋವಾ ಮೌನ ವಹಿಸಿದರೆ, ಕರ್ನಾಟಕ ಸರ್ಕಾರವೂ ತುಟಿ ಎರಡು ಮಾಡದೆ ಸುಮ್ಮನಿತ್ತು.

ಈ ಮಧ್ಯೆ ಸುಪ್ರಿಮ್‌ಕೋರ್ಟ್ "ಕುಡಿಯುವ ನೀರಿಗಾಗಿ ರೂಪುಗೊಂಡ ಯಾವುದೇ ಯೋಜನೆಗೂ ಯಾವುದೇ ಅಭ್ಯಂತರವಿಲ್ಲ" ಎಂದು ಸ್ಪಷ್ಟವಾಗಿ ತೀರ್ಪಿತ್ತಿತ್ತಲ್ಲದೆ, ಇಂತಹ ಒಂದು ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಏಕೆ ಬೇಕು ಎಂದು ಪ್ರಶ್ನಿಸಿತು. ಆದರೆ ನಮ್ಮ ಕರ್ನಾಟಕ ಸರ್ಕಾರ ಅತ್ತ ಸುಪ್ರೀಂ ಕೋರ್ಟ್‌ನ ಈ ಪ್ರಶ್ನೆಗೆ ಉತ್ತರವನ್ನೂ ನೀಡಲಿಲ್ಲ, ಇತ್ತ ಯೋಜನೆಯನ್ನು ಪೂರ್ಣಗೊಳಿಸಲೂ ಇಲ್ಲ,

ಸುಮಾರು 400 ಕೋಟಿ ರೂಪಾಯಿ ವೆಚ್ಚದ ಮಹಾದಾಯಿ ಯೋಜನೆಗೆ ರಾಜ್ಯದ ಕೋ-ಜಾ ಸರ್ಕಾರ ಇದೀಗ 100 ಕೋಟಿ ರೂ. ಬಿಡುಗಡೆ ಕಾಮಗಾರಿಗಾಗಿ ಚಾಲನೆ ನೀಡುತ್ತಿದ್ದಂತೆಯೇ ಅತ್ತ ಸೋನಿಯಾ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಅವರ ಈ ವಿರೋಧ ಗೋವಾ ಜನತೆಗೆ ಏನೋ ಭಾರಿ ಒಳ್ಳೆಯದನ್ನು ಮಾಡುವುದಕ್ಕೆ ಅಂತ ಏನೂ ಅಲ್ಲ. ಬದಲಿಗೆ, ಗೋವಾದಲ್ಲಿ ನಡೆಯಬೇಕಿದ್ದ ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಒಲಿಸುವುದಕ್ಕೆ ಮಾತ್ರ ಎಂಬುದು ಎಲ್ಲರಿಗೂ ಗೊತ್ತಿರುವ ರಹಸ್ಯ.



ಕಾವೇರಿಗಾಗಿ ಇಡೀ ಕರ್ನಾಟಕ ಒಂದಾಗಬೇಕು, ಆದರೆ ಮಹಾದಾಯಿಗೆ?

ಕಾವೇರಿ ತೀರ್ಪಿನಿಂದ ಕರ್ನಾಟಕಕ್ಕೆ ಆದ ಅನ್ಯಾಯವನ್ನು ಇಡೀ ಕರ್ನಾಟಕದ ಜನ ಒಕ್ಕೊರಲಿನಿಂದ ಪ್ರತಿಭಟಿಸಿದರು. ಕಾವೇರಿಯಿಂದ ಉತ್ತರ ಕರ್ನಾಟಕಕ್ಕೆ ಏನೂ ಉಪಯೋಗವಿಲ್ಲದಿದ್ದರೂ ಅಲ್ಲಿಯ ಜನ ಅದನ್ನೊಂದು ನಾಡಿನ ಸಮಸ್ಯೆಯಾಗಿ ಪರಿಗಣಿಸಿ ಕಾವೇರಿ ಚಳವಳಿಯಲ್ಲಿ ಧುಮುಕಿದರು. ಆದರೆ ಈಗ ಸೋನಿಯಮ್ಮನ ಅಡ್ಡಗಾಲಿನಿಂದ ಮಹಾದಾಯಿ ಯೋಜನೆಗೆ ಕಲ್ಲು ಬೀಳುತ್ತಿದ್ದರೆ ದಕ್ಷಿಣ ಕರ್ನಾಟಕದ ಜನ ಎಲ್ಲಿ ಹೋಗಿದ್ದಾರೆ ಎಂಬ ಸಹಜ ಪ್ರಶ್ನೆ ಏಳದಿರದು. ಕೆಲವು ರಾಜಕೀಯ ಪಕ್ಷಗಳು ಇದನ್ನು ವಿರೋಧಿಸಿದವಾದರೂ ಕಾಂಗ್ರೆಸ್ ಮಾತ್ರ ಕನ್ನಡಪರವಾಗಿರದೆ ಸೋನಿಯಪರವಾಗಿದೆ. ಇನ್ನು ಜನತಾ ಪರಿವಾರದ ಬಸವರಾಜ ಬೊಮ್ಮಾಯಿ, ಚೆಡ್ಡಿ ಸಿಸಿ ಪಾಟೀಲ್ ಮತ್ತು ವಿಜಯ ಕುಲಕರ್ಣಿಗಳೆಲ್ಲ ಚಿಲ್ಲರೆ ರಾಜಕಾರಣಕ್ಕಿಳಿದು ಮಹಾದಾಯಿಯನ್ನು ಮರೆತೇ ಬಿಟ್ಟಿದ್ದಾರೆ. ಇನ್ನು ಬಿಜೆಪಿಯವರಂತೂ ಸಮಸ್ಯೆ ಬಗೆಹರಿಸುವುದಕ್ಕಿಂತ ಅದನ್ನು ಜೀವಂತವಾಗಿಟ್ಟು ಬಾಡಿದ ಕಮಲಕ್ಕೆ ನೀರುಣಿಸಲು ಪರದಾಡುತ್ತಿದ್ದಾರೆ.

ಇನ್ನು ಸೋನಿಯಾ ಮಾತಿಗೆ ವಿರೋಧ ವ್ಯಕ್ತಪಡಿಸುವ ಎದೆಗಾರಿಕೆ ರಾಜ್ಯದ ಕಾಂಗ್ರೆಸಿಗರಿಗೆ ಎಲ್ಲಿಂದ ಬರಬೇಕು? ಹೀಗಾಗಿ ಆ ಹೇಳಿಕೆಯನ್ನು ವಿರೋಧಿಸಲೂ ಆಗದೆ, ಸಮರ್ಥಿಸಲೂ ಆಗದೆ ಒಂದು ರೀತಿಯಲ್ಲಿ ಇಂಗು ತಿಂದ ಮಂಗನ ಹಾಗೆ ಆಗಿಹೋಗಿದೆ ಅವರ ಸ್ಥಿತಿ.

ಕರವೇ ಎಲ್ಲಿ?

ಕಾವೇರಿ ಹೋರಾಟದಲ್ಲಿ ಭಾರಿ ಫೋಸು ಕೊಟ್ಟುಕೊಂಡು ಓಡಾಡಿದ್ದ ಕರ್ನಾಟಕ ರಕ್ಷಣಾ ವೇದಿಕೆಗಳು ಈಗ ಎಲ್ಲಿ ಹೋಗಿವೆ ಎಂದು ಉತ್ತರ ಕರ್ನಾಟಕದ ಜನ ಕೇಳುತ್ತಿದ್ದಾರೆ. ಎಲ್ಲೆಲ್ಲಿ ಮಾಧ್ಯಮದವರು ಬರುತ್ತಾರೋ ಅಲ್ಲಿಗೆ ಮಾತ್ರ ಬಂದು ಇದರ ಬಗ್ಗೆ ಒಂದಿಷ್ಟು ಮಾತನಾಡಿ ಹೋದರೇ ವಿನಃ ಇದೊಂದು ಗಂಭೀರ ಹೋರಾಟವನ್ನಾಗಿ ಪರಿಗಣಿಸಲೇ ಇಲ್ಲ. ಈ ಹುಟ್ಟು ಹೋರಾಟಗಾರರು ಎಲ್ಲೆಲ್ಲಿ ಯಾವ್ಯಾವ ದೀಲಿಗಿಳಿದಿದ್ದಾರೋ ಗೊತ್ತಿಲ್ಲ. ಆದರೆ, ಕಾವೇರಿ ವಿಷಯದಲ್ಲಿ ತೋರಿಸಿದ್ದ ಪೌರುಷವನ್ನು ಮಹಾದಾಯಿ ಹೋರಾಟದಲ್ಲಿ ತೋರಿಸದಿರುವುದನ್ನು ನೋಡಿದರೆ ಅವರ ಹೋರಾಟ ನೈಜ ಕಾಳಜಿಯದೇ ಎಂಬ ಅನುಮಾನ ಹುಟ್ಟದಿರದು.

-ಹುರಳಿಕುಪ್ಪಿ ವಿನಯ್

ಕನ್ನಡ ಸಿನಿಮಾಗೆ ಇತ್ತೀಚೆಗೆ ಎಂಟ್ರಿ ಪಡೆದಿರುವ ಪ್ರೇಮ್, ವಿಜಯ್ ಎಲ್ಲರೂ ಕಾಣಾತನವಿರುವ ಹೊಸ ಕತೆ. ಹಾಡು ಸೃಷ್ಟಿಸುತ್ತಿದ್ದರೆ ಕಾಮಿಡಿ ಟೈಂ ಗಣೇಶ್ ಬೇರೆ ದಾರಿ ಹಿಡಿದಿದ್ದಾನೆ. ಗಣೇಶನ ಹೊಸ ಸಿನಿಮಾ 'ಹುಡುಗಾಟ' ಹಂಡ್ರೆಡ್ ಪರ್ಸೆಂಟ್ ಕಳ್ಳತನದ ಒಂದು ಸಿನಿಮಾ ಎಂಬುದೀಗ ಸಾಬೀತಾಗಿದೆ. ನಟಿಸುವ ಕಲೆ, **charming face**, ಲವಲವಿಕೆ ಎಲ್ಲಾ ಇದ್ದರೂ ಗಣೇಶ್‌ಗೆ ಒಳ್ಳೆಯದು, ಕೆಟ್ಟದ್ದರ ಲೆಕ್ಕಾಚಾರವೇ ಗೊತ್ತಿದ್ದಂತಿಲ್ಲ.

ನಿಮಗೆ ಹಿಂದಿಯ ಮಹೇಶ್ ಭಟ್ ನಿರ್ದೇಶನದ 'ದಿಲ್ ಹೈ ಕಿ ಮಾನ್‌ಗ್‌ತಾ ನಹೀ' ಸಿನಿಮಾ ಗೊತ್ತಿರಬಹುದು. ಸೂಪರ್ ಹಿಟ್ ಆದ ಈ ಸಿನಿಮಾದ ಕತೆಯನ್ನೇ ಯಾರನ್ನೂ ಹೇಳದೆ ಕೇಳದೆ, ಅನುಮತಿ ಪಡೆಯದೆ ಕನ್ನಡದಲ್ಲಿ ರೀಲು ಸುತ್ತಿ ರಿಲೀಸ್ ಮಾಡಲಾಗಿದೆ. ತಮಾಷೆ ಎಂದರೆ 'ಹುಡುಗಾಟ'ದ ನಿರ್ದೇಶಕ ಸಂಜಯ್ ಎಂಬ ಬಾಲಕ 'ಇದು ನಂದೇ ಸ್ವಂತ ಕತೆ' ಎಂದು ಈಗಲೂ ಕಚ್ಚೇ ಹಿಡಿದು ಗೋಗರೆಯುತ್ತಿರುವುದು. ಇದಕ್ಕೆ ಹಿಮ್ಮೇಳದಂತೆ ರಿಯಲ್ ಎಸ್ಟೇಟ್ ಕುಳ, ನಿರ್ಮಾಪಕ ಬಾಬುರೆಡ್ಡಿ ಕೂಡ 'ಇದು ನಿರ್ದೇಶಕರದ್ದೇ ಸ್ವಂತ ಕತೆ' ಅಂತಾ ಫಿಲಂ ಚೇಂಬರ್‌ಗೆ ಪತ್ರ ಬರೆದು ಕೊಟ್ಟಿದ್ದಾರೆ. ಹೀರೋ ಗಣೇಶ್ ಮಾತ್ರ ಸೀನ್‌ನಲ್ಲೆಲ್ಲೂ ಕಾಣುತ್ತಿಲ್ಲ.

ಈ ಸಮಜಾಯಿಷಿ ಜಗಳಗಳಿಗೆ ಕಾರಣವೇನು ಗೊತ್ತೆ?

ಕಾಮಿಡಿ ಟೈಂ ಗಣೇಶ್ ಈಗ ಇಂತಾ ಅವಿವೇಕಿ ಚೋರ ವಿದ್ಯಾ ಪಾರಂಗತರ ಕೈಲಿ ಸಿಕ್ಕಿ ಹಾಕಿಕೊಂಡು ಹಳಸಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾನೆ. ಪ್ರತಿಭೆ ಇರದವರ ಜೊತೆ ಸೇರಿದರೆ ತನ್ನ ಸಿನಿಮಾ ಕೆರಿಯರ್‌ಗೆ ಏನಾಗುತ್ತದೆಂಬ ಎಚ್ಚರ ಗಣೇಶ್‌ಗೆ ಇದ್ದಂತಿಲ್ಲ.

ಜೂನ್ 8 ರಂದು 'ಹುಡುಗಾಟ'ದ ಮೊದಲ ಶೋ ನೋಡಲು ಹೋದ ಕ್ಲೆಮೆಂಟ್ ಜನರಿಗೆ ದಿಗ್ಭ್ರಮೆ....! ಇಡೀ ಸಿನಿಮಾ ಹೋಲ್‌ಸೇಲಾಗಿ ಕಳ್ಳತನವಾಗಿತ್ತು. ರಿಮೇಕ್ ಪ್ರವೀಣ ಎಸ್. ನಾರಾಯಣ್ ಹತ್ತಿರ ಶಿಷ್ಯವೃತ್ತಿ ಮಾಡಿಕೊಂಡಿದ್ದ ಸಂಜಯ್ ಅದೆಷ್ಟೆಂತಹ ಪ್ರಚಂಡನೆಂದರೆ ಬರೀ ದಿಲ್ ಹೈ ಅಷ್ಟನ್ನೇ ಕದಿಯದೆ ಜೊತೆಗೆ ತೆಲುಗಿನ ದೊಂಗುಡು, ಆರ್ಯ ಸಿನಿಮಾಗಳ ಸೀನ್‌ಗಳನ್ನು ಕದ್ದು 'ಹುಡುಗಾಟ'ದಲ್ಲಿ ತುರುಕಿದ್ದಾನೆ. ಅಲ್ಲಿಗೂ ತೃಪ್ತಿಯಾಗದೇ ಮಲೆಯಾಳಿ ಸಿನಿಮಾವೊಂದರ ಹಾಡುಗಳ ಟ್ಯೂನ್, ಸೀನ್‌ಗಳನ್ನೂ ಕದ್ದು 'ಹುಡುಗಾಟ'ದ ಹೊಟ್ಟೆ ತುಂಬಿಸಿದ್ದಾನೆ. ಈ ಪರಿ ಹಗಲು ಕಳ್ಳತನ ಮಾಡಿದ ಮೇಲೂ 'ನಂದೇ ಸ್ವಂತ ಕತೆ' ಎನ್ನುವ ಭಂಡತನ ಇವನದ್ದು. ಹಾಗೆ ಹೇಳಬೇಕೆಂದರೆ ಇವತ್ತಿನ ಕನ್ನಡದ ಕೆಲವು ನಿರ್ದೇಶಕರಿಗೆ ನಾಲ್ಕಾರು ಬೇರೆ ಸಿನಿಮಾಗಳ ಕತೆ ಕದ್ದು ಹೊಸ ಹಳಸಲು ಕನ್ನಡ ಸಿನಿಮಾ ತಯಾರಿಸುವ ರೋಗ

ಜೊತೆಗೆ ಚೇಂಬರ್‌ಗೂ ದೂರು ಕೊಟ್ಟು ... ನಿರ್ಮಾಪಕರ ಸಂಘಕ್ಕೂ ಹೋಗಿ ಕಂಪ್ಲೆಂಟು ಕೊಟ್ಟು ಬಂದಿದ್ದಾರೆ. ಸಂಘದ ಕಾರ್ಯದರ್ಶಿ ಜೋ ಸೈಮ... ಗೀಗ ರಾಜಿ ಪಂಚಾಯತಿ ಮಾಡಿಸಬೇಕಾದ ಕರ್ಮ... ಬೇರೆ. ಈ 'ಹುಡುಗಾಟ' ಸಿನಿಮಾದ ಅಸಲಿ ಮು...



ಗಣೇಶ್ ದುರ್ಗತಿ

ಕ್ಲೆಮೆಂಟ್ ಕ್ರಿಯೇಷನ್ಸ್ ಎಂಬ ಚೆನ್ನೈನ ಕಂಪನಿಯೊಂದು 'ದಿಲ್ ಹೈ.....'ನ ಕನ್ನಡ, ತೆಲುಗು, ತಮಿಳು ಹಾಗೂ ಮಲೆಯಾಳಂನ ರಿಮೇಕ್ ಹಕ್ಕು ತೆಗೆದುಕೊಂಡಿದೆ. ಅದಕ್ಕೆಂದು ಹತ್ತಿರತ್ತಿರ 2 ಕೋಟಿಯಷ್ಟು ದುಡ್ಡೂ ಸುರಿದಿದೆ. ಹೀಗಿರುವಾಗ ಈ ಸಂಜಯ ಎಂಬ ನಿರ್ದೇಶಕ ಪ್ರತಿಭೆ ಇಡೀ ಕತೆಯನ್ನೇ ಹೋಲ್‌ಸೇಲಾಗಿ ಕದ್ದು, ನಿರ್ಮಾಪಕ ಬಾಬುರೆಡ್ಡಿಗೆ 'ಇದು ನಂದೇ ಸ್ವಂತ ಕತೆ' ಅಂತಾ ರೀಲು ಬಿಟ್ಟು, ಇಡೀ ಕನ್ನಡ ಸಿನಿಮಾ ಇಂಡಸ್ಟ್ರಿಯ ಮಾನವನ್ನೇ ಹರಾಜು ಹಾಕಿಬಿಟ್ಟಿದ್ದಾನೆ. 'ಹುಡುಗಾಟ' ಸಿನಿಮಾ ಕತೆ ಬಗ್ಗೆ ಕೊಂಚ ಡೌಟು ಬಂದ ಕಾರಣ ಕ್ಲೆಮೆಂಟ್ ಕ್ರಿಯೇಷನ್ಸ್‌ರವರು ಮೊದಲಿಂದಲೂ ಒಂದು ಕಣ್ಣಿಟ್ಟಿದ್ದರಂತೆ. ಸಿನಿಮಾ ಮುಗಿದು ಇನ್ನೇನು ರಿಲೀಸ್ ಆಗಬೇಕೆನ್ನುವಾಗ ಕಳೆದ ವಾರ ಚೇಂಬರಿಗೆ ಹೋದ ಕಂಪನಿಯವರು 'ನಮಗೊಂದು ಸಾರಿ ಸಿನಿಮಾ ತೋರಿಸಿ, ಇದು ನಮ್ಮ ಕತೆ' ಅಂತ ಕೇಳಿದರೆ 'ಹುಡುಗಾಟ'ದ ನಿರ್ದೇಶಕ-ನಿರ್ಮಾಪಕರದ್ದು ಮತ್ತದೇ 'ಇದು ನಮ್ದೇ ಸ್ವಂತ ಕತೆ' ಎಂಬ ಟೊಳ್ಳು ರಾಗ. ಕೊನೆಗೆ ಫಿಲಂ ಚೇಂಬರಿನವರು "ಹುಡುಗಾಟ' ಈಗ ರಿಲೀಸ್ ಆಗಲಿ, ಆಮೇಲೆ ನೀವೊಂದು ಸಾರಿ ಸಿನಿಮಾ ನೋಡಿ. ಅದು ನಿಮ್ಮದೇ ಕತೆ ಅಂತಾದರೆ ಆಮೇಲೆ ನೋಡೋಣಂತೆ' ಎಂದು ತಿಪ್ಪೆ ಸಾರಿಸಿದ್ದಾರೆ. ಸರಿ ಎಂದು ಮೊನ್ನೆ

ಬಲವಾಗೇ ಅಂಟಿಕೊಂಡಿದೆ. ಒರಿಜಿನಲ್ ಕತೆ, ದೃಶ್ಯ, ಹಾಡಿನ ಟ್ಯೂನ್, ಕೊರಿಯೊಗ್ರಫಿ.... ಉಹುಂ ಇದ್ಯಾವುದರಲ್ಲೂ ಸ್ವಂತಿಕೆ ತೋರಿಸಲಾಗದ ಬರಡು ಜನ ಇವರು. ಈ ರೀತಿ **cut & paste** ಮಾಡುವ ಚಾಳಿಯಿರುವವರೇ

ಗೋಧಿಹಿಟ್ಟಿನ ಮುಖದ ನಟಿ ರೇಖಾ

ರೇಖಾಳ ಸೂಪರ್ ಹಿಟ್ ಸಿನಿಮಾ 'ಚಿತ್ರ' ಬಂದು ಇನ್ನೇನು ಒಂದು ದಶಕವಾಗಿ ಹೋಯಿತು. ಅವತ್ತು ಫ್ರೆಶ್ ಮುಖದ ಈ ನಟಿ ರೇಖಾ ಚೆಂದಾಗಿ ಕಾಣಿಸಿದ್ದಳು. ಚೂರುಪಾರೂ ನಟಿಸಲು ಯತ್ನಿಸಿದ್ದಳು. ಆದರೆ ಈಗಿನ 'ಹುಡುಗಾಟ' ಒಂದು ಸಾರಿ ನೋಡಿದರೆ, ಅದರಲ್ಲೂ ರೇಖಾಳ ಕೆಲಸ ಗಮನಿಸಿದರೆ ನಗು ಬರುವಂತಿದೆ. ನಟನೆಯ ಎ,ಬಿ,ಸಿ,ಡಿ,ಯೂ ಗೊತ್ತಿರದ ಹಿರೋಯಿನ್ ರೇಖಾ ಎಂಬುದೂ ಗೊತ್ತಾಗುತ್ತದೆ. ಹುಡುಗಾಟವೇನಾದರೂ ಅಕಸ್ಮಾತ್ ಜನಕ್ಕೆ ಇಷ್ಟವಾದರೆ ಅದಕ್ಕೆ ಗಣೇಶ್ ನಟನೆ ಹಾಗೂ 'ಏನೋ ಒಂಥರಾ' ಹಾಡೇ ಕಾರಣ, ಆದರೆ ಸಿನಿಮಾ ತೋಪಾದರೆ ರೇಖಾಳ ಅಸಂಬದ್ಧ ಬರಡು ನಟನೆಯೇ ಹೊಣೆ, ಹಾಗಿದೆ ರೇಖಾಳ ಪ್ರತಿಭೆ. ಇನ್ನು ಕ್ಯಾಮೆರಾಮೆನ್ ಸತ್ಯ ಹೆಗಡೆಗೆ ಅದೇನು ಮಂಕು ಕವಿದುಕೊಂಡಿತ್ತೋ ಏನೋ ಸಿನಿಮಾದುದ್ದಕ್ಕೂ ರೇಖಾ ಮುಖ ಗೋಧಿ ಹಿಟ್ಟು ನಾದಿ ತಯಾರಿಸಿದ ಬೊಂಬೆಯ ಮುಖದಂತೆಯೇ ಕಾಣಿಸುತ್ತಾ ನೋಡುಗರ ಪ್ರಾಣ ತಿನ್ನುತ್ತದೆ. ಮೊದಲೇ ನಟನೆ ಬಾರದ ಹುಡುಗಿ ಈಕೆ, ಇನ್ನು ಮುಖದಲ್ಲಿ ಯಾವ ಭಾವನೆಯನ್ನು ತೋರಿಸುವ ಟ್ಯಾಲೆಂಟು ಇರದ ರೇಖಾ ತನ್ನ ಪಾತ್ರ ನಿಭಾಯಿಸಲಾಗದೆ ಸೋತಿದ್ದಾಳೆ.

ಇಂತಾ ಬರಡು ನಟಿಯೂ ಇನ್ನೂ ಮೂರ್ನಾಲ್ಕು ಕನ್ನಡ ಸಿನಿಮಾಗಳಲ್ಲಿ ನಟಿಸುತ್ತಿದ್ದಾಳೆಂಬ ಸುದ್ದಿಯಿದೆ.

ಕನ್ನಡ ಪ್ರೇಕ್ಷಕರನ್ನು ಆ ದೇವರೂ ಕಾಪಾಡಲಾರ ಬಿಡಿ.



ಬಿಳಿದಾಳೆ ಈಶ

ಕೊನೆಗೆ 'ಕನ್ನಡ ಸಿನಿಮಾಗೆ ಪ್ರೇಕ್ಷಕರ ಕೊರತೆಯಿದೆ' ಇತ್ಯಾದಿ ಓಳು ಬೇರೆ ಬಿಡುತ್ತಿರುತ್ತಾರೆ.

ಕಾಮಿಡಿ ಟೈಂ ಗಣೇಶ್ ಈಗ ಇಂತಾ ಅವಿವೇಕಿ ಚೋರ ವಿದ್ಯಾ ಪಾರಂಗತರ ಕೈಲಿ ಸಿಕ್ಕಿ ಹಾಕಿಕೊಂಡು ಹಳಸಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾನೆ. ಪ್ರತಿಭೆ ಇರದವರ ಜೊತೆ ಸೇರಿದರೆ ತನ್ನ ಸಿನಿಮಾ ಕೆರಿಯರ್‌ಗೆ ಏನಾಗುತ್ತದೆಂಬ ಎಚ್ಚರ ಗಣೇಶ್‌ಗೆ ಇದ್ದಂತಿಲ್ಲ, ದರ್ಶನ್ ಬಂದ ಹೊಸತರಲ್ಲೂ ಹೀಗೇ ಕೆಲವು ಚೋರರು ಸಾಲುಸಾಲಾಗಿ ಸಿನಿಮಾ ತೆಗೆದು ದರ್ಶನ್‌ನ್ನು ಅರ್ಧ ಹಾಳು ಮಾಡಿದ್ದರು. ಯಾವ್ಯಾವುದೋ ಭಾಷೆಯ ಹಿಟ್ ಸಿನಿಮಾಗಳ ಕತೆ, ದೃಶ್ಯ ಕದಿಯುವುದು, ಹಾಡಿನ ಟ್ಯೂನ್ ಭಟ್ಟಿ ಇಳಿಸಿ ಪ್ರೇಕ್ಷಕರ ತಲೆ ತಿನ್ನುವುದೆಲ್ಲ ಮೊದಲಿಂದಲೂ ನಡೆಯುತ್ತಿದೆ. ಇದೇ ದರ್ಶನ್‌ನ ಸುಂಟರಗಾಳಿ ಮಾಡಿದ ಓಂಪ್ರಕಾಶ್ ರಾವ್ ಟೈಟಲ್ ಸಾಂಗ್ ಅನ್ನು ತಿರುಡಾ ತಿರುಡಿಯಿಂದ ಪಿಕ್ ಪಾಕೆಟ್ ಮಾಡಿದ್ದ.



ನಿರ್ದೇಶಕ ಸಂಜಯ್

ಕದ್ದಿದ್ದ ಕತೇನೇ ಮತ್ತೆ ಕದ್ದರು

ಚೆನ್ನೈನ ಕ್ಲೆಮೆಂಟ್ ಕ್ರಿಯೇಷನ್ಸ್‌ನ ಜನ ಈಗ ಬೆಂಗಳೂರಿನ ಲಾಯರ್ ಭವಾನಿಯವರ ಮೂಲಕ 'ಹುಡುಗಾಟ' ನಿರ್ಮಾಪಕ ಬಾಬುರೆಡ್ಡಿಗೆ ಒಂದು ಲೀಗಲ್ ನೋಟೀಸ್ ಕಳಿಸಿದ್ದಾರೆ.



ನಿರ್ಮಾಪಕ ಬಾಬು

ವಿಚಾರ ಏನು ಗೊತ್ತೆ?

ಇದು ಮಹೇಶ್ ಭಟ್‌ರ 'ದಿಲ್ ಹೈ....'ನ ನಕಲು ಎಂಬುದು ಒಂದು ವಿಚಾರವಾದರೆ ಆ ದಿಲ್ ಹೈ ಎಂಬುದೂ ಇಂಗ್ಲಿಷ್‌ನ **It happened one night**ನ ನಕಲು. ಹಾಗಾಗಿ ಒಟ್ಟಾರೆ ಗಣೇಶನ 'ಹುಡುಗಾಟ' ಈಗಾಗಲೇ ಕದ್ದ ಕತೆಯನ್ನೇ ಮತ್ತೊಮ್ಮೆ ಕದ್ದು ಭಟ್ಟಿ ಇಳಿಸಿರುವ ಸಿನಿಮಾ ಆಗಿದೆ. ಇದು ಗೊತ್ತಾಗಿಯೋ ಏನೋ ಈಗ ಬಾಬುರೆಡ್ಡಿ-ಸಂಜಯರೆಂಬ ಹುಂಬರ ಜೋಡಿ 'ಬರಲಿ, ಅದ್ಯಾರ್ ಬರ್ತಾರೋ ನಾವು ನೋಡ್ತೀವಿ, 'ದಿಲ್ ಹೈ'ನ ಯಾರು ಎಲ್ಲಿಂದ ಕದ್ದರೂಂತ ಸಾಕ್ಷಿಸಮೇತ ತೋರಿಸ್ತೀವಿ' ಎಂದು ರೆಡಿಯಾಗಿ ನಿಂತಿದ್ದಾರೆ. ಎಲ್ಲರಿಗೂ ಗೊತ್ತಿರುವಂತೆ ಹಿಂದಿಯ ಮಹೇಶ್ ಭಟ್ ಕೂಡಾ ಚೋರಾ ವಿದ್ಯಾಧರನೆ. ಆದರೆ ಹಾಗಂತ ಒಬ್ಬ ಕಳ್ಳನ ಸರಕನ್ನು ಇನ್ನೊಬ್ಬ ಕಳ್ಳ ಮತ್ತೆ ಕದ್ದು ಒರಿಜನಲ್ ಕಳ್ಳ ನಾನೇ ಎಂದು ಚೀರಿಕೊಂಡಂತಾಗುವುದಿಲ್ಲವೆ ಗಣೇಶ್ ಟೀಂನವರ ವರ್ತನೆ.

ಗಣೇಶ್ ಪೆದ್ದುತನ

ಹೀರೋ ಗಣೇಶನ ಪೆದ್ದುತನದ ಆಳವೆಷ್ಟು ಎಂಬುದು ತಕ್ಷಣಕ್ಕೆ ಗೊತ್ತಾಗುತ್ತಿಲ್ಲ, ಯಾಕೆಂದರೆ ನಟನೊಬ್ಬ ಹೊಸ ಸಿನಿಮಾ ಒಪ್ಪಿಕೊಳ್ಳುವಾಗ ಕನಿಷ್ಠವೆಂದರೂ ಅದರ ಕತೆ ಕೇಳಿ ಕೊಳ್ಳುತ್ತಾನೆ. ಅದು ರೀಮೇಕಾ ಇಲ್ಲಾ ಸ್ವಮೇಕಾ ಎಂಬುದನ್ನು ಗಮನಿಸಿ ಕೊಂಡಿರುತ್ತಾನೆ. ಸಹಕಲಾವಿದರಾರೆಂಬುದೂ ಅವನಿಗೆ ಗೊತ್ತಿರಬೇಕಾಗುತ್ತದೆ. ಆದರೆ 'ಹುಡುಗಾಟ' ಒಪ್ಪಿಕೊಳ್ಳುವಾಗ ಗಣೇಶ್‌ಗೆ ಆ ಬಗ್ಗೆ ನಿಗಾ

▶▶ 12

ಆರ್.ಟಿ.ಓ. ಟ್ರಾನ್ಸ್‌ಫರ್ ಕೊಳ್ಳೆ!

ಚಲುವರಾಯನ ಬಂಡಾಯ

ಸುದ್ದಿ ವಿಚಿತ್ರವಾದರೂ ಸುಳ್ಳಲ್ಲದಿಲ್ಲ. ಸಾರಿಗೆ ಮಂತ್ರಿ ಚಲುವರಾಯಸ್ವಾಮಿ ಇದ್ದಕ್ಕಿದ್ದಂತೆ ಭೂಗತರಾಗಿದ್ದಾರೆ!

ಅವರ ವಿಧಾನಸೌಧದ ಮಂತ್ರಿ ಛೇಂಬರ್ ಮುಂದೆ ವಸೂಲಿಗೆ ನಿಂತ ಆರ್.ಟಿ.ಓ. ಇನ್ಸ್‌ಪೆಕ್ಟರ್‌ಗಳ ಹಿಂದಿನಿಂದ, ಗೃಹಕಚೇರಿಗೆ ಮುತ್ತಿದ ಟ್ರಾನ್ಸ್‌ಫರ್ ಬ್ರೋಕರ್‌ಗಳ ಹಂಗಿನಿಂದ, ಮತ್ತು ಮಾತುಮಾತಿಗೆ ಕೆಣಕುವ ಪತ್ರಿಕಾ ವರದಿಗಾರರಿಂದ ಬಚಾವಾಗುವುದಕ್ಕೆಂದೇ ಚಲುವರಾಯರು ಅಜ್ಞಾತವಾಸದ ಮೋರೆ ಹೊಕ್ಕಿದ್ದಾರೆ!

ಅದು ಜೆಡಿಎಸ್‌ಗೆ ವಿದಾಯ ಹೇಳುವ ಪೂರ್ವತಯಾರಿಯಾ? ಅಥವಾ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟೇ ತೀರುವುದರ ಮುನ್ಸೂಚನೆಯಾ? ಅಥವಾ ಅಪ್ಪಾಜಿ ದೇವೇಗೌಡರ ವಿರುದ್ಧ ತಿರುಗಿಬೀಳುವ ಸನ್ನಾಹವಾ?



ಹಾಗಂತ ಪ್ರಶ್ನೆ ಹಾಕಿದ ವರದಿಗಾರನೊಬ್ಬನಿಗೆ 'ಯಾರ್ರೀ ಹೇಳಿದ್ದು?' ಎಂದಷ್ಟೇ ಚಲುವರಾಯರು ಮರುಪ್ರಶ್ನೆ ಹಾಕುತ್ತಾರೆಂದರೆ ಏನರ್ಥ? ಅಷ್ಟಕ್ಕೂ ಮೀಡಿಯಾಗಳ ಮೇಲೆ ಬಿದ್ದು ಹಲ್ಲುಕಿರಿಯುತ್ತಿದ್ದ ಚಲುವಣ್ಣ ಇದ್ದಕ್ಕಿದ್ದಂತೆ ಏಕೆ ಭೂಗತರಾಗಿದ್ದಾರೆ? ನಿನ್ನೆಮೊನ್ನೆಯ ತನಕ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಮುಂದುವರಿಯುತ್ತಾರೆಂದು ಢೋಲು ಬಾರಿಸುತ್ತಿದ್ದವರು ಈಗ ಏಕಾಏಕಿ 'ಯಡಿಯೂರಪ್ಪನವರನ್ನು ಮುಂದಿನ ಸೀಯೆಮ್ ಮಾಡೋಲ್ಲ ಅನ್ನಲು ಇಕ್ಬಾಲ್ ಅನ್ಸಾರಿ ಯಾರು?' ಎಂದು ಏಕೆ ಉಲ್ಟಾ ಹೊಡೆಯುತ್ತಿದ್ದಾರೆ?

ಇದಕ್ಕೆಲ್ಲ ಒಂದೇ ಉತ್ತರವೆಂದರೆ; ಸಾರಿಗೆ ಮಂತ್ರಿ ಚಲುವರಾಯಸ್ವಾಮಿ ತಿರುಗಿಬಿದ್ದಿದ್ದಾರೆ!

ಅವರ ಜೊತೆ ಮತ್ತೊಬ್ಬ ಮಂತ್ರಿ ಜಿ.ಟಿ. ದೇವೇಗೌಡರೂ ಕೈಜೋಡಿಸಿದ್ದಾರೆ. ಬಹುಶಃ ಮುಂದೊಮ್ಮೆ ಅರಣ್ಯ ಮಂತ್ರಿ ಚೆನ್ನಿಗಪ್ಪನವರೂ ಇಂಥ ಬಂಡುಕೋರರ ಪಡೆಗೆ ಜಮೆಯಾಗಲಿದ್ದಾರೆ!

ಜೆಡಿಎಸ್‌ನ ದೇವೇಗೌಡ ವಿರೋಧಿ ಬಣದ ಈ ಗುಂಪಿಗೆ ಪೊಲೀಸು ಮಂತ್ರಿ ಎಂ.ಪಿ. ಪ್ರಕಾಶ್ ತೆರೆಮರೆಯಲ್ಲಿದ್ದು ಆಶೀರ್ವದಿಸುತ್ತಿದ್ದಾರೆಯೇ? ಮಹಿಮಾ ಪಟೇಲ್, ದರ್ಶನಾಪುರ, ಬಯ್ಯಾಪುರ ಇತ್ಯಾದಿ ಒಂದು ಡಜನ್ ಜೆಡಿಎಸ್ ಶಾಸಕರು ಇವತ್ತಲ್ಲ ನಾಳೆ ಚಲುವರಾಯರ ಜೊತೆ ದನಿಗೂಡಿಸಲಿದ್ದಾರೆಯೇ!

ಹೀಗೆ ಹೊಗೆಯಾಡುವ ಅಂತೆಕಂತೆಗಳ ಮೂಲವನ್ನು ಕೆದಕುತ್ತಾ ಹೋದಂತೆಲ್ಲ; ಚಲುವನಿಗೂ ಕುಮಾರಣ್ಣನಿಗೂ ಮಧ್ಯೆ ನಂಟೆಲ್ಲಿ ಹಳಿಸಿತೆಂಬುದರ ವಾಸನೆಯೂ ಬಡಿಯುತ್ತದೆ.

Once again ಅದು ಆರ್.ಟಿ.ಓ. ಟ್ರಾನ್ಸ್‌ಫರ್ ಕೊಳ್ಳೆಯ ಕತೆಯೆ!

ಇದೇ ಜೂನ್ ನಾಲ್ಕನೇ ತಾರೀಖಿಗೆ ಹೊರಬಿದ್ದ ಬ್ರೇಕ್ ಇನ್ಸ್‌ಪೆಕ್ಟರ್ಸ್ ಮತ್ತು ಹಿರಿಯ ಮೋಟಾರು ವಾಹನ ನಿರೀಕ್ಷಕರ ವರ್ಗಾವರ್ಗಿ ಪಟ್ಟಿಗೂ, ಸಾರಿಗೆ ಮಂತ್ರಿ ಚಲುವರಾಯಸ್ವಾಮಿ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆಂಬ ವದಂತಿ ಹಬ್ಬುವುದಕ್ಕೂ ನಿಗೂಢ ಸಂಬಂಧವಿತ್ತು. ಚಲುವರಾಯರು ರೆಕಮಂಡ್ ಮಾಡಿ ಕಳಿಸಿದ್ದ ಇಡೀ ಪಟ್ಟಿಯನ್ನು ಸಾರಿಗೆ ಕಮೀಷನರ್ ನಾರಾಯಣಗೌಡರು ಸಾರಾಸಗಟಾಗಿ ಕಸದ ಬುಟ್ಟಿಗೆ ಎಸೆದಿದ್ದರು. ಮತ್ತು ಮುಖ್ಯಮಂತ್ರಿಗಳು ಕೊಟ್ಟ ಪಟ್ಟಿಯನ್ನೇ ಅಂತಿಮಗೊಳಿಸಿಬಿಟ್ಟರು!

ಆ ಹೊತ್ತಿಗಾಗಲೇ ಖದೀಮ ಬ್ರೇಕ್ ಇನ್ಸ್‌ಪೆಕ್ಟರ್ ವೆಂಕಟೇಶ್ ಮಳ್ಳಿಗೇರಿ ಗ್ಯಾಂಗಿನಿಂದ, ಮತ್ತೊಬ್ಬ ಆರ್.ಟಿ.ಓ. ಇನ್ಸ್‌ಪೆಕ್ಟರ್ ಮಂಜೇಗೌಡನ ಕೂಟದಿಂದ ಬಿಜಾಪುರದ ಝುಳಕಿ, ಬೆಳಗಾವಿಯ ರಾಮನಗರ, ಬೆಂಗಳೂರಿನ ಅತ್ತಿಬೆಲೆಯಂಥ ಫಲವತ್ತಾದ ಚೆಕ್‌ಪೋಸ್ಟ್‌ಗಳಿಗೆಂದು ಚಲುವಣ್ಣ ಸರಿಸುಮಾರು 18 ಕೋಟಿ ರೂಪಾಯಿಗಳನ್ನು ಅಡ್ವಾನ್ಸ್ ಪಡೆದಾಗಿತ್ತು. ಹೇಳಿದಂತೆ ಟ್ರಾನ್ಸ್‌ಫರ್ ನಡೆದಿದ್ದರೆ ಅದೇ ಮೂವತ್ತು ಕೋಟಿಯ ಡೀಲು. ಯಾವತ್ತು ಸಾರಿಗೆ ಮಂತ್ರಿಯೆ ನಿಂತು ಅಡ್ವಾನ್ಸ್ ಜೇಬಿಗಿಳಿಸಿದ ಮೇಲೂ ದುಡ್ಡು ಕೊಟ್ಟು ಟ್ರಾನ್ಸ್‌ಫರ್ ಆದೇಶಕ್ಕಾಗಿ ಕಾದು ನಿಂತಿದ್ದ ಬ್ರೇಕ್ ಇನ್ಸ್‌ಪೆಕ್ಟರ್‌ಗಳಿಗೆ ಮೋಸವಾಯಿತೆಂದರೆ; ಕೊಟ್ಟ ದುಡ್ಡು ವಾಪಸ್ಸು ಮಡಗಿ ಅಂತ ಕೇಳದೇ ಇರುತ್ತಾರಾ?



ಈಗ ಸಾರಿಗೆ ಮಂತ್ರಿಗಾಗಿರುವುದೂ ಇದೇ ಗತಿ. ಛೇಂಬರಿಗೆ ಬಂದರೆ ಕೊಟ್ಟ ದುಡ್ಡು ವಾಪಸ್ಸು ಮಾಡಿ ಅಂತ ಪೀಡಿಸುವ ಬ್ರೇಕ್ ಇನ್ಸ್‌ಪೆಕ್ಟರ್‌ಗಳ ಹಿಂಡು, ಮನೆಗೆ ಬಂದರೆ ಮುಂದೆ ನಿಂತು ದುಡ್ಡು ಕೊಡಿಸಿದ ಬ್ರೋಕರುಗಳ ಕಾಟ. ಜೊತೆಗೆ ರಾಜೀನಾಮೆ ಕೊಟ್ಟಿದ್ದು ನಿಜಾನಾ? ಎಂದು ಪೀಡಿಸುವ ಪತ್ರಕರ್ತರ ಹಿಂಡು. ಈ ಎಲ್ಲದರಿಂದ ಬಚಾವಾಗಬೇಕೆಂದರೆ ಭೂಗತರಾಗದೇ ಸಾರಿಗೆ ಮಂತ್ರಿಗೆ ಬೇರೆ ಯಾವ ಮಾರ್ಗವುಂಟು?

ಆರ್.ಟಿ.ಓ. ಟ್ರಾನ್ಸ್‌ಫರ್ ಕೊಳ್ಳೆಯ ಆಳ-ವಿಸ್ತಾರ ಬಲ್ಲ ಯಾರಿಗಾದರೂ ಚಲುವರಾಯನ ರಾಜೀನಾಮೆ ವದಂತಿಗೆ ಕಾರಣ ಗೊತ್ತಾಗಲೇಬೇಕು. ಮಹಾರಾಷ್ಟ್ರದ ಸೊಲ್ಲಾಪುರದಿಂದ ಬಿಜಾಪುರದ ಝುಳಕಿ ಚೆಕ್‌ಪೋಸ್ಟ್ ಪ್ರವೇಶಿಸುವ ಲಾರಿಗಳ ದಿನವೊಂದರ ಆಮದನಿಯೇ ಎಂಟು ಲಕ್ಷ ರೂಪಾಯಿ. ಇಂಥಲ್ಲಿ ಒಂದು ತಿಂಗಳು ಇನ್ಸ್‌ಪೆಕ್ಟರ್ ಆಗಿ ದುಡಿದರೆ ಸರಿಸುಮಾರು 16 ಲಕ್ಷ ದೋಚಬಹುದು. ಜೊತೆಗೆ ಕೊಪ್ಪಳ, ಹೊಸಪೇಟೆಯ ಗಣಿಕೊಳ್ಳೆಯ ಲಾರಿಗಳ ಟೋಕನ್ ದಂಧೆಯೊಂದೇ ತಿಂಗಳಿಗೆ ಸರಿಸುಮಾರು ಹದಿನೈದು ಕೋಟಿಯ ಲಾಭ ತರುತ್ತದೆ.


ಶ್ರೀನಿವಾಸ್


ಮಳ್ಳಿಗೇರಿ

ಈ ಥರದ ಮೈನ್ಸ್ ಲಾರಿಗಳ ಟೋಕನ್ ಜಾಲದ ರಿಂಗ್ ಮಾಸ್ಟರ್ ಆಗಿದ್ದವನು ವೆಂಕಟೇಶ್ ಮಳ್ಳಿಗೇರಿ. ಈತ ಕೊಪ್ಪಳದಲ್ಲಿ ಬ್ರೇಕ್ ಇನ್ಸ್‌ಪೆಕ್ಟರ್ ಆಗಿದ್ದುಕೊಂಡು ಇಡೀ ದಂಧೆಯನ್ನು ಸಂಭಾಳಿಸುತ್ತಿದ್ದ. ಹೊಸಪೇಟೆಯ ಶ್ರೀನಿವಾಸಪ್ಪ, ಕೊಪ್ಪಳದ ಪೊಲೀಸ್ ಪಾಟೀಲ್ ಮತ್ತು ಹೊಸಪೇಟೆಯ ಜಗದೀಶ್ವರಪ್ಪ, ಬೆಂಗಳೂರಿನ ಧರ್ಮರಾಜ ಪವಾರ್ ಮತ್ತು ಶ್ರೀಕಾಂತ್ ಬಡಿಗೇರ್; ಈ ಟೋಕನ್ ದಂಧೆಯ ಆಧಾರ ಸ್ತಂಭಗಳು. ಸಾರಿಗೆ ಮಂತ್ರಿಗೆ ತಿಂಗಳೊಂದಕ್ಕೆ ಇದೊಂದೇ ಸರಿಸುಮಾರು ಹತ್ತು ಕೋಟಿಯ ಆದಾಯ ಕಲ್ಪಿಸಿತ್ತು.



ಇದೆಲ್ಲವನ್ನೂ ಮಂಜೇಗೌಡ ಎಂಬ ಮತ್ತೊಬ್ಬ ಬ್ರೇಕ್ ಇನ್ಸ್‌ಪೆಕ್ಟರ್‌ನನ್ನು ಮುಂದಿಟ್ಟುಕೊಂಡು ಮಳ್ಳಿಗೇರಿ ನಿಯಂತ್ರಿಸುತ್ತಿದ್ದ. ಈ ಮಂಜೇಗೌಡ ಚಲುವರಾಯಸ್ವಾಮಿಯ ಧರ್ಮಪತ್ನಿ ಧನಲಕ್ಷ್ಮಿಯ

ರಾ. ಸೋಮನಾಥ್

ತಂಗಿಯ ಗಂಡ ಕೃಷ್ಣೇಗೌಡನ ಖಾಸಾ ಅಣ್ಣ. ಆ ಕಾರಣಕ್ಕಾಗೇ ಚಲುವಣ್ಣ ಮಂಜೇಗೌಡನನ್ನು ತಂದು ತಮ್ಮ ಮಂತ್ರಿ ಛೇಂಬರಿನಲ್ಲೇ ಇಟ್ಟುಕೊಂಡರು. ಫಲವತ್ತಾದ ಚೆಕ್‌ಪೋಸ್ಟುಗಳಿಗೆಲ್ಲ ತನ್ನ ಕಡೆಯವರನ್ನೇ ಮಂಜೇಗೌಡನ ಮೂಲಕ ಮಳ್ಳಿಗೇರಿ ಹಾಕಿಸುತ್ತಿದ್ದ. ಬೆಂಗಳೂರಿನಲ್ಲಿ ಶ್ರೀಕಾಂತ್ ಬಡಿಗೇರ್ ಮತ್ತು ಧರ್ಮರಾಜ ಪವಾರ್‌ರಂಥ ಇನ್ಸ್‌ಪೆಕ್ಟರ್‌ಗಳು ಮೈನ್ಸ್ ಓವರ್‌ಲೋಡಿಂಗ್ ಟೋಕನ್ನುಗಳನ್ನು ಮಾರುತ್ತಿದ್ದರೆ, ಕೊಪ್ಪಳದಲ್ಲಿ ಪೊಲೀಸ್ ಪಾಟೀಲ ಮತ್ತು ಜಗದೀಶ್ವರಪ್ಪ ಟೋಕನ್ ಕೊಡುತ್ತಿದ್ದರೆ ಹೊಸಪೇಟೆಯ ಆರ್.ಟಿ.ಓ. ಕಚೇರಿಯನ್ನಾಳುತ್ತಿದ್ದ ಶ್ರೀನಿವಾಸಪ್ಪ ಮಳ್ಳಿಗೇರಿಯ ಪರವಾಗಿ ಇಡೀ ಟೋಕನ್ ಜಾಲದ ಎತ್ತುವಳಿ ನಿಭಾಯಿಸುತ್ತಿದ್ದ.

ಯಾವತ್ತು ಇದು ದೇವೇಗೌಡರಿಗೆ ಗೊತ್ತಾಗಿ ಹೋಯಿತೋ ಹುಷಾರಾದ ಚಲುವ ತಿಪ್ಪೆ ಸಾರಿಸುವುದಕ್ಕೆಂದು ಮಂಜೇಗೌಡನನ್ನು ಒದ್ದೋಡಿಸಿಬಿಟ್ಟರು. ಆ ಜಾಗಕ್ಕೆ ಕಾಂಟ್ರ್ಯಾಕ್ಟ್ ಕ್ಯಾರಿಯೇಜ್ ಅಧಿಕಾರಿ ಮುನಿವೀರೇಗೌಡನನ್ನು ತಂದುಕೊಂಡರು. ಕಳೆದ ವರ್ಷದಂತೆ ಈ ವರ್ಷವೂ ಆರ್‌ಟಿಓ ವರ್ಗಾವರ್ಗಿಯೊಂದರಲ್ಲೇ ಮೂವತ್ತು ಕೋಟಿ ಜೇಬಿಗಿಳಿಸಲು ಎಲ್ಲ ತಯಾರಿಯನ್ನೂ ನಡೆಸಿದ್ದರು. ಮಳ್ಳಿಗೇರಿಯ ಸಿಂಡಿಕೇಟ್, ಮಂಜೇಗೌಡನ ಸಿಂಡಿಕೇಟ್, ಮುರುಗಯ್ಯನ ಪಟಾಲಂ ಹೀಗೆ ಸಾರಿಗೆ ಇಲಾಖೆಯ ವಿವಿಧ ಗುಂಪುಗಳೆಲ್ಲವನ್ನೂ ತೃಪ್ತಿಪಡಿಸಿ ತನ್ನನ್ನು ಧಿಕ್ಕರಿಸಿ ಯಾರೂ ಮುಖ್ಯಮಂತ್ರಿಯತ್ತ ಹೋಗದಂತೆ ಎಲ್ಲ ಏರ್ಪಾಡನ್ನೂ ಮಾಡಿಕೊಂಡಿದ್ದರು. ಆಯಾ ಹುದ್ದೆಗಳನ್ನು ಇಂಥವರಿಗೇ ಕಲ್ಪಿಸುತ್ತೇನೆಂದು ಬೇಕಾಬಿಟ್ಟಿ ಅಡ್ವಾನ್ಸನ್ನೂ ಪಡೆಕೊಂಡರು. ಅಂತಿಮಗೊಳಿಸಿದ ಪಟ್ಟಿಯನ್ನು ಸಾರಿಗೆ ಕಮಿಷನರ್ ನಾರಾಯಣಗೌಡರಿಗೆ ಕಳಿಸಿ ಇನ್ನೇನು ಅಂತಿಮ ಆದೇಶಕ್ಕಾಗಿ ಕಾದುಕೂತಿದ್ದ ಚಲುವಣ್ಣನಿಗೆ ಮೇ 23 ಕ್ಕೆ ಆಘಾತ ಕಾದಿತ್ತು.

ಮುಖ್ಯಮಂತ್ರಿಗಳ ವಿಶೇಷ ಕಾರ್ಯದರ್ಶಿ ರಾಕೇಶ್‌ಸಿಂಗ್ ಚಲುವರಾಯನ ಪಟ್ಟಿಯನ್ನು ಬದಿಗೊತ್ತಿ ಮುಖ್ಯಮಂತ್ರಿಗಳದೇ ವಿಶೇಷ ಪಟ್ಟಿಯೊಂದನ್ನು ಆಖೈರುಗೊಳಿಸಿಬಿಟ್ಟಿದ್ದರು. ಇಡೀ ಟೋಕನ್ ದಂಧೆಯ ಕಿಂಗ್‌ಪಿನ್ ಮಳ್ಳಿಗೇರಿಯನ್ನು ಕೊಪ್ಪಳದಿಂದ ಎತ್ತಿ ಭಾಲ್ಕಿಗೆ ಹಾಕಿ, ಆತನ ಬಲಗೈ ಬಂಟರಂತಿದ್ದ ಜಗದೀಶ್ವರಪ್ಪ, ಶ್ರೀಕಾಂತ ಬಡಿಗೇರ್, ಗದಗದ ದೇಸಾಯಿ, ಪೊಲೀಸ್ ಪಾಟೀಲ, ಶ್ರೀನಿವಾಸಪ್ಪ ಎಲ್ಲರನ್ನೂ ಬರಕತ್ತೇ ಇಲ್ಲದ ಚೆಕ್‌ಪೋಸ್ಟುಗಳಿಗೆ ಒಗಾಯಿಸಿದ್ದರು.

ಅಲ್ಲಿಗೆ ಇಡೀ ಮೈನ್ಸ್ ಲಾರಿಗಳ ಟೋಕನ್ ದಂಧೆಯೇ ಹುಟ್ಟಡಗಿದಂತಾಗಿ ಸಾರಿಗೆ ಮಂತ್ರಿಗೆ ಮಾಸಿಕ ಕೋಟಿಗಟ್ಟಲೇ ಆದಾಯದ ಮೂಲವಾಗಿದ್ದ ಜಾಲವೇ ಬರಖಾಸ್ತಾಗಿ ಹೋಗಿತ್ತು. ಒಂದೆಡೆ ಬರುತ್ತಿದ್ದ ಆದಾಯಕ್ಕೆ ಕಲ್ಲುಬಿದ್ದದ್ದು, ಮತ್ತೊಂದೆಡೆ ಟ್ರಾನ್ಸ್‌ಫರ್‌ಗೆಂದು ಪಡೆಕೊಂಡಿದ್ದ ಅಡ್ವಾನ್ಸ್ ವಾಪಸ್ಸು ಮಾಡಬೇಕಾದ ಫಜೀತಿ. ಸಾಲದ್ದಕ್ಕೆ ತನ್ನದೇ ಇಲಾಖೆಯಲ್ಲಿ ತನಗಾದ ಮುಖಭಂಗ!

ಮಗನ ಮೂಲಕ ಮರೆಯಲ್ಲೇ ನಿಂತು ಇದೆಲ್ಲವನ್ನೂ ಮಾಡಿಸಿದ್ದು ದೇವೇಗೌಡರು ಎಂಬುದು ಗೊತ್ತಾಗಿ ಹೋಗಿದೆ.

ಒಂದೆಡೆ ಆಘಾತ ಮತ್ತೊಂದೆಡೆ ಹತಾಶೆಗೆ ಬಿದ್ದು ಇದ್ದಕ್ಕಿದ್ದಂತೆ ರಾಜೀನಾಮೆಯ ಸುದ್ದಿ ತೇಲಿಬಿಟ್ಟಿದ್ದಾರೆ. ಅದನ್ನು ಪತ್ರಕರ್ತರ ಮಧ್ಯೆ ತೇಲಿಬಿಟ್ಟವನು ಆಪ್ತ ಬಂಟ ಪತ್ರಕರ್ತ ಪ್ರಕಾಶ ಎಂಬಾತ. ಆತ ಕಿವಿ ಊದಿದ್ದಕ್ಕೆ ಆತನ ಶಿಷ್ಯರೇ ಆದ ಒಂದಿಬ್ಬರು ರಿಪೋರ್ಟರ್‌ಗಳು ಲೋಕೋಪಯೋಗಿ ಮಂತ್ರಿ ರೇವಣ್ಣನವರನ್ನು 'ನೀವು ಟ್ರಾನ್ಸ್‌ಫರ್‌ನಲ್ಲಿ ಮೂಗು ತೂರಿಸಿದ್ದಕ್ಕೇ ಬೇಸತ್ತು ರಾಜೀನಾಮೆ ಕೊಟ್ರಂತಲ್ಲಾ' ಎಂದು ಕೆಣಕಿದ್ದಾರೆ. 'ಕೊಟ್ಟರೆ ಕೊಡ್ಲಿ ಬಿಡ್ರೀ' ಎಂದು ರೇವಣ್ಣ ತಿರುಗೇಟು ಕೊಟ್ಟಿದ್ದನ್ನೂ ಅದೇ ವರದಿಗಾರರ ಹಿಂಡು ಚಲುವನ ಕಿವಿ ಮುಟ್ಟಿಸಿದ್ದಾರೆ.

ಅತ್ತ ತನ್ನ ಜನ್ಮದಿನ ನೆಪದಲ್ಲಿ ದೇವೇಗೌಡರ ಮನೆಗೆ ಹೋದರೆ ಗೌಡರು ಮುಖ ಕೂಡ ನೋಡದೇ ಸಾಗ ಹಾಕಿದ್ದಾರೆ. ಆನಂತರ ಪಾವಗಡಕ್ಕೆ ಹೋಗಿ ಅಲ್ಲಿ ಕುಮಾರಣ್ಣನಿಗೆ ಮಸ್ಕಾ ಹೊಡೆದರೆ, ಕುಮಾರಣ್ಣ ಕೂಡ ತಿಪ್ಪೆ ಸಾರಿಸಿದ್ದಾನೆ.

ಸದ್ಯ ಚಲುವರಾಯರಿಗುಳಿದಿರುವ ಒಂದೇ ದಾರಿ ಬಂಡಾಯ. ಸಮಯ ಸಾಧಿಸುವುದೊಂದೇ ಉಪಾಯ. ■

ರೇವಣ್ಣನ ಡೆಪ್ಯೂಟಿ ಕನಸೇ ಚಲುವಣ್ಣನಿಗೆ ಆಪತ್ತು


ದೇವೇಗೌಡರಿಗಾಗಲಿ, ಕುಮಾರಣ್ಣನಿಗಾಗಲಿ ವಿನಾಕಾರಣ ಚಲುವರಾಯನನ್ನು ತಡವಿಕೊಳ್ಳಲು ಕಾರಣವಿಲ್ಲದಿಲ್ಲ. ಅವರಿಬ್ಬರಿಗಿಂತಲೂ ಎಚ್.ಡಿ. ರೇವಣ್ಣನಿಗೆ ಚಲುವರಾಯಸ್ವಾಮಿಯ ತಲೆ ಕಂಡರಾಗುತ್ತಿಲ್ಲ. ಅದಕ್ಕೆ ಕಾರಣ ಭಾವೀ ಉಪಮುಖ್ಯಮಂತ್ರಿ ಗಾದಿಯ ಜಿದ್ದಾಜಿದ್ದಿ!

ಮುಂದೆ ಯಡ್ಡಿ ಮುಖ್ಯಮಂತ್ರಿಯಾದರೆ ತಾನೇ ಉಪಮುಖ್ಯಮಂತ್ರಿಯಾಗುತ್ತೇನೆಂದು ಆಪತ್ತಿನಿಂದಲೂ ಟಾಂಟಾಂ ಮಾಡುತ್ತಾ ಬಂದವನು ಚಲುವಣ್ಣ. ಯಾವತ್ತು ಇದು ರೇವಣ್ಣನ ಕಿವಿ ಮುಟ್ಟಿತ್ತೋ ಆವತ್ತಿನಿಂದ ಚಲುವಣ್ಣನ ಮೇಲೆ ಗೌಡರ ಕೆಂಗಣ್ಣು ಬಿತ್ತು. ಮಗ ರೇವಣ್ಣನೇ ಮುಂದಿನ ಉಪಮುಖ್ಯಮಂತ್ರಿ ಎಂಬುದು ಗೌಡರ ಮನದಾಳದ ಇಂಗಿತ. ಅದು ರೇವಣ್ಣನ ಆಶಯವೂ ಕೂಡ. ಅದಕ್ಕೇನಾದರೂ ಚಲುವಣ್ಣ ಅಡ್ಡಗಾಲಿಟ್ಟರೆ, ನಾಳೆ ದಿನ ಒಂದಷ್ಟು ಜೆಡಿಎಸ್ ಶಾಸಕರನ್ನು ತನ್ನ ಬುಟ್ಟಿಗೆ ಹಾಕಿಕೊಂಡರೆ ಅದು ಗೌಡರ ಫ್ಯಾಮಿಲಿಗೇ ಮುಖಭಂಗ. ಹಾಗಾಗದಂತೆ ನೋಡಿಕೊಳ್ಳಬೇಕೆಂದರೆ ಚಲುವನ ಬಳಿ ದುಡ್ಡು ಸೇರದಂತೆ ಮಾಡಬೇಕು. ಅದಕ್ಕೆ ಪ್ರಮುಖ ಮೂಲ ಆಗಿರುವುದು ಬ್ರೇಕ್ ಇನ್ಸ್‌ಪೆಕ್ಟರ್ ವರ್ಗಾವರ್ಗಿ ಮತ್ತು ಮೈನ್ಸ್ ಲಾರಿಗಳ ಟೋಕನ್ ದಂಧೆ ತಾನೆ?

ಅದನ್ನೇ ಧ್ವಂಸ ಮಾಡಿಬಿಟ್ಟರೆ? ತನ್ನಿಂತಾನೇ ಚಲುವರಾಯನ ಬಾಲ ಕಟ್ಟಾಗುತ್ತದೆ! ಚಲುವನ ಮುನಿಸಿಗೆ ಇದಲ್ಲದೇ ಬೇರೆ ಕಾರಣವಿಲ್ಲ.

ಟೋಕನ್ ದಂಧೆ ಮತ್ತು ಬಾವಿಕಟ್ಟೆಯ ಕೊಲೆ!

ಮಳ್ಳಿಗೇರಿ ಸೃಷ್ಟಿಸಿದ ಮೈನ್ಸ್ ಲಾರಿಗಳ ಟೋಕನ್ ಜಾಲ ಅದೆಷ್ಟು ನಿಗೂಢವಾಗಿತ್ತೆಂಬುದಕ್ಕೆ 2007 ರ ಫೆಬ್ರವರಿ 2 ರಂದು ಹೊಸಪೇಟೆಯಲ್ಲಿ ಕೊಲೆಯಾದ ಅಶೋಕ್ ಬಾವಿಕಟ್ಟೆಯ ಹತ್ಯೆಯೊಂದೇ ಸಾಕು. ಹೊಸಪೇಟೆಯ ಅಮರಾವತಿ ಏರಿಯಾದ ತನ್ನದೇ ಮನೆಮುಂದೆ ಆತನನ್ನು ಇರಿದುಕೊಂದದ್ದು ಹೊಸಪೇಟೆಯ ಆರ್‌ಟಿಓ ಕಚೇರಿಯ ಡ್ರೈವರ್ ಕೃಷ್ಣಮೂರ್ತಿ ಮತ್ತು ಬೆಂಗಳೂರಿನಲ್ಲಿ ಆರ್‌ಟಿಓ ಕಮೀಷನರ್‌ಗೆ ಡ್ರೈವರ್ ಆಗಿದ್ದ ಈತನ ಅಣ್ಣ ನಾಗರಾಜನ ಮಗ ಸುನೀಲ.



ಮಳ್ಳಿಗೇರಿಯ ಟೋಕನ್ನುಗಳನ್ನು ಮೈನ್ಸ್ ಲಾರಿಗಳಿಗೆ ಮಾರುತ್ತಿದ್ದ ಅಶೋಕ್ ಬಾವಿಕಟ್ಟೆ ದೊಡ್ಡ ಮೊತ್ತವನ್ನು ತಲುಪಿಸಬೇಕಾದಲ್ಲಿಗೆ ತಲುಪಿಸದೇ ನುಂಗಿಹಾಕಿದ್ದ. ಆ ಕಾರಣಕ್ಕೆ ಆರ್‌ಟಿಓ ಡ್ರೈವರ್‌ಗಳಿಗೆ ಬಲಿಯಾಗಿದ್ದ. ಈ ಪ್ರಕರಣವನ್ನು ಸರಿಯಾಗಿ ತನಿಖೆ ಮಾಡಿದ್ದರೆ ಮೈನ್ಸ್ ಲಾರಿಗಳ ಆರ್‌ಟಿಓ ಟೋಕನ್ ದಂಧೆ ಬಯಲಾಗುತ್ತಿತ್ತು, ಮಳ್ಳಿಗೇರಿ, ಶ್ರೀನಿವಾಸಪ್ಪನಂಥ ಕಿಂಗ್‌ಪಿನ್ನುಗಳೂ ಜೈಲುಪಾಲಾಗಬೇಕಿತ್ತು. ದುರಂತವೆಂದರೆ ಹೊಸಪೇಟೆ ಪೊಲೀಸರೇ ತನಿಖೆಯ ದಿಕ್ಕುತಪ್ಪಿಸಿಬಿಟ್ಟರು. ಏಕೆ ಗೊತ್ತೆ?


ಇಡೀ ಟೋಕನ್ ಜಾಲದ ಮರ್ಮ ಬಯಲಾಗಿದ್ದರೆ ಸಾರಿಗೆ ಮಂತ್ರಿ ಚಲುವರಾಯಸ್ವಾಮಿಗೆ ಸಂದಾಯವಾಗುತ್ತಿದ್ದ 'ಮಂತ್ಲಿ'ಯೂ ಬೆಳಕಿಗೆ ಬರುತ್ತಿತ್ತು. ಯಾವತ್ತು ಇದು ಮುಖ್ಯಮಂತ್ರಿ ಕುಮಾರಣ್ಣನ ಕಿವಿ ಮುಟ್ಟಿತೋ ಆವತ್ತೇ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳ ಟೋಕನ್ ಜಾಲಕ್ಕೆ ಸರ್ಜರಿ ಮಾಡುವ ಮಾಸ್ಟರ್ ಪ್ಲಾನ್ ರೂಪಿಸಿಬಿಟ್ಟರು. ಸದ್ಯದ ವರ್ಗಾವರ್ಗಿಯಲ್ಲಿ ಅದನ್ನು ಕಾರ್ಯಗತಗೊಳಿಸಿಯೂ ಬಿಟ್ಟರು.

ಸದ್ಯ ಚಲುವಣ್ಣನ ಬಾಯಿಯೂ ಬಂದ್, ಟೋಕನ್ ದಂಧೆಯೂ ಫಿನಿಶ್!

10 ◄◄

ಇರಬಹುದು ಕಾಣುತ್ತದೆ. ಏಕೆಂದರೆ ಆಗಿನ್ನೂ ಮುಂಗಾರು ಮಳೆ ಬಂದಿರಲಿಲ್ಲ. ಗಣೇಶ್‌ಗೆ ಸ್ಟಾರ್ [illegible] 'ಚೆಲ್ಲಾಟ' ಬಂದು ಮುಗಿದು ಯಶಸ್ವಿಯಾಗಿತ್ತಷ್ಟೇ. ಆಗಲೇ ನಿರ್ಮಾಪಕ ಬಾಬುರೆಡ್ಡಿ ಹುಡುಗಾಟಕ್ಕೆ ಕೈ ಹಾಕಿದ್ದರು. ಅವತ್ತು ಹೀರೋ ಗಣೇಶ್‌ಗೆ ಮಾತಾಡಿದ್ದ ಸಂಭಾವನೆ ಬರೇ 3 ಲಕ್ಷ.

ಅಷ್ಟರಲ್ಲಾಗಲೇ ಬಾಬುರೆಡ್ಡಿ ಜಗ್ಗೇಶ್ ಹಾಕಿಕೊಂಡು 'ಮಿಸ್ಟರ್ ಬಕ್ರಾ' ನಿರ್ಮಿಸಿ ತಿರುಪತಿ ಯಾತ್ರೆ ಮಾಡಿ ಬಂದಿದ್ದರು. ಹೀಗೆ 'ಹುಡುಗಾಟ' ಶುರುವಾಗಿ



ಹೆಚ್ಚುಕಡಿಮೆ ಮುಕ್ತಾಯ ಹಂತಕ್ಕೆ ಬಂದಿದ್ದರೂ 6 ದಿನದ ಶೂಟಿಂಗ್ ಬಾಕಿ ಇತ್ತು. ಆಗಲೇ 'ಮುಂಗಾರು ಮಳೆ' ಬಿತ್ತು. ಗಣೇಶ್ ರೇಟ್ ಸರ್ರನೆ ಏರಿ 30, 40 ಲಕ್ಷ ಅಂತೆಲ್ಲಾ ಮಾತು ಕೇಳಿಬಂತು. ಎಸ್. ನಾರಾಯಣ್ ಬೇರೆ ತಮ್ಮ 'ಚೆಲುವಿನ ಚಿತ್ತಾರ'ಕ್ಕೆ ಗಣೇಶ್‌ಗೆ 26 ಲಕ್ಷ ಕೊಟ್ಟರೂಂತ ಸುದ್ದಿ ಕೇಳಿಬಂದಿತ್ತು. ಆಗ ಅಲರ್ಟ್ ಆದ ಬಾಬುರೆಡ್ಡಿ ಬೇಗ 'ಹುಡುಗಾಟ' ಮುಗಿಸಿ 'ಮುಂಗಾರು ಮಳೆ'ಯ ಹವಾದಲ್ಲೇ ತಮ್ಮ ಸಿನಿಮಾವನ್ನು ಗೆಲ್ಲಿಸಿಕೊಳ್ಳಲು ಹೊರಟರು. ಬ್ಯುಸಿಯಾಗಿದ್ದ ಗಣೇಶ್‌ಗೆ ದಿನಕ್ಕೆ 1 ಲಕ್ಷ ಕೊಟ್ಟು ಬಾಕಿ ಇದ್ದ 5 ದಿನದ ಶೂಟಿಂಗ್ ಮುಗಿಸಲಾಗಿತ್ತು. ಆ ಲೆಕ್ಕದಲ್ಲಿ 'ಹುಡುಗಾಟ'ಕ್ಕೆ ಗಣೇಶ್ ಪಡೆದ ಸಂಭಾವನೆ 8 ಲಕ್ಷ ಎಂದಾಗುತ್ತದೆ.


ರಾಮುಗೆ ಭಯ, ಕುಮಾರ್ ಬರ್ಖಾಸ್ತ್

ಗಣೇಶನ 'ಹುಡುಗಾಟ' ಕನಿಷ್ಠ ಇಬ್ಬರು ದೊಡ್ಡ ಸಿನಿಮಾ ಕುಳಗಳಿಗೆ ಭಾರಿ ಹೊಡೆತ ಕೊಡುವಂತೆ ಕಾಣುತ್ತಿದೆ. ಒಬ್ಬರು ರಾಮು, ಇನ್ನೊಬ್ಬರು ಎನ್. ಕುಮಾರ್. ಗಣೇಶನ 'ಮುಂಗಾರು ಮಳೆ'ಯ ಭರಾಟೆ ನೋಡಿ ಅದೇ ಗಣೇಶನ ಹುಡುಗಾಟವೂ ಹಣ ತರಬಹುದೆಂದು ಭಾವಿಸಿ ರಾಮು ಬಿಕೆಟಿ ಏರಿಯಾವನ್ನು 90 ಲಕ್ಷಕ್ಕೆ ತೆಗೆದುಕೊಂಡಿದ್ದರು. 25% ಬೇಸಿಸ್ ಒಪ್ಪಂದ ಇದಾಗಿದ್ದರೂ ಮೊದಲ ಎರಡು ವಾರ ಕಲೆಕ್ಷನ್ ಚೆನ್ನಾಗಿ ಬಂತೊ ರಾಮು ಬಚಾವಾಗುತ್ತಾರೆ. ಇಲ್ಲದಿದ್ದರೆ ಅದು ರಾಮುಗೆ ಹೊಡೆತವೆ. ಅಕಸ್ಮಾತ್ ರಾಮು ಸೇಫಾದರೂ ಮೈಸೂರು, ಮಂಡ್ಯ, ಹಾಸನ, ಕೊಡಗು ಏರಿಯಾವನ್ನು 70 ಲಕ್ಷಕ್ಕೆ ಖರೀದಿಸಿರುವ ಕುಮಾರ್ ಲಾಸ್ ಮಾಡಿಕೊಳ್ಳುವ ಛಾನ್ಸ್ ಜಾಸ್ತಿ ಇದೆ. ಏಕೆಂದರೆ 'ಹುಡುಗಾಟ' ತುಂಬಾ ಜಾಳುಜಾಳಾಗಿರುವ ಸಿನಿಮಾ. ರಿಮೇಕ್, ರಿಮಿಕ್ಸ್ ಎಲ್ಲಾ ಇರುವ ಹಳಸಲನ್ನ.



ರಾಮು

'ಹುಡುಗಾಟ' ಅದಿನ್ನೆಷ್ಟು ಕಳ್ಳತನದ ರಾಡಿ ಎಬ್ಬಿಸಿದೆ ಎಂದರೆ ದಿಲ್ ಹೈ ಕತೆ ಕಳ್ಳತನ ಮಾಡಿದ್ದಲ್ಲದೆ ತೆಲುಗಿನ ಸೂಪರ್ ಹಿಟ್ ಆರ್ಯ ಸಿನಿಮಾದ ಕೆಲವು ಸೀನ್‌ಗಳನ್ನು ನಿರ್ದೇಶಕ ಸಂಜಯ್ ಅನಾಮತ್ತಾಗಿ ಎತ್ತಿಕೊಂಡಿದ್ದಾನೆ. ಆರ್ಯದ ರಿಮೇಕ್ ಹಕ್ಕು ಪಡೆದಿರುವ ರಾಕ್‌ಲೈನ್ ವೆಂಕಟೇಶ್‌ಗೆ ಇದು ಈಗ ಗೊತ್ತಾಗಿದೆ. ಆರ್ಯ ಸಿನಿಮಾದ ಪ್ರಾಣಪಕ್ಷಿಯಂತಿದ್ದ ಅಂತಾ ಡೈಲಾಗೂ ಹಾಗೂ ಸೀನ್‌ಗಳೇ ಹೀಗೆ ಕಳ್ಳತನವಾದ ಮೇಲೆ ಇನ್ನು ಆರ್ಯ ಕನ್ನಡದಲ್ಲೇ ರಿಮೇಕಾಗುವ ಅವಕಾಶ ತಪ್ಪಿತಲ್ಲ ಎಂಬ ಕೊರಗು ರಾಕ್‌ಲೈನ್‌ಗೆ. ಬಹುಶಃ ಅವರೂ ಈ ಕಳ್ಳತನದ ಬಗ್ಗೆ ಚೇಂಬರ್‌ಗೆ ದೂರು ನೀಡಬಹುದೇನೋ.



ಎನ್. ಕುಮಾರ್

ಇದೆಲ್ಲಕ್ಕಿಂತಾ ಇನ್ನೊಂದು ದೊಡ್ಡ ತಮಾಷೆ ಏನು ಗೊತ್ತಾ?

ಗಣೇಶ್-ಸಂಜಯ್-ಬಾಬುರೆಡ್ಡಿಗಳ ಸಿನಿಮಾ ಕಳ್ಳತನದ ಬಗ್ಗೆ ಈಗ ವಿಚಾರಣೆ ಅಥವಾ ರಾಜಿ ನಡೆಸಬೇಕಿರುವುದು ನಿರ್ಮಾಪಕ ಸಂಘದ ಕಾರ್ಯದರ್ಶಿ ಜೋಸೈಮನ್. ಆದರೆ ಸ್ವತಃ ಜೋ ನಿರ್ದೇಶಿಸಿದ್ದ ದಾದಾಗಿರಿ ಚಿತ್ರದ ಇಡೀ ಹಾಡೊಂದರ ಸೀಕ್ವೆನ್ಸ್‌ಗಳನ್ನು 'ಹುಡುಗಾಟ' ಸಿನಿಮಾದಲ್ಲಿ ಯಥಾವತ್ತಾಗಿ ಭಟ್ಟಿ ಇಳಿಸಲಾಗಿದೆ. ದಾದಾಗಿರಿಯ ಆ ಹಾಡಿನಲ್ಲಿ ನಟಿಸಿದ್ದು ಬೇರೆ ಯಾರೂ ಅಲ್ಲ, ಸ್ವತಃ ಹುಡುಗಾಟದ ಗಣೇಶನೆ!

ಕನ್ನಡ ನಟ, ನಿರ್ದೇಶಕ, ನಿರ್ಮಾಪಕರಲ್ಲಿ ಕೆಲವರು ಫುಲ್‌ಟೈಂ ಕಳ್ಳರಾಗಿ ಬಿಟ್ಟರಾ ಅಂತಾ ಅನುಮಾನ ಬರುವಂತಿಲ್ಲವೆ ಈ ವಿಚಾರ.

ಅದೇನೂ ದೊಡ್ಡ ವಿಚಾರವಲ್ಲ ಬಿಡಿ. ಪ್ರತಿಭೆ, ಅದೃಷ್ಟ ಎಲ್ಲಾ ಜೊತೆಗೂಡಿದಾಗ ಅವಕಾಶ, ಕೀರ್ತಿ, ಹಣ ಎಲ್ಲಾ ಕೈಗೆಟುಕುತ್ತವೆ. ಆದರೆ ಸಮಸ್ಯೆ ಇರುವುದು ಗಣೇಶ ಆರಿಸಿಕೊಳ್ಳುತ್ತಿರುವ ಸಿನಿಮಾಗಳದ್ದು. ಗಣೇಶನ ಮುಂದಿನ ಸಿನಿಮಾ ಎಸ್. ನಾರಾಯಣನ ಚೆಲುವಿನ ಚಿತ್ತಾರ.

ಈ ನಾರಾಯಣ್ ಎಂತಾ ಕಾಪಿ ಕ್ಯಾಟ್ ಅಂದರೆ ನಾಳೆ ಒಂದು ವೇಳೆ ಬೇರೆ ಸಿನಿಮಾಗಳಿಂದ ಯಾರು ಏನನ್ನೂ ಬಳಸಕೂಡದೆಂಬ ನಿಯಮವೇನಾದರೂ ಬಂದುಬಿಟ್ಟರೆ ಕನ್ನಡದಲ್ಲಿ ಮೊದಲು ನಿರುದ್ಯೋಗಿಯಾಗುವವನೆ ಈ ನಾರಾಯಣ. ಗಣೇಶ್ ಭವಿಷ್ಯ ಈಗ ನಾರಾಯಣನ ಕೈಗೆ ಹೋಗಿದೆ. ಅಂದಹಾಗೆ 'ಚೆಲುವಿನ ಚಿತ್ತಾರ' ತಮಿಳು 'ಕಾದಲ್' ಸಿನಿಮಾದ ರಿಮೇಕ್! ಗಣೇಶ್ ಕೈಲಿ ಈಗ ಯಾದವ್‌ನ ಕೃಷ್ಣ ಕೊಬ್ರಿ ಮಂಜನ ಅರಮನೆಗಳಿವೆ. ಅರಮನೆ ಬಿಟ್ಟರೆ ಬಹುಶಃ ಇವೆಲ್ಲವೂ ಒಂದೋ ರಿಮೇಕ್ ಇಲ್ಲಾ ರಿಮಿಕ್ಸ್ ಸಿನಿಮಾಗಳು!

ಇನ್ನು ಬೆಳೆಯಬೇಕಿರುವ ನಟನೊಬ್ಬ ತನ್ನ ಕೆರಿಯರ್‌ನ ಸಮಾಧಿ ತಾನೇ ತೋಡಿಕೊಳ್ಳುವುದೆಂದರೆ ಇದೇ ಇರಬಹುದೇನೊ!

ಕೊನೆಯದಾಗಿ ಗಣೇಶ್‌ಗೊಂದು ಕಿವಿಮಾತು. ಪ್ರೇಕ್ಷಕರು ನಿನ್ನನ್ನು ಇಷ್ಟಪಟ್ಟಿದ್ದಾರೆ ಗಣೇಶ್.... ಅದು ನಿನಗೂ ಗೊತ್ತಾಗಿದೆ ಅಲ್ಲವಾ, ಹಾಗಿದ್ದ ಮೇಲೆ ಹಳಸಲು ತಿನ್ನೋ ದುರ್ಗತಿ ನಿನಗ್ಯಾಕೆ, ಇಷ್ಟಕ್ಕೂ ಜನ ಯಾ[...] ಅದನ್ನು ತಿನ್ನುತ್ತಾರೆ. ಅವರೇನಾದರೂ ಕಿವಿಲಿ ಹೂ[...] ಇಟ್‌ಕೊಂಡಿರ್‍ತಾರಾ? ಕದ್ದ ಸಿನಿಮಾನ ನೋಡಿ ಮೆಚ[...] ಕೊಳ್ಳೋಕೆ.. ಹ್ಞಾ...!

ಜಾಸ್ತಿ ಹುಡುಗಾಟ ಆಡಬೇಡಾ ಗಣೇಶು....


ಯುವ ಕಾಂಗೈಗೆ ಕೋಲುಬಸವ ಡಂಗನವರ್

ಯುವಕನಲ್ಲದಿದ್ದರೂ ಯುವ ಕಾಂಗೈನಲ್ಲಿ ವರ್ಷಗಟ್ಟಲೇ ಬೇರುಬಿಟ್ಟುಕೊಂಡು ಕುಳಿತಿದ್ದ ದಿನೇಶ್ ಗುಂಡೂರಾವ್ ಕೊನೆಗೂ ಜಾಗ ಖಾಲಿ ಮಾಡಿದ್ದಾರೆ. 35 ವರ್ಷ ಮುಗಿದಿದ್ದರೂ ತಾನಿನ್ನೂ ಯುವಕನೇ ಎಂದು ಹೇಳಿಕೊಳ್ಳುತ್ತಾ ಯುವ ಕಾಂಗ್ರೆಸ್ ಅಧ್ಯಕ್ಷಗಾದಿಯನ್ನು ತೊರೆಯಲಿಚ್ಛಿಸದೆ ಅಧಿಕಾರಾವಧಿ ಮುಗಿದ ಮೇಲೂ ಹೆಚ್ಚುವರಿ ಎರಡು ವರ್ಷ ಗಾದಿ ಬಿಟ್ಟರಲಿಲ್ಲ. ಆದರೆ ಯಾವಾಗ ಕಾಂಗೈ ಒಳಗೆ ಒತ್ತಡ ತೀವ್ರವಾಯಿತೋ ಅಧ್ಯಕ್ಷಗಾದಿಯನ್ನು ತೊರೆಯಲೇಬೇಕಾಯಿತು. ಆದರೂ ತಮ್ಮ ಕೈ ನಡೆಯುತ್ತಿರಲಿ ಎಂದು ತನ್ನ ಶಿಷ್ಯ ಸದಾನಂದ ಡಂಗನವರ್ ಎಂಬ ಕೋಲೆ ಬಸವನನ್ನು ಕೂರಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಯುವ ಕಾಂಗೈನ ಅಧ್ಯಕ್ಷಗಾದಿ ತೆರವಾಗುವ ಸೂಚನೆ ಸಿಗುತ್ತಿದ್ದಂತೆ ಶಾಸಕ ಕೃಷ್ಣ ಬೈರೇಗೌಡ ಆ ಸ್ಥಾನಕ್ಕೆ ಬರಲು ಭಾರಿ ಪೈಪೋಟಿ ನಡೆಸಿದರು. ಆದರೆ ಕಾಂಗ್ರೆಸ್‌ನಲ್ಲಿಯ ಹಿರಿಯ ಕುಳಗಳು ಅದನ್ನು ವ್ಯವಸ್ಥಿತವಾಗಿ ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಕೇಂದ್ರ ಸಚಿವ ಮುನಿಯಪ್ಪ ಕೃಷ್ಣ ಬೈರೇಗೌಡ ಯಾವ ಕಾರಣಕ್ಕೂ ಯುವ ಕಾಂಗ್ರೆಸ್‌ನ ಅಧ್ಯಕ್ಷಗಾದಿಗೆ ಏರಕೂಡದು ಎಂದು ಅಡ್ಡಗಾಲು ಹಾಕಿದರೆ ಅವರಿಗೆ ದನಿಗೂಡಿಸಿದವರು ಎಚ್ಕೆ ಪಾಟೀಲ್, ಧರಮ್ ಸಿಂಗ್ ಮತ್ತು ಮಲ್ಲಿಕಾರ್ಜುನ್ ಖರ್ಗೆ ಎಂಬ ಹಿರಿತಲೆಗಳು. ಇವರ ವಿರೋಧಕ್ಕೆ ಕಾರಣವೂ ಇಲ್ಲದಿಲ್ಲ, ಕೃಷ್ಣ ಬೈರೇಗೌಡರ ತಂದೆ ತಮ್ಮ ಪ್ರಭಾವವಿದ್ದಾಗ ಇದೇ ಧರಂ, ಖರ್ಗೆ ಮತ್ತು ಎಚ್ಕೆಗಳನ್ನು ಗೋಳು ಹೊಯ್ದುಕೊಂಡಿದ್ದು ಅಷ್ಟಿಷ್ಟಲ್ಲ, ಈಗ ಆ ಸೇಡನ್ನು ಈ ತ್ರಿಮೂರ್ತಿಗಳು ಅವರ ಮಗನ ಮೇಲೆ ತೀರಿಸಿಕೊಂಡರು. ಈ ಹಿಂದೆ ಕೂಡ ಪಕ್ಷವನ್ನು ಬಲಪಡಿಸುವ ನೆಪದಲ್ಲಿಯೇ ಕೃಷ್ಣ ಬೈರೇಗೌಡನನ್ನು ದುರ್ಬಲಗೊಳಿಸಿ ಮೂಲೆಗೆ ತಳ್ಳಿದ್ದರು. ಇದು ಅದರ ಮುಂದುವರೆದ ಭಾಗವಷ್ಟೆ.

ಧರಂ, ಖರ್ಗೆ, ಎಚ್ಕೆ, ಮುನಿಯಪ್ಪ, ದಿನೇಶ್ ಗುಂಡೂರಾವ್ ಆದಿಯಾಗಿ ಎಲ್ಲರೂ ತಮ್ಮ ಮಾತಿಗೆ ಕಿವಿಗೊಡಬಲ್ಲ, ತಮ್ಮ ರಬ್ಬರ್ ಸ್ಟಾಂಪ್‌ನಂತೆ ಕೆಲಸ ಮಾಡಬಲ್ಲ ಹಾಗೂ ತಾವು ಹೇಳಿದ್ದಕ್ಕೆಲ್ಲ ಮರು ಮಾತನಾಡದೇ ತಲೆಯಲ್ಲಾಡಿಸಬಲ್ಲ ಒಂದು ಕೋಲು ಬಸವನನ್ನು ಯುವ ಕಾಂಗೈ ಅಧ್ಯಕ್ಷಗಾದಿಗೆ ತಂದು ಕೂರಿಸಲು ಕಾಯುತ್ತಿದ್ದರು. ಆಗ ಇವರಿಗೆ ಕಂಡವನೇ ಸದಾನಂದ ಡಂಗನವರ್. ಕಾಂಗ್ರೆಸ್‌ನ ರಾಜ್ಯ ನಾಯಕರೆಲ್ಲರೂ ಸೇರಿ ಕೊನೆಗೆ ಕೇಂದ್ರದ ಕಾಂಗ್ರೆಸ್ ದಿಗ್ಗಜ ಪ್ರಣಬ್ ಮುಖರ್ಜಿಯಿಂದ ಶಿಫಾರಸ್ಸು ಪತ್ರ ತಂದು ಡಂಗನವರ್‌ನನ್ನು ಯುವ ಕಾಂಗೈ ಅಧ್ಯಕ್ಷಗಾದಿಗೆ ಕೂರಿಸಿಯೇ ಬಿಟ್ಟರು.

ಡಂಗನವರನ್ನು ಈ ಅಧ್ಯಕ್ಷಗಾದಿಗೆ ಕೂರಿಸುವಲ್ಲಿ ಸೋನಿಯಾ ಮಿದುಳು ಕೂಡ ಕೆಲಸ ಮಾಡಿರುವುದರಲ್ಲಿ ಅನುಮಾನವಿಲ್ಲ, ಕರ್ನಾಟಕದಲ್ಲಿ ಕೋಮುವಾದಿ ಬಜೆಪಿ ಮತ್ತು ಜಾತ್ಯತೀತ(!) ಜನತಾ ದಳಗಳ ಸಮ್ಮಿಶ್ರ ಸರ್ಕಾರದಲ್ಲಿ ಅಧಿಕಾರ ಹಂಚಿಕೆ ಮತ್ತು ಅಧಿಕಾರ ಹಸ್ತಾಂತರ ಕುರಿತಂತೆ ಒಳಜಗಳ ಬೀದಿಜಗಳದಂತಾಗಿ ಹೋಗಿರುವುದು, ಒಂದೊಂದು ಪಕ್ಷದ ನಾಯಕರು ಈ ಕುರಿತಂತೆ ಒಂದೊಂದು ರೀತಿಯ ವೈರುಧ್ಯಗಳಿಂದ ಕೂಡಿದ ಹೇಳಿಕೆಗಳನ್ನು ನೀಡುತ್ತಿರುವುದು ಸಮ್ಮಿಶ್ರ ಸರ್ಕಾರದ ಭವಿಷ್ಯವನ್ನು ಅತಂತ್ರಕ್ಕೆ ನೂಕಿದೆ. ಹೀಗಾಗಿ ಸರ್ಕಾರ ಯಾವಾಗ ಬೇಕಾದರೂ ಬಿದ್ದು ಚುನಾವಣೆ ಘೋಷಣೆಯಾಗಬಹುದು ಎಂಬುದು ಸೋನಿಯಾಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಈಗ ಯಾವ ನಿರ್ಧಾರ ತೆಗೆದುಕೊಂಡರೂ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೇ ತೆಗೆದುಕೊಳ್ಳಲಾಗುತ್ತಿದೆ. ಹಾಗಾಗಿ ಕರ್ನಾಟಕದಲ್ಲಿ ಗಣನೀಯ ಪ್ರಮಾಣದಲ್ಲಿರುವ ಕುರುಬ ಮತ್ತು ಇತರ ಹಿಂದುಳಿದ ಜನಾಂಗದವರನ್ನು ಒಲೈಸುವುದಕ್ಕಾಗಿ ಸಿದ್ದರಾಮಯ್ಯನವರಿಗೆ ಚುನಾವಣಾ ಉಸ್ತುವಾರಿಯನ್ನು ವಹಿಸುವ ಲೆಕ್ಕಾಚಾರ ಇದೆ. ಅಂತೆಯೇ, ಕರ್ನಾಟಕದ ಇನ್ನೊಂದು ಪ್ರಬಲ ಜಾತಿಯಾದ ಲಿಂಗಾಯತರನ್ನು ಓಲೈಸುವುದಕ್ಕಾಗಿ ಸದಾನಂದ ಡಂಗನವರ್‌ನನ್ನು ಯುವ ಕಾಂಗೈನ ಅಧ್ಯಕ್ಷಗಾದಿಗೆ ಕೂರಿಸಲಾಗಿದೆ.



ಸದಾನಂದ ಡಂಗನವರ್

ಯಾರು ಈ ಡಂಗನವರ್?

ಲಿಂಗಾಯತ ಜಾತಿಗೆ ಸೇರಿದ ಸದಾನಂದ ಡಂಗನವರ್ ಹುಬ್ಬಳ್ಳಿಯಲ್ಲಿ ಒಂದು ಕಾಲಕ್ಕೆ ತುಂಬ ಪ್ರಸಿದ್ಧ ವಕೀಲರೆಂದೇ ಖ್ಯಾತಿ ಪಡೆದ ವೀರಭದ್ರಪ್ಪ ಡಂಗನವರ್‌ರವರ ಎರಡನೇ ಪುತ್ರ. ವೀರಭದ್ರಪ್ಪ ಡಂಗನವರ್ ಕೂಡ ಕಾಂಗ್ರೆಸ್‌ನ ಸಕ್ರಿಯ ರಾಜಕಾರಣದಲ್ಲಿ ತೊಡಗಿಕೊಂಡವರೆ. ಮಾಜಿ ಸ್ಪೀಕರ್ ಕೌಜಲಗಿ, ಕೆಪಿಸಿಸಿಯ ಎಸ್.ಎಸ್. ಪಾಟೀಲ್ ಮತ್ತು ವೀರಭದ್ರಪ್ಪ ಡಂಗನವರ್ ಹುಬ್ಬಳ್ಳಿಯ ಕೊತಂಬ್ರಿ ಕಾಲೇಜಿನಲ್ಲಿ ಕೂಡಿ ಓದಿದವರು. ಹಿಂದೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ತಮಗಿರುವ ರಾಜಕೀಯ ಪ್ರಾಬಲ್ಯವನ್ನು ಬಳಸಿಕೊಂಡು ಮಗ ಸದಾನಂದ ಡಂಗನವರ್‌ನನ್ನು ಧಾರವಾಡ ಜಿಲ್ಲಾ ಯುವ ಕಾಂಗೈನ ಅಧ್ಯಕ್ಷನನ್ನಾಗಿ ಮಾಡಿದರು. 1990ರಲ್ಲಿ ವೀರಭದ್ರಪ್ಪ ಡಂಗನವರ್ ತಾವು ನಡೆಸುತ್ತಿದ್ದ ಹತ್ತಿ ವ್ಯಾಪಾರದಲ್ಲಿ ತುಂಬ ನಷ್ಟ ಅನುಭವಿಸಿ ಊರನ್ನೇ ಬಿಟ್ಟು ಹೋಗಿದ್ದುಂಟು. ಆಗ ಇವರ ಸಹಾಯಕ್ಕೆ ಬಂದವರು ಇದೇ ಕೌಜಲಗಿ ಮತ್ತು ಎಸ್.ಎಸ್. ಪಾಟೀಲ್. ಈಗ ವೀರಭದ್ರಪ್ಪ ಡಂಗನವರ್ ನಿಧನರಾಗಿದ್ದಾರೆ.

ಸದಾನಂದ ಡಂಗನವರ್ ಇದುವರೆಗೂ ರಾಜಕೀಯದಲ್ಲಿದ್ದರಾದರೂ ಮೈಕೈ ಹೊಲಸು ಮಾಡಿಕೊಂಡ ಉದಾಹರಣೆಗಳು ಕಡಿಮೆ. ಒಳ್ಳೆಯ ಮಾತುಗಾರ ಕೂಡ. ಬಹುದಿನಗಳಿಂದ ಒಳಜಗಳಗಳ ಕಾರಣದಿಂದ ಒಡೆದ ಮನೆಯಂತಿದ್ದ ಹುಬ್ಬಳ್ಳಿ-ಧಾರವಾಡ ಜಿಲ್ಲಾ ಕಾಂಗ್ರೆಸ್‌ನ ಎಲ್ಲ ಗುಂಪುಗಳಿಂದ ಸಮಾನ ಅಂತರ ಕಾಯ್ದುಕೊಂಡು ಯಾರೊಂದಿಗೂ ವೈರತ್ವ ಬೆಳೆಸಿಕೊಂಡಿಲ್ಲ. ಪ್ರಾಯಶಃ ಹೀಗಾಗಿಯೇ ಎಲ್ಲರಿಗೂ ಸಲ್ಲುವವನಾಗಿ ಈ ಗಾದಿಗೇರಲು ಯಶಸ್ವಿಯಾಗಿದ್ದಾರೆ. ಅಲ್ಲದೇ ಕೆಲವು ಹುಡುಗರನ್ನು ಕಟ್ಟಿಕೊಂಡು ಆಗೊಮ್ಮೆ ಈಗೊಮ್ಮೆ ಪ್ರತಿಭಟನೆ, ಸಭೆ-ಸಮಾರಂಭ ನಡೆಸುತ್ತ ಜಿಲ್ಲಾ ಯುವ ಕಾಂಗ್ರೆಸ್‌ನ್ನು ಈವರೆಗೆ ಜೀವಂತವಾಗಿಟ್ಟುಕೊಂಡು ಬಂದವರು. ಒಂದು ರೀತಿಯಲ್ಲಿ ಮಧ್ಯಮ ವರ್ಗದಿಂದ ಬಂದ ಸಭ್ಯ ರಾಜಕಾರಣಿ ಎಂಬಂತೆ ಕಾಣುತ್ತಾರೆ. ಆದರೆ ಅವರ ಈ ಇಮೇಜ್ ಯುವ ಕಾಂಗೈನ ಅಧ್ಯಕ್ಷರಾದ ಮೇಲೂ ಹೀಗೇ ಎಷ್ಟು ದಿನ ಮುಂದುವರೆಯುತ್ತೋ ನೋಡಬೇಕು.

ದಿನೇಶ್ ಗುಂಡೂರಾವ್ ಇದ್ದಷ್ಟು ದಿನ ಯುವ ಕಾಂಗ್ರೆಸ್ಸಂತೂ ಉದ್ಧಾರವಾಗಲಿಲ್ಲ. ಬರಿ ಒಣಮಾತು ಪೊಳ್ಳು ಪೋಜು ಕೊಡುವುದರಲ್ಲಿಯೇ ಗುಂಡೂರಾವ್ ಬಿಜಿಯಾಗಿದ್ದರೇ ಹೊರತು ಯುವ ಕಾಂಗ್ರೆಸ್‌ನ್ನು ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಕಟ್ಟುವಲ್ಲಿ ಸಂಪೂರ್ಣವಾಗಿ ವಿಫಲರಾದರು. ಈಗ ಆ ಸ್ಥಾನಕ್ಕೆ ಬಂದಿರುವ ಸದಾನಂದ ಡಂಗನವರ್ ತನ್ನ ಗುರು ಗುಂಡೂರಾವ್ ಹೆಜ್ಜೆಗಳನ್ನೇ ಹಿಂಬಾಲಿಸುತ್ತಾರೋ ಅಥವಾ ಒಂದಿಷ್ಟು ಕ್ರಿಯಾಶೀಲವಾಗಿ, ಶ್ರಮವಹಿಸಿ ಪಕ್ಷ ಸಂಘಟನೆಯಲ್ಲಿ ತೊಡಗುತ್ತಾರೋ ಎಂಬುದನ್ನು ಕಾದು ನೋಡಬೇಕಷ್ಟೆ.

ಬಸವಣ್ಣನ ರಕ್ಷಣೆಗೆ ಬಾಡಿಗೆ ಜನಗಳೇ?

ಜಂಗಮ ಬಸವ ಜಗತ್ತಿನ ಪ್ರೀತಿಯನ್ನೆಲ್ಲಾ ತನ್ನಲ್ಲೇ ಎರಕ ಹೊಯ್ದುಕೊಂಡು ಇವ ನಮ್ಮವ ಇವ ನಮ್ಮವ ಎಂದೆನಿರವ್ವ ಎಂದವನು. ಮನುಷ್ಯ ಕುಲದಲ್ಲಿ ಬೇಧ ಭಾವ ಬಿತ್ತದೆ ಮನುಜ ಕುಲ ತಾನೊಂದೆ ವಲಂ ಎಂದು ಬದುಕಬೇಕೆಂದು ಕನಸ ಕಂಡವನು. ಅವರ ಅನುಭವ ಮಂಟಪದಲ್ಲಿ ಸದಾ ವಿವಿಧ ತತ್ವ ಜಿಜ್ಞಾಸೆಗಳ ಬಗೆಗೆ ಸತತ ವಾದ ಮತ್ತು ವಿವಾದಗಳು ನಡೆಯುತ್ತಲೇ ಇದ್ದವೆನ್ನುವುದಕ್ಕೆ ಆ ಚಳವಳಿಯ ನಾಯಕಗಣ ದಲ್ಲಿದ್ದ ಬಸವ, ಅಕ್ಕನ ವಿಚಾರಗಳ ಬಗ್ಗೆ ಹಲವು ಕೂರಂಬುವಿನಂತ ವಚನಗಳನ್ನು ಇತರ ಜಾತಿಗಳ ವಚನಕಾರರು ರಚಿಸಿರುವುದೇ ಸಾಕ್ಷಿ. ಆದರೆ ಇಷ್ಟೊಂದು ವಾಗ್ವಾದ ನಡೆದರೂ ಅಲ್ಲಿ ವಿಚಾರಗಳ ತಾಕಲಾಟ ನಡೆದ ಪುರಾವೆಯಿದೆಯೇ ವಿನಃ ರಕ್ತಪಾತಕ್ಕೆ ಅಥವಾ ತಾನೊಲ್ಲದ ವಿಚಾರವನ್ನು ಹೊಂದಿದ ವಚನಕಾರನ ರಕ್ತಪಾತಕ್ಕೆ ಮುಂದಾದ ಉದಾಹರಣೆಯಿಲ್ಲ.

ಆದರೆ ತಮ್ಮನ್ನು ತಾವು ಬಸವನ ಅನುಯಾಯಿಗಳೆಂದು ಕರೆಸಿಕೊಳ್ಳುವವರು ಮೊನ್ನೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅನುದೇವಾ ಕೃತಿಯ ಚರ್ಚೆಯ ಮೇಲೆ ಎಬ್ಬಿಸಿದ ಗೊಂದಲ ತಾನು ಒಪ್ಪದ ವಿಚಾರಗಳ ಮೇಲೆ ಮಾಡಿದ ದೈಹಿಕ ದಾಳಿ ನಿಜಕ್ಕೂ ಅಕ್ಷಮ್ಯ ಮತ್ತು ಬಸವ ಪರಂಪರೆಗೇ ಒಂದು ಕಪ್ಪು ಚುಕ್ಕೆ. ಅನುದೇವಾ ಬಗ್ಗೆ ಮುಕ್ತ ಸಂವಾದ ನಡೆಸಬೇಕೆಂದು ಅನುಭವ ಮಂಟಪದ ಸ್ಫೂರ್ತಿಯಲ್ಲಿ ಸಾಹಿತ್ಯ ಪರಿಷತ್ ಅಧ್ಯಕ್ಷ ಚಂಪಾ ಜೂನ್ 9ನೇ ತಾರೀಕು ಬೆಂಗಳೂರಿನ ಸಾಹಿತ್ಯ ಪರಿಷತ್ ಆವರಣದಲ್ಲಿ ಒಂದು ಮುಕ್ತ ಸಂವಾದ ಸಭೆ ಕರೆದಿದ್ದರಷ್ಟೆ. ಸಭೆಯಲ್ಲಿ ಚರ್ಚೆ ಬಿಟ್ಟು ಮಿಕ್ಕಿದ್ದೆಲ್ಲಾ ನಡೆದದ್ದು ಇದೇ ಬಸವನ ಅನುಯಾಯಿಗಳೆಂದು ಹೇಳಿಕೊಳ್ಳುವ ಕಾವಿಧಾರಿ ಖೂಳರಿಂದ.. ಒಬ್ಬ 'ವಿರಕ್ತ' ಸ್ವಾಮಿಯಂತೂ ಆರ್.ಜಿ.ಹಳ್ಳಿ ನಾಗರಾಜ್ ಮೈಮೇಲೆ ಏರಿಹೋದದ್ದು ಮಾತ್ರ ಬಸವ ಪಂಥ ಎಂಥಾ ಗೂಂಡಾಗಳ ಕೈಯಲ್ಲಿ ಸಿಕ್ಕಿ ನರಳುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.



ಅದಕ್ಕಿಂತ ಮೊದಲು ಹುಬ್ಬಳ್ಳಿಯಿಂದ ಅಪ್ಪಣೆ ಕೊಡಿಸಿದ್ದ ಮತ್ತೊಬ್ಬ ವಿರಕ್ತ ಗುರು ಅನುದೇವಾ ಪುಸ್ತಕವನ್ನು ಮಾತ್ರವಲ್ಲ ಪುಸ್ತಕ ಬರೆದವನನ್ನೇ ಸುಟ್ಟು ಹಾಕಬೇಕು ಎಂದು ಥೇಟ್ ಭಜರಂಗಿಗಳ ಥರ ಬೆದರಿಕೆ ಒಡ್ಡಿದ್ದರು.

ಎಲ್ಲಕ್ಕಿಂತ ಹೆಚ್ಚಾಗಿ ಒಂದು ಮುಕ್ತ ಸಂವಾದ ಸಾಧ್ಯವಾಗಬಾರದೆಂದು ಬಂದಿದ್ದ ಇವರು ಬಸವನ ಅಥವಾ ಅವನು ಹುಟ್ಟಿ ಹಾಕಿದ ಮುಕ್ತ ಸಂವಾದ ವೇದಿಕೆಯಾಗಿದ್ದ ಅನುಭವ ಮಂಟಪದ ಸ್ಫೂರ್ತಿಗೇ ಕಳಂಕ ತಂದರು. ಇದೇ ಪರಮತ ದಮನದ ಅಭಿಪ್ರಾಯವನ್ನು ವೀರಶೈವ ಯುವವೇದಿಕೆ ಇನ್ನಿತ್ಯಾದಿ ಸಂಘಟನೆಗಳು ವ್ಯಕ್ತಪಡಿಸಿವೆ. ಫ್ಯಾಸಿಸ್ಟ್ ಭಜರಂಗಿ, ಆರೆಸ್ಸೆಸ್ ಮಾಡುವುದೂ ಇದನ್ನೇ.

ಜಂಗಮರೂಪಿ ಸತ್ಯ ಸ್ಥಾವರವಾದೊಡನೆ ಸತ್ಯದ ಸಾವಾಗುವುದು ಎನ್ನುವುದಕ್ಕೆ ಮೊನ್ನೆ ಚರ್ಚೆಯಲ್ಲಿ ಬಸವನ ಅನುಯಾಯಿಗಳು ಎಬ್ಬಿಸಿದ ಗಲಭೆ ಮತ್ತೊಂದು ಪುರಾವೆ. ಬುದ್ಧ, ಏಸು, ಬಸವ ಎಲ್ಲರೂ ಸತ್ಯಾನ್ವೇಷಿಗಳೆ. ಒಂದರ್ಥದಲ್ಲಿ ಇವರ್‍ಯಾರೂ ಇದೇ ಅಂತಿಮ ಸತ್ಯ ಎಂದು ಪ್ರತಿಪಾದಿಸಿದವರಲ್ಲ, ಸ್ವಹಿತಾಸಕ್ತಿಯಿಲ್ಲದೆ ಸತ್ಯದ ಅಂದರೆ ಮನುಷ್ಯರೆಲ್ಲರ ಸಹಬಾಳ್ವೆಯ ಆಧ್ಯಾತ್ಮವನ್ನು ಸಾರಿದವರು. ಮನುಷ್ಯನ ದುಃಖದ ಮೂಲವನ್ನು ಹುಡುಕಲು ಮತ್ತು ಅದರ ಪರಿಹಾರದ ಮಾರ್ಗವನ್ನು ಹುಡುಕಲು ಪ್ರಯತ್ನಿಸಿದವರು. ಅವರ ಸತ್ಯಾನ್ವೇಷಣೆಗೆ ಧರ್ಮ ಒಂದು ಸಾಧನವಾಗಿತ್ತೇ ವಿನಃ ಅದೇ ಅಂತಿಮವಾಗಿರಲಿಲ್ಲ. ಸತ್ಯದರ್ಶನಕ್ಕೆ ಅಡ್ಡಿ ಬಂದಿದ್ದರಿಂದಲೇ ಅವರು ತಮ್ಮ ಕಾಲದ ಸ್ಥಾಪಿತ ಧರ್ಮಗಳಿಂದ ಹೊರಬಂದಿದ್ದು. ಹಾಗೂ ತಮ್ಮ ಕಾಲದಲ್ಲಿ ತಾವು ಸಾರಿದ ತತ್ವ ಜಂಗಮವಾಗಿಯೇ ಇರಲು ತಾವೆ ಸ್ವತಃ ಜಂಗಮರಂತೆ, ಅಂದರೆ ಸ್ಥಾಪಿತ ಹಿತಾಸಕ್ತಿಗಳ ದಾಳಕ್ಕೆ ಸ್ಥಾವರವಾಗದೆ, ಉಳಿದರು. ಆದ್ದರಿಂದಲೇ ಬಸವನ ಕಾಲದಲ್ಲಿ ಮುಕ್ತ ಸಂವಾದದ ಅನುಭವ ಮಂಟಪವಿತ್ತು.

ಆದರೆ ಮೊನ್ನೆ ಸಾಹಿತ್ಯ ಪರಿಷತ್‌ನಲ್ಲಿ ನಡೆದದ್ದು ಇದರ ತದ್ವಿರುದ್ಧವಾದದ್ದು. ಬಸವ ತತ್ವವನ್ನು ಒಪ್ಪಿಕೊಂಡವರೆಲ್ಲಾ ತಲೆ ತಗ್ಗಿಸುವಂತದ್ದು, ಅದೂ ಬಸವನ ಹುಟ್ಟಿನಲ್ಲೇ ಇರಬಹುದಾದ ಜಂಗಮತ್ವದ ಬಗ್ಗೆ ಚರ್ಚೆ ನಡೆಯುವಾಗ ನಡೆದ ಈ ಹಲ್ಲೆ ಮತ್ತು ಗಲಭೆ ಬಸವ ನಮ್ಮವ ಎಂದು ಹೇಳಿಕೊಳ್ಳುವವರಲ್ಲಿ ಆಳವಾಗಿ ಬೇರೂರಿರುವ ಜಾತಿ ಬುದ್ಧಿಯನ್ನು ತೋರುತ್ತದೆ. ಬಸವ ಮಾದಿಗನಿರಬಹುದೇ ಎಂಬ ಅನುಮಾನವೇ ಅವರಲ್ಲಿ ಉಂಟು ಮಾಡುತ್ತಿರುವ ಅಸಹನೆಗೆ ಕಾರಣ ಬ್ರಾಹ್ಮಣ್ಯದ ಜಾತಿ ಶ್ರೇಣೀಕರಣದ ಕ್ರೂರ ಜಾತಿ ಬುದ್ಧಿ ಇವರೆಲ್ಲರ ಅಸಹನೆಗೆ ಅದೇ ಮೂಲ ಕಾರಣ.

ಬಸವ ಈ ಬ್ರಾಹ್ಮಣ್ಯವನ್ನು ವಿರೋಧಿಸಿಯೇ ಅಲ್ಲವೇ ಬಸವ ಚಳವಳಿ ಕಟ್ಟಿದ್ದು?

ಈ ಪ್ರಕರಣ ಬಂಜಗೆರೆ ಜಯಪ್ರಕಾಶರ ಪುಸ್ತಕವನ್ನು ಇನ್ನೂ ಹೆಚ್ಚು ಪ್ರಸಿದ್ಧ ಮಾಡುತ್ತಿದೆ.

ಹಾಸನ: ಮಣ್ಣಿನ ಮಕ್ಕಳ ಜಿಲ್ಲೆಯಲ್ಲಿ ಆಲೂ ರೈತರ ಗೋಳು



ಒಂದೆಡೆ ಮಾಜಿ ಪ್ರಧಾನಿ, ಸ್ವಯಂಘೋಷಿತ ಮಣ್ಣಿನ ಮಗ ಎಚ್.ಡಿ. ದೇವೇಗೌಡ ರೈತರಿಗಾಗಿ ತಾನು ಯಾವ ತ್ಯಾಗಕ್ಕೂ ಸಿದ್ಧ ಎಂಬ ಹಳೇ ಡೈಲಾಗ್‌ನ್ನು ಕಂಡಕಂಡಲ್ಲಿ ಕಕ್ಕುತ್ತಿದ್ದರೆ, ಅವರ ಮಗ ಅರ್ಥಾತ್ ಮಣ್ಣಿನ ಮೊಮ್ಮಗ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಇನ್ನು ಮುಂದೆ ಕರ್ನಾಟಕದಲ್ಲಿ ಯಾರೇ ರೈತರು ಆತ್ಮಹತ್ಯೆ ಮಾಡಿಕೊಂಡರೆ ಒಂದು ಕ್ಷಣ ಅಧಿಕಾರದಲ್ಲಿರುವುದಿಲ್ಲ ಎಂದು ಡ್ರಾಮಾ ಮಾಡುತ್ತಿದ್ದಾರೆ. ಇವರಿಬ್ಬರನ್ನು ನೋಡಿದರೆ 'ರೈತರ ಪರ' ಎನಿಸಿಕೊಳ್ಳುವುದಕ್ಕೆ ನಾಮುಂದು ತಾ ಮುಂದು ಎಂಬ ರೇಸಿಗಿಳಿದಂತಿದೆ. ಆದರೆ ನೀವೇನಾದರೂ ಒಮ್ಮೆ ಅವರ ತವರು ಜಿಲ್ಲೆ ಹಾಸನಕ್ಕೆ ಬಂದರೆ ಕಣ್ಣಿಗೆ ರಾಚುತ್ತದೆ ಅಪ್ಪ-ಮಕ್ಕಳ ಅಸಲಿ ರೈತ ಪ್ರೇಮ! ಈರುಳ್ಳಿ ಗೋಪಾಲ, ಅವನ ತಮ್ಮ ವಿಶ್ವನಾಥ, ಎಚ್.ಕೆ. ಬೋರೇಗೌಡ, ದೊಡ್ಡಗುದ್ದುವಳ್ಳಿಯ ಚಂದ್ರೇಗೌಡ ನಂತಹ ಲೋಕಲ್ ಮಧ್ಯವರ್ತಿ ದಂಡು ಹಾಗೂ ದೂರದ ಪಂಜಾಬ್ ರಾಜ್ಯದಿಂದ ಬರುವ ಪಂಜಾಬಿ ವರ್ತಕರ ಹಿಂಡು ಒಟ್ಟಾಗಿ ಹಾಸನದ ಆಲೂಗಡ್ಡೆ ರೈತರನ್ನು ಮೋಸ, ವಂಚನೆ ಮಾಡಿ ಹಿಂಡಿ ಹಿಪ್ಪೆ ಮಾಡಿ ಹಾಕುತ್ತಿದ್ದರೆ ಈ ಲೂಟಿಕೋರರಿಗೆಲ್ಲ ಹಾಸನದ ಅಧಿಕಾರಿವರ್ಗ ಬೆಂಗಾವಲಾಗಿ ನಿಂತಿದೆ. ಒಟ್ಟಿನಲ್ಲಿ ಮಣ್ಣಿನ ಮಕ್ಕಳು-ಮೊಮ್ಮಕ್ಕಳು ಕಮೀಷನ್ನಿಗೆ ರೈತರ ಹಿತಾಸಕ್ತಿಯನ್ನು ಮಾರಿಕೊಂಡಿರುವುದಂತೂ ಸತ್ಯ.

ರೈತರಿಗೆ ಅದು ಚಿನ್ನ!

ಅಸಲಿಗೆ ಹಾಸನ ಜಿಲ್ಲೆಯ ರೈತರ ಪಾಲಿಗೆ ಆಲೂಗಡ್ಡೆ ಬೆಳೆಯುವುದು ತಮ್ಮ ಜಮೀನಿನಲ್ಲಿ ತಾತನ ಕಾಲದ ಚಿನ್ನದ ನಿಧಿ ಅಚಾನಕ್ಕಾಗಿ ಸಿಕ್ಕಂತೆಯೇ ಎಂಬ ಸಂತಸ ಹಾಗೂ ಭ್ರಮೆ ಇದೆ. ಇಂಥ ಭ್ರಮೆಯಿಂದಾಗಿಯೇ ಅದನ್ನು ಬೆಳೆಯಲು ಇಲ್ಲಿನ ರೈತರು ಮುಗಿಬೀಳುತ್ತಾರೆ.



ಅವರ ಈ ರೀತಿಯ ಆತುರ ಹಾಗೂ ಹಣ ಮಾಡುವ ವ್ಯಾಮೋಹವನ್ನು ಎನ್‌ಕ್ಯಾಷ್ ಮಾಡಿಕೊಳ್ಳುತ್ತಿರುವ ಹಾಸನದ ವರ್ತಕರು ಹಾಗೂ ಪಂಜಾಬಿನ ವಂಚಕರು ಮಣ್ಣಿನ ಮಗನ ಜಿಲ್ಲೆಯ ರೈತರ ಬದುಕನ್ನೇ ಸುಟ್ಟು ಹಾಕಿ ಬೃಹದಾಕಾರದಲ್ಲಿ ಬೂದಿಯ ರಾಶಿಯನ್ನು ಏರಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಅದಕ್ಕೆ ತಕ್ಕ ಹಾಗೆ ಹಾಸನದ ಜಿಲ್ಲಾಧಿಕಾರಿ ಅಶ್ವಥನಾರಾಯಣ ಗೌಡರು ಕೂಡ ನರ್ತಿಸುತ್ತಿರುವುದು ರೈತರ ಅವಸಾನಕ್ಕೆ ಇವರಿಗಿಂತ ಇನ್ಯಾರಾದರೂ ಯಾಕೆ ಬೇಕು ಎಂದು ಯೋಚಿಸುವಂತೆ ಮಾಡಿದೆ.

ಕಳ್ಳ-ಮಳ್ಳರ ಜೋಡಿ

ಸ್ವಲ್ಪವೇ ವ್ಯತ್ಯಾಸವಾದರೂ ತಾವು ಮುಳುಗಿ ಹೋಗುತ್ತೇಂಬುದರ ಬಗ್ಗೆ ಗಂಭೀರವಾಗಿ ಒಮ್ಮೆಯೂ ಯೋಚಿಸದ ರೈತರು ಮೇ ತಿಂಗಳು ಬಂತೆಂದರೆ ಬಿತ್ತನೆ ಆಲೂಗಡ್ಡೆ ಖರೀದಿಸಲು ಮಾರ್ವಾಡಿ ಅಂಗಡಿಗಳಿಗೆ ತೆರಳಿ ಹೆಂಡತಿ-ಮಕ್ಕಳ ಒಡವೆಗಳನ್ನು ಅಡವಿಟ್ಟು ಗಂಟು ಹಿಡಿದು ಬರುತ್ತಾರಲ್ಲಾ, ಅದರ ಸದುಪಯೋಗಪಡಿಸಿಕೊಳ್ಳುವುದಕ್ಕೆಂದೇ ಹಾಸನದಲ್ಲಿ ಇವತ್ತು ವಂಚಕ ಜಾಲವೊಂದು ಚಾಲಾಕಿತನದಿಂದಲೇ ಕಾರ್ಯ ನಿರ್ವಹಿಸುತ್ತಿದೆ. ಪ್ರತಿವರ್ಷ ಸುಮಾರು ಮೂರುವರೆ ಸಾವಿರದಿಂದ ನಾಲ್ಕು ಸಾವಿರ ಲೋಡಿನಷ್ಟು ಬಿತ್ತನೆ ಆಲೂಗಡ್ಡೆ ಈ ಮೊದಲು ಹಾಸನ ಜಿಲ್ಲೆಗೆ ಸರಬರಾಜಾಗುತ್ತಿದ್ದುದು ದೂರದ ಪಂಜಾಬ್ ರಾಜ್ಯದಿಂದ.

ಈ ರೀತಿ ಬಿತ್ತನೆ ಆಲೂಗಡ್ಡೆಯನ್ನು ಲಾರಿಗಳಲ್ಲಿ ಹೊತ್ತು ತಂದು ತಿಂಗಳುಗಟ್ಟಲೇ ಪಂಜಾಬ್‌ನ ವರ್ತಕರು ಹಾಸನದಲ್ಲೇ ಯಾವತ್ತು ಠಿಕಾಣಿ ಹೂಡಿ ಭರ್ಜರಿ ಗಂಟು ಮಾಡಿಕೊಳ್ಳತೊಡಗಿದರೋ, ಆದಾಗ ಸ್ಥಳೀಯ ವರ್ತಕರೆಲ್ಲ ಅಲರ್ಟ್ ಆಗಿಬಿಟ್ಟರು. ಸದ್ದಿಲ್ಲದ ಹಾಗೆ ಪಂಜಾಬಿ ವರ್ತಕರೊಂದಿಗೆ ಹಾತ್ ಮಿಲಾವ್ ಮಾಡಿದರು, ಅವರಿಗೆ ಅರೆ-ಬರೆ ಕನ್ನಡ ಕಲಿಸಿ, ತಾವೂ ಅರೆ-ಬರೆ ಹಿಂದಿ ಕಲಿತರು.

ಅದರ ಪರಿಣಾಮ ಸ್ಥಳೀಯ ವಂಚಕ ವರ್ತಕರೇ ತಮ್ಮದೇ ರೈತರಿಗೆ ಮಕ್ಮಲು ಟೋಪಿ ಹಾಕಿ, ಲುಕ್ಸಾನು ಹೊಂದಿದ ರೈತರು ತಮ್ಮ ಮನೆ-ಮಠಗಳನ್ನು ಮಾರಿಕೊಳ್ಳುವಂತಹ ದುರಂತದತ್ತ ಸಾಗುವುದಕ್ಕೆ ಕಾರಣೀಭೂತರಾಗತೊಡಗಿದರು.

ಲೋಕಲ್ ಮಾಲು ಜಲಂಧರ್ ಸೀಲು!

ಇವತ್ತು ಆಲೂಗಡ್ಡೆ ಬೆಳೆಯುವ ಹಾಸನ ಜಿಲ್ಲೆಯ ಪ್ರತಿಯೊಬ್ಬ ರೈತ ಕೂಡ ಬಿತ್ತನೆ ಆಲೂಗಡ್ಡೆ ಕೊಳ್ಳುವಾಗ ಪ್ರಯಾರಿಟಿ ಕೊಡುವುದೇ ಪಂಜಾಬ್‌ನ ಜಲಂಧರ್‌ನಿಂದ ಸರಬರಾಜಾಗುವ G.K. ಹಾಗೂ F ಮಾರ್ಕಿನ ಬಿತ್ತನೆ ಬೀಜಗಳಿಗೆ.

ಅದನ್ನೇ ತಮ್ಮ ಮಕ್ಮಲುಟೋಪಿ ದಂಧೆಗೆ ಪ್ಲಸ್ ಪಾಯಿಂಟ್ ಮಾಡಿಕೊಂಡ ಸ್ಥಳೀಯ ವರ್ತಕರು, ಪಂಜಾಬಿಗಳು ಇಲ್ಲೇ ಶೀತಲ ಗೃಹ ನಿರ್ಮಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಷ್ಟೇ ಅಲ್ಲ, ಅದೇ ಶೀತಲಗೃಹದಲ್ಲಿ ಹಾಸನದ ಲೋಕಲ್ ಆಲೂಗಡ್ಡೆಯನ್ನು ಸಂಗ್ರಹಿಸಿ ಪಂಜಾಬಿ ವರ್ತಕರೊಡನೆ ಕೈಗೂಡಿಸಿದರು. ಪರಿಣಾಮವಾಗಿ ಜಲಂಧರ್ ಸೀಲ್ ಹೊತ್ತ ಚೀಲದಲ್ಲಿ ಲೋಕಲ್ ಬಿತ್ತನೆ ಆಲೂಗಡ್ಡೆಯೇ ಸರಬರಾಜಾಗಿ ರೈತರು ಹಳ್ಳಕ್ಕೆ ಬೀಳತೊಡಗಿದರು. ದೇವೇಗೌಡರಿಗಾಗಲೀ ಅವರ ಮಣ್ಣಿನ ಮೊಮ್ಮಕ್ಕಳಿಗಾಗಲಿ ರೈತರ ಬಗ್ಗೆ ನೈಜ ಕಾಳಜಿ ಎಂಬುದು ಇದ್ದಲ್ಲಿ ಇವತ್ತು ಈ ಕುರಿತು ಒಂದು ಗಂಭೀರ ತನಿಖೆ ನಡೆಸಿದರೂ ಸಾಕು, ವಂಚಕರಿಂದಲೇ ಹಾಸನ ಜೈಲು ಭರ್ತಿಯಾಗಿ ಬಿಡುತ್ತದೆ.

ಜಿಲ್ಲಾಧಿಕಾರಿ ಇರೋದ್ಯಾಕೆ?

ಇವತ್ತು ಹಾಸನ ಜಿಲ್ಲಾ ಉಸ್ತುವಾರಿ ಮುಖ್ಯಮಂತ್ರಿ ಪಟ್ಟದ ಕನಸು ಕಾಣುತ್ತಿರುವ ಎಚ್.ಡಿ. ರೇವಣ್ಣನ ಕಪಿಮುಷ್ಟಿಯಲ್ಲಿದೆ. ರೇವಣ್ಣನ ರಬ್ಬರ್ ಸ್ಟಾಂಪಿನಂತೆ ವರ್ತಿಸುವ ಜಿಲ್ಲಾಧಿಕಾರಿಯೂ ಇದ್ದಾರೆ. ಹಾಗೆಯೇ ರೈತರ ಏಳಿಗೆಗಾಗಿಯೇ ಸ್ಥಾಪಿಸಲ್ಪಟ್ಟ ಎ.ಪಿ.ಎಂ.ಸಿ.ಯೂ ಇದೆ. ಇದರ ಅಧ್ಯಕ್ಷ ಗಾದಿಯಲ್ಲಿ ದುದ್ದ ಲಕ್ಷ್ಮಣ ಎಂಬ ನಾಲಾಯಕ್ ಮನುಷ್ಯ ಕುಳಿತಿದ್ದಾನೆ. ಇವರೆಲ್ಲರ ಅಸಡ್ಡೆ, ನಿಸ್ಸೀಮ ನಿರ್ಲಕ್ಷ್ಯದಿಂದ ರೈತರಿಗೆ ಪಂಗನಾಮ ಹಾಕುವ ಕಾಯಕ ಯಾವ ಎಗ್ಗೂ ಇಲ್ಲದೆ ಮುಂದುವರೆದಿದೆ.

ವಾಸ್ತವವಾವಾಗಿ ಆಲೂಗಡ್ಡೆ ಮಾರಾಟಕ್ಕೆ ಯಾವುದೇ ವರ್ತಕ ಲೈಸನ್ಸು ಪಡೆಯಬೇಕು. ಆ ಲೈಸನ್ಸು ಕೊಡುವಾಗ ವಿಧಿಸುವ ಷರತ್ತುಗಳು ವರ್ತಕನಿಗೆ ದುಗ್ಗಾಣಿಯ ಲಾಭವನ್ನೂ ತಂದುಕೊಡುವುದಿಲ್ಲ, ಇದನ್ನೆಲ್ಲ ಅರಿತೇ ಈರುಳ್ಳಿ ಗೋಪಾಲ, ಅವನ ತಮ್ಮ ವಿಶ್ವನಾಥ, ಎಚ್.ಕೆ. ಬೋರೇಗೌಡ ಮುಂತಾದ ಲೈಸನ್ಸ್ ಹೊಂದಿದ ಮಧ್ಯವರ್ತಿಗಳು, ದೊಡ್ಡ ಗದ್ದುವಳ್ಳಿಯ ಚಂದ್ರೇಗೌಡ ಹಾಗೂ ಇತರರ ಮೂಲಕ ಆಲೂಗಡ್ಡೆ ಮಾರಾಟ ಮಾಡಿ ಸರ್ಕಾರಕ್ಕೆ ವಂಚಿಸುತ್ತಲೇ ಇದ್ದಾರೆ. ದುಡ್ಡು ಕೊಟ್ಟು ಆಲೂಗಡ್ಡೆ ಖರೀದಿಸಿದ ರೈತನೇನಾದರೂ ಬಿಲ್ ಕೇಳಿದರೆ ಆಲೂಗಡ್ಡೆ ಇಲ್ಲಾ ಹೋಗಯ್ಯ ಎಂಬ ದುರಹಂಕಾರದ ಉತ್ತರ ಈ ಖದೀಮರಿಂದ ರೈತರಿಗೆ ದಿಢೀರನೆ ಸಿಗುತ್ತದೆ.

ಡಬಲ್ ವಂಚನೆ

ಸರ್ಕಾರವೇ ಕಳೆದ ವರ್ಷ ಆಲೂಗಡ್ಡೆಗೆ 1100 ರೂಪಾಯಿ ಬೆಂಬಲ ಬೆಲೆ ನಿರ್ಧರಿಸಿತ್ತು, ಜಿಲ್ಲಾಡಳಿತದ ನಿರ್ಣಯದಂತೆ ವಹಿವಾಟೂ ನಡೆದಿತ್ತು, ಆದರೆ ಈ ವರ್ಷ ಎಲ್ಲವೂ ಉಲ್ಟಾ ಹೊಡೆದಿದೆ. ಆಲೂಗಡ್ಡೆ ಬೆಲೆ 1100 ರೂಪಾಯಿ ಬದಲಿಗೆ 1300 ರಿಂದ 1400 ರೂಪಾಯಿಗೆ ಏರಿದೆ.

ಇದೇ ಹಿನ್ನೆಲೆಯಲ್ಲಿ ರೈತರಿಗೂ-ವರ್ತಕರಿಗೂ ಮಾತಿನ ಚಕಮಕಿ ನಡೆದಾಗ ಇದೇ ಅಸಡ್ಡೆಯ ಜಿಲ್ಲಾಧಿಕಾರಿ ಅಶ್ವಥನಾರಾಯಣಗೌಡರ ಸಮ್ಮುಖದಲ್ಲಿ ಸಭೆಯೂ ನಡೆಯಿತು. ಡಿ.ಸಿ. ಸಾಹೇಬರಿಗೆ ಅದೆಲ್ಲಿಂದ ಹುಕುಮ್ಮು ಹೊರಟಿತೋ, ಅವರು ಈ ಸಮಸ್ಯೆಗೂ ನನಗೂ ಸಂಬಂಧವೇ ಇಲ್ಲ ಎಂಬಂತೆ ಸಭೆಯಿಂದಲೇ ಎದ್ದು ಹೊರಟರು. ಪ್ರತಿಭಟನೆಗಳ ನಂತರ ಆಲೂಗಡ್ಡೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ನಿರ್ಣಯ ಕೈಗೊಳ್ಳಲಾಯಿತು. ಇಂಥದೊಂದು ರೈತರಿಗೆ ಮಾರಕವಾಗುವ ನಿರ್ಣಯವನ್ನು ಜಿಲ್ಲಾಡಳಿತ ಕೈಗೊಳ್ಳುವುದಕ್ಕೆ ಐಡಿಯಾ ಕೊಟ್ಟಿದ್ದೆ ಎಪಿಎಂಸಿ ಅಧ್ಯಕ್ಷ ದುದ್ದಲಕ್ಷ್ಮಣ ಎಂದರೆ, ಆತನ ರೈತಪರ ಕಾಳಜಿ ಎಂಥದೆಂಬುದರ ಅರಿವಾದೀತು.

ಒಂದೆಡೆ ಈ ರೀತಿಯ ವಂಚನೆಯಾಗುತ್ತಿದ್ದರೆ ಆಲೂಗಡ್ಡೆಯ ಚೀಲದ ತೂಕದಲ್ಲೂ ಭಾರಿ ವಂಚನೆ ಎಸಗಲಾಗುತ್ತಿದೆ. 50 ಕೆ.ಜಿ. ತೂಕದ ಚೀಲವನ್ನು ಕೊಂಡೊಯ್ದು, ಬೇರೆಡೆ ತೂಕ ಮಾಡಿಸಿ ನೋಡಿದರೆ ಬರುವುದೇ 45 ಕೆ.ಜಿ. ಮಾತ್ರ. ಅಲ್ಲಿಗೆ ಪಾಪಿ ಬಡವನಿಗೆ ವರ್ತಕರು-ಜಿಲ್ಲಾಡಳಿತ ಹಾಗೂ ಮಧ್ಯವರ್ತಿಗಳು ಎಲ್ಲರೂ ಒಟ್ಟಿಗೆ ಸೇರಿ ಹಾಕುತ್ತಿರುವುದು ಮಕ್ಮಲು ಟೋಪಿ ಅಲ್ಲದೆ ಬೇರೇನೂ ಅಲ್ಲ.

ಇದೆಲ್ಲ ಇಪ್ಪತ್ನಾಲ್ಕು ಗಂಟೆಯೂ ಈ ನೆಲದ ರೈತರ ಬಗ್ಗೆ ನಾನು ಯೋಚಿಸುತ್ತೇನೆಂದು ಟವೆಲ್ಲು ಒದರಿ ಮಾತನಾಡುವ ದೇವೇಗೌಡರಿಗಾಗಲಿ, ಅವರ ಅಧಿಕಾರದಾಹಿ ಮಕ್ಕಳಿಗಾಗಲಿ ಗೊತ್ತಿಲ್ಲದ ವಿಚಾರವೇನಲ್ಲ? ಗೊತ್ತಿದ್ದೂ ಸಮಸ್ಯೆ ಬಗೆಹರಿಸಿಬಿಟ್ಟಲ್ಲಿ ಮುಂದಿನ ಚುನಾವಣೆಗೆ ರೈತರ ಪರ ಮಾತನಾಡಲು ಅವರುಗಳಿಗೆ ಸಬ್ಜೆಕ್ಟೇ ಇರುವುದಿಲ್ಲವಲ್ಲ? ಹಾಗಾಗಿಯೇ ರೈತರ ಪರಿಪಾಟಲು ಮುಂದುವರಿದೇ ಇದೆ.

ದೇವೇಗೌಡರಿಗೆ ತಮ್ಮ ಜಿಲ್ಲೆಯಲ್ಲೇ ರೈತರನ್ನು ಆಲೂಗಡ್ಡೆ ವಿಚಾರದಲ್ಲಿ ವಂಚಿಸುತ್ತಿರುವ ವರ್ತಕರು, ಎಪಿಎಂಸಿ ಹಾಗೂ ಜಿಲ್ಲಾಡಳಿತದ ವಿರುದ್ಧ ಗುಟುರು ಹಾಕಿ ಕ್ರಮಕೈಗೊಳ್ಳುವ ಪುರುಸೊತ್ತಾದರೂ ಎಲ್ಲಿದೆ ಪಾಪ!?

-ನವಿಗಾರ



ಹುಲಿಗೆ ಒದ್ದು ವಿಕಾರವಾದವನ ಕಥೆ

ನಾನು ದಲ್ಲಾನಿಯಾಕ್ಕೆ ಬಂದು ಒಂದು ತಿಂಗಳು ಕಳೆದಾಗುತ್ತಿತ್ತು. ಈ ದಿನಗಳಲ್ಲಿ ಮರ-ಬಯಲುಗಳಲ್ಲಿ ... ಭಯವಿರುವ ಮಲಗಿ, ನಿದ್ದೆಗೆಟ್ಟು, ನೂರಾರು ಮೈಲಿ ನಡೆದು, ವಾರಗಟ್ಟಲೆ ಉಪವಾಸವಿದ್ದ ಕಾರಣಗಳಿಂದಾಗಿ ನಾನು ದೈಹಿಕವಾಗಿ-ಮಾನಸಿಕವಾಗಿ ಜರ್ಜರಿತನಾಗಿ ಬಿಟ್ಟಿದ್ದೆ. ನನಗೆ ವಿಶ್ರಾಂತಿಯ ಅಗತ್ಯವಿತ್ತು. ಪ್ರತಿದಿನ ಜೀವ ತಿನ್ನುವ ಆತಂಕವನ್ನು ಹೊತ್ತು ಹತ್ತಿಯಿಂದ ಹತ್ತಿಯತ್ತ ಚಲಿಸುವಾಗ ಒಬ್ಬ ಮನುಷ್ಯ ಏನಾಗುತ್ತಾನೆಂದು ಅನುಭವಿಸಿದವನಿಗೇ ಗೊತ್ತು. ಹಾಗಾಗಿ ಒಂದು ಶನಿವಾರ 'ನಾನು ಮುಂದಿನ ಸೋಮವಾರ ಇಲ್ಲಿಂದ ಹೊರಡುತ್ತಿದ್ದೇನೆ' ಎಂದು ಹಳ್ಳಿಗರಿಗೆ ಹೇಳಿದೆ. ಅವರೆಲ್ಲಾ ಹೆದರಿ ಹೌಹಾರಿದರು. ಆದರೆ ಇರುವ ಸಂಗತಿಯನ್ನು ವಿವರಿಸಿ ಹೇಳಿ, ಆದಷ್ಟು ಬೇಗ ಹಿಂತಿರುಗುತ್ತೇನೆಂದು ಭರವಸೆ ನೀಡಿದ ಮೇಲೆ ನನಗೆ ಹಿಂತಿರುಗಲು ಅನುಮತಿ ಕೊಟ್ಟರು.


ಮರುದಿನ ದಲ್ಲಾನಿಯಾದ ಮುಖ್ಯಸ್ಥ ನಮ್ಮ ಕ್ಯಾಂಪಿಗೆ ಬಂದು 'ನೀವು ಹೊರಡುವುದಕ್ಕೆ ಮುಂಚೆ ನಮಗಾಗಿ ಒಂದು ಮಾಂಸದ ಶಿಕಾರಿ ಮಾಡಿಕೊಡಿ' ಎಂದು ಕೇಳಿಕೊಂಡರು. ಅದಕ್ಕೆ ನಾನು ಸಂತೋಷದಿಂದ ಸಮ್ಮತಿಸಿದೆ. ಅರ್ಧ ಗಂಟೆಯ ಒಳಗೆ ನಾಲ್ಕು ಮಂದಿ ಹಳ್ಳಿಗರನ್ನೂ, ನನ್ನ ಕಡೆಯ ಒಬ್ಬನನ್ನೂ ಕರೆದುಕೊಂಡು .275 ರೈಫಲ್ಲನ್ನು, ಮತ್ತದರ ಐದು ಗುಂಡುಗಳನ್ನೂ ತೆಗೆದುಕೊಂಡು ನಾಂದೋರ್ ನದಿ ಕಣಿವೆಯತ್ತ ಹೊರಟೆ. ಅದರ ಮೇಲಂಚಿನ ಇಳಿಜಾರಿನಲ್ಲಿ ಸಾರಂಗಗಳೂ, ಕಾಡುಮೇಕೆಗಳೂ ಮೇಯುವುದನ್ನು ನಾನು ಅನೇಕ ಬಾರಿ ನೋಡಿದ್ದೆ.

ನಮ್ಮ ತಂಡದ ಜೊತೆ ಒಬ್ಬ ಒರಟಾದ, ಉದ್ದನೆಯ ಮನುಷ್ಯನಿದ್ದ. ಅವನ ಮುಖ ನಿಜಕ್ಕೂ ಭಯ ಹುಟ್ಟಿಸುವಷ್ಟು ವಿಕಾರವಾಗಿತ್ತು. ಇವನು ನಮ್ಮ ಕ್ಯಾಂಪಿನ ನಿಯತ ಸಂದರ್ಶಕನಾಗಿದ್ದ. ನನ್ನನ್ನು ಉತ್ತಮ ಕೇಳುಗನೆಂದು ತೀರ್ಮಾನ ಮಾಡಿಕೊಂಡುಬಿಟ್ಟಿದ್ದ. ಹಾಗಾಗಿ ಅವನು ನಾಲ್ಕು ವರ್ಷದ ಹಿಂದೆ ಇದೇ ನರಭಕ್ಷಕಿಗೆ ಎದುರುಬಿದ್ದು ಹೋರಾಡಿದ ಕತೆಯನ್ನು ನನಗೆ ಉಲ್ಲಾಸದಿಂದ ಹೇಳುತ್ತಲೇ ಇದ್ದ. ನಾನು ಕೇಳುತ್ತಲೇ ಇದ್ದೆ. ಇದು ನನಗೆ ಹೇಗೆ ಬಾಯಿಪಾಠವಾಗಿಬಿಟ್ಟಿದೆ ಎಂದರೆ ನಿದ್ದೆಗಣ್ಣಿನಲ್ಲೂ ಇಡೀ ಕತೆಯನ್ನು ಚಾಚೂತಪ್ಪದೆ ಒಪ್ಪಿಸಬಲ್ಲೆ. ಆದರೂ ನೀವು ಈ ಕತೆಯನ್ನು ಅವನ ಬಾಯಿಂದ ಕೇಳುವುದರಲ್ಲೇ ಹೆಚ್ಚು ಮಜಾ ಇರುತ್ತದೆ. ಕೇಳಿ....

"ನೀವು ಆ ಪೈನ್‌ಮರ ನೋಡಿದ್ದೀರಾ ಸಾಹೇಬ್ರೇ? ಅದೇ ಆ ಬೆಟ್ಟದ ಬುಡ... ಅದರ ಮುಂದಿನ ಇಳಿಜಾರು.... ... ಹುಲ್ಲುಗಾವಲು.... ಅದರ ತುದಿಯಲ್ಲಿ ಇದೆಯಲ್ಲಾ... ಅದು! ಹೌದು....! ಅದೇ ಪೈನ್‌ಮರ!! ಆ ದೊಡ್ಡ ಬಂಡೆಯ ಪೂರ್ವಕ್ಕಿದೆಯಲ್ಲಾ ಅದು... ಹೂಂ ಅನ್ನಿ... ಆ ಹುಲ್ಲುಗಾವಲಿನ ಅಂಚಿನಲ್ಲೇ ಆ ನರಭಕ್ಷಕಿ ಕಾದು.... ನನ್ನ ಮೇಲೆ ಬಿದ್ದಿದ್ದು. ಆ ಬಯಲು ಎಷ್ಟು ಇಳಿಜಾರಾಗಿದೆ ಅಂದ್ರೆ.... ಗೋಡೆ ಅಂದುಕೊಳ್ಳಿ, ತಿಳಕೊಳ್ಳಿ... ಅದರ ಮೇಲೆ ನಾವು ಬೆಟ್ಟದ ಸೀಮೆ ಜನಬಿಟ್ರೆ ಬೇರಾರೂ ಹೆಜ್ಜೆ ಇಡೋಕ್ಕೂ ಆಗೋಲ್ಲ ಬಿಡಿ...!? ನನ್ನ ಮಗ ಇದ್ದಾನಲ್ಲಾ, ಆಗವನು ಎಂಟು ವರ್ಷದವನು. ಆ ಇಳಿಜಾರಿನಲ್ಲಿ ಅಂದು ನಾನು ಹುಲ್ಲು ಕೊಯ್ಯಲು ಹೋಗಿದ್ದೆ. ನನ್ನ ಅದೃಷ್ಟ ಚೆನ್ನಾಗಿರಲಿಲ್ಲ ಬಿಡಿ.... ಹುಲ್ಲನ್ನು ಕೊಯ್ದು ಅದನ್ನು ಕಟ್ಟಲು ತೆಕ್ಕೆ ಹಿಡಿದುಕೊಂಡು; ಮೇಲಕ್ಕೆ ಅದೇ ಅಲ್ಲಿ.... ಬೇಕಾದಷ್ಟು ಮರಗಳಿವೆಯಲ್ಲಾ... ಅಲ್ಲೊಂದು ಸ್ಲೇಟಿನಂಥ ಜಾಗವಿದೆ ನೋಡಿ... ಅಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೆ.

ನನ್ನ ತೆಕ್ಕೆಯ ತುಂಬಾ ಹುಲ್ಲಿದೆ.... ನಾನು ಆ ಗೋಡೆಯಂತಿದ್ದ ಇಳಿಜಾರನ್ನು ಹತ್ತುತ್ತಿದ್ದೇನೆ... ಆಗಲೇ ನೋಡಿ....! ಹುಲಿ ಊರಗಲ ಬಾಯಿತೆರೆದು ಹಲ್ಲುಗಳಲ್ಲೇ ನನ್ನನ್ನು ಹೂತು ಬಿಡುವಂತೆ ಹಾರಿಬಿದ್ದಿತು. ಹಾರಿದ್ದೇ ಸೀದಾ ನನ್ನ ಬಲಭಾಗದ ತಲೆಗೆ ಬಾಯಿಹಾಕಿತು. ಅದರ ಬಾಯಿಗೆ ನನ್ನ ಬಲಭಾಗದ ಕಣ್ಣು, ಕುತ್ತಿಗೆಯ ಹಿಂಭಾಗ ಮುಂಭಾಗಗಳು ಸಿಕ್ಕಿಕೊಂಡವು. ನನ್ನ ತಲೆ ಬಟ್ಟಲಿನೊಳಗೆ ಹೊಕ್ಕೆ ತೂರಿಕೊಂಡಂತಾಗಿತ್ತು. ಹಾಗೇ ಅದು ನನ್ನ ಮೇಲೆ ಉರುಳಿತು... ನಾನು ಅಂಗಾತ ಬಿದ್ದುಬಿಟ್ಟೆ. ನಾನು ಉರುಳಿಬಿದ್ದಾಗ ನನ್ನ ಕೈಯಲ್ಲಿದ್ದ ಹತಾರ ಎಗರಿಹೋಗಿತ್ತು, ಹುಲಿ ನನ್ನ ಎದೆಯ ಮೇಲೆ ಕುಳಿತಿತ್ತು, ಅದರ ಹೊಟ್ಟೆ ನನ್ನ ಕಾಲುಗಳ ನಡುವೆ ಇತ್ತು, ನಾವಿಬ್ಬರೂ ಕೆಳಕ್ಕೆ ಜಾರುತ್ತಿದ್ದೇವೆ. ಆಗಲೇ ನೋಡಿ ನನ್ನ ಕೈಗೆ ಓಕ್ ಸಸಿಯೊಂದು ಸಿಕ್ಕಿದ್ದು. ಅದನ್ನು ಭದ್ರವಾಗಿ ಹಿಡಿದುಕೊಂಡೆ. ತಕ್ಷಣ ನನಗೊಂದು ಉಪಾಯ ಹೊಳೆಯಿತು. ಹೇಗಿದ್ದರೂ ನನ್ನ ಕಾಲುಗಳು ಬಿಡುವಾಗಿದ್ದವು. ಹುಲಿಯ ಹೊಟ್ಟೆಗೆ ಎರಡೂ ಕಾಲುಗಳಲ್ಲಿ ಜಾಡಿಸಿ ಒದ್ದು ತಪ್ಪಿಸಿಕೊಳ್ಳಬಹುದು ಎನಿಸಿತು. ಅದು ಕಚ್ಚಿ ಹಿಡಿದಿದ್ದ ಭಾಗದಲ್ಲಿ ಯಮಬಾಧೆಯಾಗುತ್ತಿತ್ತು, ಆ ನೋವಿಗೆ ನಾನು ಪ್ರಜ್ಞೆ ತಪ್ಪದಿದ್ದುದ್ದೇ ನನ್ನ ಅದೃಷ್ಟ. ಬೇಕಾದರೆ ನೋಡಿ ನನ್ನ ಮುಖ ಹೇಗಾಗಿದೆ....?! ಆದರೆ ಸಾಹೇಬ್ರೇ... ಆಗ ನಾನಿನ್ನೂ ವಯಸ್ಸಿನವನಿದ್ದೆ. ಈ ಪರ್ವತ ಪ್ರಾಂತ್ಯದಲ್ಲೇ ನನಗೆ ಸರಿಸಮನಾದವರು ಯಾರೂ ಇರಲಿಲ್ಲ, ನಾನು ನಿಧಾನವಾಗಿ ನನ್ನ ಕಾಲುಗಳನ್ನು ಎತ್ತಿ, ಅದರ ಹೊಟ್ಟೆಗೆ ಒತ್ತಿ, ನನ್ನ ಇಷ್ಟೊಂದು ಶಕ್ತಿಯನ್ನು ಅದರ ಎದೆಗೆ ಕೊಟ್ಟು ತಳ್ಳಿದೆ ನೋಡಿ....!! ಹುಲಿ ಆಯತಪ್ಪಿ ಕಣಿವೆಯೊಳಕ್ಕೆ ಉರುಳಿತು ನೋಡಿ.... ನಾನೂ ಅದರೊಂದಿಗೇ ಪಾತಾಳಕ್ಕೆ ಹೋಗಿಬಿಡಬೇಕಿತ್ತು, ಆ ಓಕ್ ಸಸಿಯೂ ಅಷ್ಟು ಬಲಿಷ್ಠವಾಗಿರಲಿಲ್ಲ, ಅದೃಷ್ಟ ಅದು ಕಿತ್ತುಕೊಳ್ಳಲಿಲ್ಲ.

ನನ್ನ ಮಗ ಎಷ್ಟು ಹೆದರಿದ್ದನೆಂದರೆ ಅವನಿಗೆ ಅಲ್ಲಿಂದ ಓಡಿಹೋಗಲೂ ಕಾಲು ಬಂದಿಲ್ಲ, ತಕ್ಷಣ ಎದ್ದು ಓಡಿದ ನಾನು ಅವನ ಬಳಿ ಇದ್ದ ಶಲ್ಯವನ್ನು ರಕ್ತ ಸುರಿಯುತ್ತಿದ್ದ ತಲೆಗೆ ಸುತ್ತಿಕೊಂಡು, ಹಳ್ಳಿಗೆ ಹಿಂತಿರುಗಿದೆ. ಮನೆಗೆ ಬಂದವನೇ ಅಂತಿಮವಾಗಿ ನನ್ನೆಲ್ಲಾ ಗೆಳೆಯರನ್ನೂ ನೋಡಬೇಕು, ಕರೆಸು ಎಂದು ನನ್ನ ಹೆಂಡತಿಗೆ ಹೇಳಿದೆ. ಎಲ್ಲರೂ ಬಂದರು. ಬಂದವರು ನನ್ನ ಸ್ಥಿತಿಯನ್ನು ನೋಡಿ, ಕೂಡಲೇ ಒಂದು ಚಾರ್ಪಾಯ್ ಮಂಚವನ್ನು ಸಿದ್ಧಮಾಡಿಕೊಂಡು, ಅದರ ಮೇಲೆ ನನ್ನನ್ನು ಮಲಗಿಸಿ, ಇಲ್ಲಿಂದ ಐವತ್ತು ಮೈಲಿ ದೂರದ ಆಲ್ಮೋರಾ ಆಸ್ಪತ್ರೆಗೆ ಹೊತ್ತುಕೊಂಡು ಹೋಗೇಬಿಟ್ಟರು. ಆದರೆ ಅಲ್ಲಿ ನನ್ನ ವ್ರಣಗಳು ವಾಸಿಯಾಗಲಿಲ್ಲ, ಯಾತನೆಯಂತೂ ಸಹಿಸಲಸಾಧ್ಯವಾಗಿತ್ತು, ನನ್ನ ಅಂತ್ಯಕಾಲ ಸಮೀಪಿಸಿದೆ ಎಂದು ಎಲ್ಲರೂ ಭಾವಿಸಿದರು. ನನಗಂತೂ ಸಾಯುವುದಿದ್ದರೆ ನನ್ನ ಹಳ್ಳಿಯ ನೆಲದಲ್ಲೇ ಸಾಯಬೇಕು ಎಂಬ ಆಸೆ. ನನ್ನ ಬದುಕಿನ ಒಂದೊಂದು ಕ್ಷಣಕ್ಕೂ ಸಾಕ್ಷಿಯಾಗಿದ್ದ ನನ್ನ ಹಳ್ಳಿಯಲ್ಲಿ ಸಾಯುವುದಕ್ಕಿಂತ ಬೇರೆ ಭಾಗ್ಯ ಯಾವುದಿದೆ ಹೇಳಿ? ನನ್ನನ್ನು ಹಳ್ಳಿಗೆ ಹೊತ್ತು ತಂದರು ನನಗೆ ವಿಪರೀತ ಬಾಯಾರಿಕೆಯಾಗಿತ್ತು, ಹಳ್ಳಿಯ ಹಿರಿಯ ನನ್ನ ಬಾಯಿಗೆ ಅಂತಿಮವಾಗಿ ನೀರು ಹಾಕಿದ, ಅದು ಹರಿದ ಗಂಟಲಿನ ತೂತಿನಿಂದ ಹೊರಗೆ ಚೆಲ್ಲಿಹೋಯಿತು. ನನ್ನ ತಲೆ ಸಿಡಿಯುತ್ತಿತ್ತು, ಇದಾದನಂತರ ನನ್ನ ತಲೆಯಲ್ಲಿ ನೂರಾರು ಗೊಂದಲಗಳು ಹುಟ್ಟಿಕೊಂಡವು. ಅತ್ತ ಸಾಯಲೂ ಇಲ್ಲ-ಇತ್ತ ಬದುಕಲೂ ಆಗುತ್ತಿಲ್ಲ, ಪ್ರತಿಕ್ಷಣ ಯಾತನೆಯ ಚಿತೆಯಲ್ಲಿ ಬೇಯುತ್ತಿದ್ದೆ. ಹಾಗೇ ದಿನಗಳು ಕಳೆದವು. ನಾನು ಸಾವಿಗಾಗಿ ಕಾಯುತ್ತಿದ್ದೆ. ಆದರೆ ದಿನಗಳೆದಂತೆ ನನ್ನ ಗಾಯಗಳು ಮಾಗಿದವು, ಕ್ರಮೇಣ ಒಣಗಿದವು. ಆಮೇಲೆ ನಾನು ಪೂರ್ತಿ ಗುಣಮುಖನಾದೆ.



ಆದರೆ ಈಗ... ಸಾಹೇಬ್ರೇ.... ನಾನು ಬಡಕಲಾಗಿದ್ದೇನೆ. ವಯಸ್ಸಾದಂತೆ ಕಾಣುತ್ತಿದ್ದೇನೆ. ಜಿಗುಪ್ಸೆ ಪಟ್ಟುಕೊಳ್ಳದೆ ಯಾರೂ ನನ್ನ ಮುಖವನ್ನು ನೋಡುವುದು ಸಾಧ್ಯವಿಲ್ಲ, ಆದರೆ ನೋಡಿ ಆ ನನ್ನ ಶತ್ರು ಇನ್ನೂ ನರಮನುಷ್ಯರನ್ನು ಬಲಿತೆಗೆದುಕೊಳ್ಳುತ್ತಾ ಬದುಕುತ್ತಲೇ ಇದೆ. ಸಾಹೇಬರೇ.... ಅದನ್ನು ಬರೀ ಹುಲಿ ಎಂದು ಮಾತ್ರ ಭಾವಿಸಬೇಡಿ. ಅದೊಂದು ದೆವ್ವ.... ಪಿಶಾಚಿ... ನರಮನುಷ್ಯರ ರಕ್ತ ಮಾಂಸಕ್ಕೆ ಹಾತೊರೆಯುವ ಅದು ಕೇವಲ ಹುಲಿಯ ವೇಷದಲ್ಲಿದೆ ಅಷ್ಟೇ. ಆದರೆ ಜನ ಹೇಳುತ್ತಾರೆ ನೀವೊಬ್ಬ ಸಾಧು ಎಂದು. ಸಾಹೇಬರೇ ನನ್ನನ್ನು ನಂಬಿ.... ಈ ದುಷ್ಟಶಕ್ತಿಗಳ ಆಟ ಸಾಧುಗಳ ಶಕ್ತಿಯ ಮುಂದೆ ನಡೆಯುವುದಿಲ್ಲ, ಸಾಧುಗಳ ಶಕ್ತಿ ಅಪಾರವಾದದ್ದು... ಅದನ್ನು ನೀವು ಈಗಾಗಲೇ ಸತ್ಯಮಾಡಿ ತೋರಿಸಿಬಿಟ್ಟಿದ್ದೀರಿ. ಇಲ್ಲ ಎಂದರೆ... ಮೂರು ರಾತ್ರಿ... ಮೂರು ಹಗಲು... ಕಾಡೊಳಗೆ ಆ ಪಿಶಾಚಿಯ ಪಕ್ಕದಲ್ಲೇ ಇದ್ದು ನೀವು ಬದುಕಿ ಬರುವುದು ಸಾಧ್ಯವಿತ್ತೇ ಹೇಳಿ?"

ಇಷ್ಟೊಂದು ವಿಸ್ತಾರವಾದ ಚೌಕಟ್ಟಿನ ಇವನ ಕತೆಯನ್ನು ಕೇಳಿದಾಗ ಇವನ ಸಾಮರ್ಥ್ಯ ಏನೆಂದು ನಮಗೆ ಅರ್ಥವಾಗುತ್ತದೆ. ಇಲ್ಲದಿದ್ದರೆ ಹುಲಿಯನ್ನು ಕಾಲಲ್ಲಿ ಒದ್ದು ಕೆಳಕ್ಕೆ ಕೆಡವುವ ಸಾಮರ್ಥ್ಯ ಎಷ್ಟು ಜನರಿಗೆ ಇರುತ್ತದೆ. ಸಾಮಾನ್ಯ ಮನುಷ್ಯರಿಂದಂತೂ ಇದು ಅಸಾಧ್ಯ. ತಲೆಯನ್ನು ಹುಲಿ ಹರಿಯುತ್ತಿದ್ದಾಗ ಸಹ, ಹುಲಿಯ ಜೊತೆಗೆ ಉರುಳಿಹೋಗದೆ ಉಳಿದ ಅವನ ಸಾಮರ್ಥ್ಯ ನಿಜಕ್ಕೂ ಅಸಾಮಾನ್ಯವಾದದ್ದು. ಆ ಮಟ್ಟದ ವ್ರಣಗಳಾಗಿದ್ದರೂ ಬದುಕುಳಿದದ್ದು ಬದುಕಿನ ಅಚ್ಚರಿಗಳಲ್ಲೊಂದು ಎಂದೇ ಭಾವಿಸಿದ್ದೇನೆ.

ಈ ಬಾರಿಯ ಶಿಕಾರಿಯ ಸಾರಥ್ಯವನ್ನು ಈ ಗಂಟುಮುಖದ ಸಾಹಸಿಯೇ ವಹಿಸಿಕೊಂಡಿದ್ದ. ಇವನ ಹೆಗಲ ಮೇಲೆ ಉದ್ದವಾದ ಕಾವು ಹಾಕಿದ್ದ, ಅದ್ಭುತವಾಗಿ ಸಾಣೆ ಹಿಡಿದ, ಥಳಥಳ ಮಿಂಚುವ ಕೊಡಲಿ ಇತ್ತು. ನಾವು ಅನೇಕ ಕೃಷಿ ಭೂಮಿಗಳನ್ನು ದಾಟಿ ಹೊರಟೆವು. ನರಭಕ್ಷಕಿಯ ದೆಸೆಯಿಂದಾಗಿ ಅವು ಈಗ ಪಾಳು ಬಿದ್ದಿದ್ದವು. ನಾವು ಉದ್ದೇಶಿಸಿದ್ದ ಜಾಗವನ್ನು ತಲುಪಿದಾಗ ಸುಸ್ತಾಗಿ ಹೋಗಿದ್ದೆವು. ಈ ಮಾತು ನನ್ನ ಗಂಟುಮುಖದ ಗೆಳೆಯನಿಗೆ ಅನ್ವಯವಾಗುತ್ತಿರಲಿಲ್ಲ, ಗಾಳಿಯೂ ಅವನ ನಡಿಗೆಯ ಮುಂದೆ ನಾಚುತ್ತಿತ್ತು, ಅವನು ಅಲ್ಲಲ್ಲಿ ಒಳ್ಳೆಯ ಜಾಗ ಸಿಗುವ ಕಡೆ ಸೌಂದರ್ಯ ಸವಿಯುವವನಂತೆ ನಟಿಸುತ್ತಾ ನಿಂತು ನಡೆದ ಕಾರಣ ನಾವು ಅವನೊಂದಿಗೆ ಹೋಗುತ್ತಿದ್ದೆವಷ್ಟೇ.

ಮರಗಳಿಂದಾವೃತವಾಗಿದ್ದ ಕಾಡುದಾರಿಯನ್ನು ಬಿಟ್ಟು ನಾವು ಹೊರಬಂದಾಗ ಒಂದು ಇಳಿಜಾರಾದ ಹುಲ್ಲುಗಾವಲು ಎದುರಾಯಿತು. ಅದರ ಅಂಚಿನಲ್ಲಿ ಬೃಹತ್ತಾದ ಕಡಿಗಲ್ಲೊಂದು ಸಾವಿರಾರು ಅಡಿಗಳ ಎತ್ತರಕ್ಕೆ ಚಾಚಿ ನಿಂತಿತ್ತು, ಇದರ ಸುತ್ತಮುತ್ತ ಕುರುಚಲು ಗಿಡಗಳ ದಟ್ಟಣೆ ಇತ್ತು, ಅಲ್ಲಿಯೇ ನಾನು ಹಿಮಸಾರಂಗ, ಮೇಕೆಗಳು ಮೇಯುವುದನ್ನು ನೋಡಿದ್ದು, ನಾವು ಅದೇ ದಿಕ್ಕಿನಲ್ಲಿ ನೂರು ಗಜ ಮುಂದುವರಿದೆವು. ಅಷ್ಟರಲ್ಲಿ ಕಡಿಗಲ್ಲಿನ ಕೆಳ ಏಣಿನ ಕಡೆಯಿಂದ ಕಾಡು ಮೇಕೆಯೊಂದು ಹೊರಬಂದು ಕಂದಕದಾಚೆಗೆ ಹೋಗಲು ಓಡುತ್ತಿತ್ತು, ನಾನು ಗುರಿಕಟ್ಟಿ ಗುಂಡು ಹಾರಿಸಿದೆ. ಮೇಕೆ ಮುಗ್ಗರಿಸಿ ಬಿದ್ದು, ಕೆಳಕ್ಕೆ ಜಾರಿಹೋಯಿತು. ಈ ಸದ್ದಿಗೆ ಎಚ್ಚರಗೊಂಡ ಸಾರಂಗವೊಂದು ಬಂಡೆಯ ತಳದಿಂದ ಮೇಲೆದ್ದು ಓಡತೊಡಗಿತು. ಆ ಕಡಿದಾದ ಏಣಿನ ಮೇಲೆ ದೃಢವಾದ ಹೆಜ್ಜೆಗಳನ್ನೂರುತ್ತಾ ಸಾಗುತ್ತಿತ್ತು, ಅದು ನನ್ನ ನೇರಕ್ಕೆ ಬರುವವರೆಗೂ ಕಾದಿದ್ದು, ಗುರಿಕಟ್ಟಿ ಕುದುರೆ ಎಳೆದೆ, ಅದು ಒಮ್ಮೆ ಮುಗ್ಗರಿಸಿದಂತೆ ಮಾಡಿ ಮತ್ತೆ ಓಟವನ್ನು ಮುಂದುವರೆಸಿತು. ನನ್ನ ರೈಫಲ್ ಮತ್ತೊಮ್ಮೆ ಕಡಿಗಾರಿತು. ಕೂಡಲೇ ಅದು ಹಿಮ್ಮುಖವಾಗಿ ಪಲ್ಟಿ ಹೊಡೆದು, ಜಾರುತ್ತಾ ಹುಲ್ಲಿನ ಇಳಿಜಾರಿನತ್ತ ಸಾಗಿ, ಅಲ್ಲೂ ನಿಲ್ಲದೆ ಕೆಳಕ್ಕೆ ಜಾರುತ್ತಾ ಅಂತಿಮವಾಗಿ ನಮ್ಮಿಂದ ನೂರುಗಜ ದೂರದಲ್ಲಿದ್ದ ದನಗಳ ಜಾಡಿನಲ್ಲಿ ಸ್ಥಿರವಾಯಿತು.


ಇಂತಹ ಶಿಕಾರಿಯನ್ನು ನಾನು ವರ್ಷದ ನಿರ್ದಿಷ್ಟ ಋತುವಿನಲ್ಲಿ ಮಾತ್ರ ಮಾಡುತ್ತೇನೆ. ಪ್ರತಿ ಬಾರಿ ಇಂಥ ಶಿಕಾರಿ ಮಾಡಿದಾಗಲೂ ನನ್ನ ಶಿಕಾರಿಗಳು ದಾಳಿಗೊಳಗಾಗಿದ್ದನ್ನು ಕಂಡಿದ್ದೇನೆ. ಈ ಬಾರಿಯೂ ಅದು ಇನ್ನು ಕೆಲವೇ ಕ್ಷಣಗಳಲ್ಲಿ ಸಂಭವಿಸುತ್ತದೆ ಎಂದು ಅನಿಸುತ್ತಿತ್ತು, ಹಿಂದಿನ ಸಂದರ್ಭಗಳಲ್ಲಿ ಈ ದಾಳಿಕೋರರ ಕೆಲಸವನ್ನು ಚಿರತೆಗಳು ಮಾಡುತ್ತಿದ್ದವು. ಈ ಬಾರಿ....?

ನಾನು ಹೊಡೆದ ಸಾರಂಗ ಇನ್ನೂ ನೆಲದಲ್ಲಿ ಸ್ಥಿರವಾಗಿಲ್ಲ, ಅಷ್ಟು ಹೊತ್ತಿಗೆ ಹುಲ್ಲುಗಾವಲಿನ ಇಳಿಜಾರಿನ ಕಮರಿಯ ಕಡೆಯಿಂದ ಯಮಗಾತ್ರದ ಕರಡಿಯೊಂದು ಅಲ್ಲಿಂದಲೇ ಹುಟ್ಟಿಬಂದಂತೆ ಬಯಲಿನತ್ತ ನುಗ್ಗಿತು. ನುಗ್ಗಿದ್ದು ಒಂದು ಕ್ಷಣ ನಿಲ್ಲದೆ, ಅತ್ತಿತ್ತ ನೋಡದೆ... ಸೀದಾ ಬಿಟ್ಟ ಬಾಣದಂತೆ ಸಾರಂಗದಲ್ಲಿಗೆ ಬಂದು, ಅದಕ್ಕೆ ಮೂತಿ ಇಟ್ಟು ಸುರ್‌ಕಾ... ಸುರ್‌ಕಾ... ಎಂದು ಮೂಸಲಾರಂಭಿಸಿತು. ಅದು ಕಿತಾಪತಿ ಮಾಡುವುದು ಗ್ಯಾರಂಟಿಯಾಗಿತ್ತು, ನಾನು ಬಂದೂಕ ಎತ್ತಿ ಕುದುರೆ ಎಳೆದೆ. ಒಂದುಕ್ಷಣ ನಿಧಾನಿಸಬೇಕಿತ್ತು ಅನಿಸುತ್ತದೆ. ಗುಂಡು ಅದರ ಎದೆಯ ಬದಲು ಕೆಳಕ್ಕೆ ಹೊಟ್ಟೆಯಲ್ಲಿ ತೂರಿ ನಿಂತಿತು. ಗುಂಡು ಬಡಿಯುತ್ತಿದ್ದಂತೆ ಕರಡಿ ಕೆಂಡಾಮಂಡಲವಾಯಿತು. ಅದಕ್ಕೆ ಹಾಗೆ ನೋವು ಮಾಡಿದ್ದು ಈ ಕೆಟ್ಟ ಸಾರಂಗವೇ ಎಂದು ಭಾವಿಸಿದ ಕರಡಿ ಸತ್ತ ಸಾರಂಗವನ್ನು ಮೂತಿಯಲ್ಲಿ ತಿವಿದು, ಕಚ್ಚಿ ಎಳೆದಾಡತೊಡಗಿತು. ಹಾಗೇ ಎಳೆಯುತ್ತಾ... ಭೀಕರವಾಗಿ ಗುಟುರು ಹಾಕುತ್ತಾ... ಸಾರಂಗವನ್ನು ಅದೇ ರಸ್ತೆಯಲ್ಲಿ ಕೆಳಕ್ಕೆ ಎಳೆದುಕೊಂಡು ಹೋಗತೊಡಗಿತು. ಹಾಗೆ ಅದು ನೂರು ಗಜಕ್ಕೂ ಹೆಚ್ಚುದೂರ ಎಳೆದುಕೊಂಡು ಹೋಯಿತು. ನಾನು ಸುಮ್ಮನಿದ್ದರೆ ನಮ್ಮ ಶಿಕಾರಿ ಕೈತಪ್ಪುವ ಸ್ಥಿತಿ ಅದು. ನಾನು ಬಂದೂಕವನ್ನೆತ್ತಿ ನನ್ನ ಬಳಿ ಇದ್ದ ಐದನೆಯ ಮತ್ತು ಕೊನೆಯ ಗುಂಡನ್ನು ಹಾರಿಸಿಯೇ ಬಿಟ್ಟೆ. ಅದು ಕರಡಿಯ ಸೊಂಟದ ಬಳಿಯ ಮಾಂಸದ ಮೆದೆಯೊಳಗೆ ಅಂತರ್ದಾನವಾಯಿತು. ಅದರೊಂದಿಗೆ ಕರಡಿ ಕೂಡ.

ನಮ್ಮವರು ಶಿಕಾರಿಗಳನ್ನು ಎತ್ತಿಕೊಳ್ಳುವ ಹೊತ್ತಿನಲ್ಲಿ ನಾನು ಕರಡಿಯ ರಕ್ತದ ಜಾಡನ್ನು ಹಿಂಬಾಲಿಸಿದೆ. ಅದಕ್ಕೆ ಗಂಭೀರವಾದ ಹೊಡೆತಗಳೇ ಬಿದ್ದಿದ್ದವು. ಆದರೂ ಅದನ್ನು ಬರಿಗೈಯಲ್ಲಿ ಹಿಂಬಾಲಿಸುವುದು ಅಪಾಯಕಾರಿಯಾಗಿತ್ತು, ಇವು ಮೊದಲೇ ಮಹಾ ಮುಂಗೋಪಿಗಳು. ಅದರಲ್ಲೂ ಗಾಯಗೊಂಡಾಗ....!! ಅದನ್ನು ಊಹಿಸಿದರೇ ಜೀವಕ್ಕೆ ಚಳಿ ಹಿಡಿಯುತ್ತದೆ. ಜನ ಶಿಕಾರಿಗಳನ್ನು ಎತ್ತಿತಂದು ಒಂದೆಡೆ ಹಾಕಿದರು. ಎಲ್ಲರೂ ಒಟ್ಟಿಗೆ ಕೂತು ಮುಂದೇನು ಮಾಡುವುದೆಂದು ಸಮಾಲೋಚಿಸಿದೆವು. ಈಗಿನ್ನೂ ನಡುದಿನದ ಎರಡು ಗಂಟೆ. ನಮ್ಮ ಕ್ಯಾಂಪು ಇಲ್ಲಿಂದ ಮೂರೂವರೆ ಮೈಲಿಗಳ ದೂರದಲ್ಲಿದೆ. ಯಾರಾದರೂ ಹೋಗಿ ಇನ್ನಷ್ಟು ಮದ್ದು ಗುಂಡುಗಳನ್ನು ತಂದು, ಕರಡಿಯನ್ನು ಹಿಂಬಾಲಿಸಿ, ಸಂಜೆಯ ಹೊತ್ತಿಗೆ ಅದನ್ನು ಕೊನೆಗಾಣಿಸಬಹುದೆಂದು ಹೇಳಿದೆ. ಆದರೆ ಅಲ್ಲಿದ್ದವರೆಲ್ಲಾ ಅವೆಲ್ಲಾ ಏನೂ ಬೇಕಾಗಿಲ್ಲ, ಅದನ್ನು ಕೊಡಲಿ-ಕಲ್ಲುಗಳಿಂದಲೇ ನಿಭಾಯಿಸಬಹುದು. ಈಗಲೇ ಹಿಂಬಾಲಿಸೋಣ ಎಂದು ಸರ್ವಾನುಮತದಿಂದ ತೀರ್ಮಾನಿಸಿದರು.

ಕರಡಿ ಹೋದ ಭೂಭಾಗ ಬೆಟ್ಟದ ಇಳಿಜಾರಾಗಿದ್ದರೂ ನೆಲದಲ್ಲಿ ಹೆಚ್ಚು ಗಿಡಗಂಟೆಗಳಿಲ್ಲದ ಕಾರಣ ಅದಕ್ಕೂ ಶಿಕಾರಿಯ ಅವಕಾಶ ಕೊಟ್ಟು, ಹೆಚ್ಚು ದುರಂತಗಳಿಲ್ಲದೆ ನಾವು ಶಿಕಾರಿಯನ್ನು ಮುಗಿಸುವ ಸಾಧ್ಯತೆ ಇತ್ತು. ಎಲ್ಲರೂ ಏಕತ್ರವಾಗಿ ಮುಂದುವರಿದೆವು. ನಾನು ಮುಂದಿದ್ದೆ. ನನ್ನ ಹಿಂದೆ ಉಳಿದವರು. ಕೊನೆಯ ಇಬ್ಬರು ಶಿಕಾರಿಗಳನ್ನು ಹೊತ್ತು ಬರುತ್ತಿದ್ದರು. ನಾನು ಕೊನೆಯ ಬಾರಿ ಕರಡಿ ನನ್ನ ಗುಂಡೇಟು ತಿಂದ ಜಾಗವನ್ನು ನೋಡಿದ್ದಾಗ ಅಲ್ಲಿಂದ ಧಾರಾಕಾರವಾಗಿ ರಕ್ತ ಸೋರಿತ್ತು, ಅದನ್ನೇ ಹಿಂಬಾಲಿಸುತ್ತಾ ಹೋದೆವು. ಇನ್ನೂರು ಗಜ ದೂರದಲ್ಲಿ ಕರಡಿ ಪಕ್ಕದ ಕಮರಿಯನ್ನಿಳಿದುಹೋಗಿತ್ತು, ಇಲ್ಲಿ ನಾವು ತಂತ್ರವನ್ನು ಬದಲಿಸಬೇಕಿತ್ತು. ನಾವು ಎರಡು ತಂಡಗಳಲ್ಲಿ ಬೇರ್ಪಟ್ಟು, ಇಬ್ಬರು ಕರಡಿ ಇಳಿದುಹೋದ ಕಂದಕವನ್ನು ದೂರದಿಂದ ಬಳಸಿ ಕೆಳಭಾಗಕ್ಕೆ ಬರುವುದು. ನಾನು ಮತ್ತು ಕೊಡಲಿಯ ಯಜಮಾನ ಕರಡಿಯನ್ನು ಸಮೀಪದಿಂದ ಹಿಂಬಾಲಿಸುವುದು, ನಮ್ಮ ಹಿಂದೆ ಶಿಕಾರಿಗಳನ್ನು ಹೊತ್ತವರು ಬರುವುದು ಎಂದಾಯಿತು. ನಮ್ಮ ತಂಡ ಕಡಿದನ್ನು ಇಳಿಯತೊಡಗಿತು. ಸ್ವಲ್ಪ ದೂರ ಬರುವಷ್ಟರಲ್ಲಿ ನಮಗೆ ಕಮರಿಯ ತಳಕಂಡಿತು. ನಮ್ಮಿಂದ ನೂರೈವತ್ತು ಗಜಗಳಷ್ಟು ದೂರವಿದ್ದ ಈ ತಳಭಾಗದಲ್ಲಿ ದಟ್ಟವಾದ ಪೊದೆಗಳು, ಬದಿರಿನ ಹಿಂಡಲುಗಳಿದ್ದವು. ನಾನು ಆ ಪೊದರಿನೊಳಕ್ಕೆ ಒಂದು ಕಲ್ಲೆಸೆದೆ. ಎಸೆದಿದ್ದೇ ತಡ.... ಕರಡಿ ಮೃತ್ಯು ಪಿಶಾಚಿಯಂತೆ ಹೂಂಕರಿಸುತ್ತಾ ನಮ್ಮತ್ತ ನುಗ್ಗೇಬಿಟ್ಟಿತು. ಈ ತುರ್ತು ಪ್ರತಿಕ್ರಿಯೆಗೆ ಸಿದ್ಧವಿಲ್ಲದ ನಾವೆಲ್ಲಾ ಎದ್ದುಬಿದ್ದು ದಿಕ್ಕಾಪಾಲಾಗಿ ಓಡಿದೆವು.

(ಮುಂದುವರೆಯುತ್ತದೆ)




ಆರೆಸ್ಸೆಸ್‌ಗೂ ಜಮಾಅತೆಗೂ ವ್ಯತ್ಯಾಸವೇನು?

ಸಾ.ರಾ. ಅಬೂಬಕ್ಕರ್

1993ರ ಜುಲೈ 29ರಂದು ಕೇರಳದ ಮುಸ್ಲಿಂ ಸಮುದಾಯದಲ್ಲಿ ನಡೆದ ಒಂದು ದುರ್ಘಟನೆ ಕೇರಳದ ಪ್ರಗತಿಪರ ಮುಸ್ಲಿಮರಲ್ಲಿ ಒಂದು ವಿಧದ ನಡುಕವನ್ನುಂಟು ಮಾಡಿತೆಂದೇ ಹೇಳಬಹುದು. ಅದು ಚೇಕನೂರ್ ಮೌಲವಿ ಎಂಬ ಓರ್ವ ಧಾರ್ಮಿಕ ಪಂಡಿತನ ಅಪಹರಣ. ಮುಸ್ಲಿಮರಲ್ಲಿರುವ ಮೂಢನಂಬಿಕೆ, ಕೆಲವು ಧಾರ್ಮಿಕ ಅಂಧ ವಿಶ್ವಾಸಗಳು ಹಾಗೂ ಧರ್ಮಾನುಯಾಯಿಗಳಲ್ಲಿ ಧರ್ಮ ಮತ್ತು ಕುರಾನಿನ ಕುರಿತ ಹಲವಾರು ಅಪಾರ್ಥ ಕಲ್ಪನೆಗಳನ್ನು ಹೋಗಲಾಡಿಸಲು ಇವರು ಹಲವಾರು ಕೃತಿಗಳನ್ನು ರಚಿಸಿದ್ದರು. ಇವರ ಈ ಕೃತಿಗಳು ಹಾಗೂ ಭಾಷಣಗಳಿಂದಾಗಿ ಮುಸ್ಲಿಂ ಮೂಲಭೂತವಾದಿಗಳಲ್ಲಿ ಹಾಗೂ ಪುರೋಹಿತರಲ್ಲಿ ತಮ್ಮ ಅಸ್ತಿತ್ವಕ್ಕೆ ಸಂಚಕಾರ ಉಂಟಾಗಬಹುದೆಂಬ ಭೀತಿ ಆವರಿಸಿದಾಗ ಅಂತಹವರಿಂದಾದ ದುಷ್ಕೃತ್ಯವೇ ಮೌಲವಿ ಚೇಕನೂರ್ ಎಂಬುವರ ಅಪಹರಣ ಮತ್ತು ಕೊಲೆಯಾಗಿದೆ.

ಪಿ.ಕೆ. ಮುಹಮ್ಮದ್ ಎಂಬುದು ಇವರ ಹೆಸರಾದರೂ ಚೇಕನೂರ್ ಮೌಲವಿ ಎಂದೇ ಪರಿಚಿತರಾಗಿದ್ದರು. ಮದ್ರಸಾಗಳಲ್ಲಿ ಶಿಕ್ಷಣವನ್ನಾರಂಭಿಸಿ, ವೆಲ್ಲೂರಿನ ಧಾರ್ಮಿಕ ಕೇಂದ್ರದಲ್ಲೂ, ಆ ಬಳಿಕ ಅರೇಬಿಯಾ ದೇಶದಲ್ಲೂ ಧಾರ್ಮಿಕ ಶಿಕ್ಷಣವನ್ನು ಮುಂದುವರಿಸಿ ಅರಬೀ ಭಾಷೆಯನ್ನು ಕರಗತ ಮಾಡಿಕೊಂಡು ಇಸ್ಲಾಂ ಧರ್ಮದ ಕುರಿತು ಪ್ರಗಲ್ಭ ಪಂಡಿತರೆನ್ನಿಸಿಕೊಂಡು ಇಂಡಿಯಾಕ್ಕೆ ಹಿಂತಿರುಗಿದರು. ಬಳಿಕ ಮುಸ್ಲಿಂ ಸಮಾಜದಲ್ಲಿ ಹರಡಿದ್ದ ಅಪಾರ್ಥ ಕಲ್ಪನೆಗಳ ಕುರಿತು 1969ರಿಂದಲೂ ಭಾಷಣ ಮಾಡಲಾರಂಭಿಸಿದರು. ಪ್ರಾರಂಭದಲ್ಲಿ ಜನರಿಗೆ ಇದು ಆಘಾತವೇ ಆಗಿತ್ತು. ಇಸ್ಲಾಂ ಬೋಧನೆಗಳು ಹೀಗಿವೆಯೇ ಎಂದು ಜನರು ಬೆಚ್ಚಿಬಿದ್ದರು. ಬಹುಪತ್ನಿತ್ವ, ಏಕಪಕ್ಷೀಯವಾದ ಸುಲಭದ ವಿವಾಹ ವಿಚ್ಛೇದನವೆಲ್ಲವನ್ನೂ ಇವರು ವಿರೋಧಿಸುತ್ತಿದ್ದರು. "ಹೇಳುವವರು ಹೇಳಲಿ. ಹೇಳುವವರ ಬಾಯಿ ಮುಚ್ಚಿಸಬಾರದು" ಎಂಬ ಧೋರಣೆ ಆಗ ಜನರಲ್ಲಿತ್ತು. 1973ರಲ್ಲಿ ಚೇಕನೂರರು ತಮ್ಮ ಬೋಧನೆಗೆ ವಿರುದ್ಧವಾಗಿ ಎಂಬಂತೆ ಎರಡನೇ ಮದುವೆ ಮಾಡಿಕೊಂಡರು. ಮೊದಲ ಪತ್ನಿಯ ಇಬ್ಬರು ಗಂಡುಮಕ್ಕಳು ಮೃತರಾದುದರಿಂದ ಹೀಗೆ ಮಾಡಿದರೇ ಎಂದು ತಿಳಿಯದು. ಆದರೆ ಈ ಕಾರಣದಿಂದ ಜನರಿಗೆ ಅವರ ಮೇಲಿದ್ದ ವಿಶ್ವಾಸ ಕ್ಷೀಣಿಸಿತು. ಆದರೆ ಅವರು ಧೃತಿಗೆಡದೆ ತಮ್ಮ ಬರಹ ಮತ್ತು ಭಾಷಣದ ಮೂಲಕ ಧಾರ್ಮಿಕ ಕ್ರಾಂತಿಯನ್ನು ಮುಂದುವರಿಸಿದರು.

1985ರ ಶ್ರೇಷ್ಠ ನ್ಯಾಯಾಲಯದ ಶಾಬಾನು ಮೊಕದ್ದಮೆಯ ತೀರ್ಪಿನಲ್ಲಿ ಅವರು ಮತ್ತೊಮ್ಮೆ ರಂಗಪ್ರವೇಶ ಮಾಡಿದರು. ವಿಚ್ಛೇದಿತ ಮುಸ್ಲಿಂ ಪತ್ನಿಗೆ ಜೀವನಾಂಶ ನೀಡುವುದು ಧರ್ಮ ವಿರೋಧವಲ್ಲ ಎಂದು ನ್ಯಾಯಾಲಯದ ಈ ತೀರ್ಪನ್ನು ಎತ್ತಿ ಹಿಡಿದ ಒಬ್ಬನೇ ಒಬ್ಬ ಧರ್ಮಪಂಡಿತ ಚೇಕನೂರ್ ಮೌಲವಿಯಾಗಿದ್ದರು. ಸಿ.ಎಸ್. ಅಹಮದ್ ಮೌಲವಿ ಎಂಬ ಇನ್ನೋರ್ವ ಧರ್ಮಗುರುಗಳೂ ನ್ಯಾಯಾಲಯದ ತೀರ್ಪನ್ನು ಸಮರ್ಥಿಸಿದ್ದರು ಎಂಬುದು ನನ್ನ ನೆನಪು.



ಇಸ್ಲಾಂ ಧರ್ಮದ ಆಚಾರಾನುಷ್ಠಾನಗಳಲ್ಲಿ ಹಲವಾರು ನಿಯಮಗಳು ಅಂಧ ವಿಶ್ವಾಸವಾಗಿರುವುದು ಹಾಗೂ ಇನ್ನೂ ಹಲವು ನಿಯಮಗಳು ಧರ್ಮಾನುಯಾಯಿಗಳ ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸುವಂತಹವುಗಳಾಗಿವೆ ಎಂದು ಚೇಕನೂರರು ಬಲವಾಗಿ ವಾದಿಸುತ್ತಿದ್ದರು. ಪುರುಷರಿಗಿರುವ ಹಕ್ಕುಗಳು ಮಹಿಳೆಯರಿಗೂ ಇರಬೇಕೆಂದೂ, 'ಶರಿಯತ್' ಎಂಬ ಹೆಸರಿನಲ್ಲಿರುವ ಇಂಡಿಯದ ವ್ಯಕ್ತಿ ನಿಯಮವನ್ನು ಕಾಲಕ್ಕನುಸಾರವಾಗಿ ಪರಿಷ್ಕರಿಸಬೇಕೆಂದೂ, ಸಮಾನ ನಾಗರಿಕ ಸಂಹಿತೆ ಜಾರಿಗೆ ತರುವುದು ಧರ್ಮ ವಿರೋಧವಲ್ಲವೆಂದೂ ಇವರು ಅಭಿಪ್ರಾಯ ವ್ಯಕ್ತಪಡಿಸಿದರು. ಹದೀಸ್ (ಪ್ರವಾದಿಗಳೊಡನೆ ನಡೆದಿದೆಯೆಂದು ಹೇಳಲಾದ ಪ್ರಶ್ನೋತ್ತರಗಳು) ಸುಳ್ಳಿನ ಕಂತೆಗಳೆಂದೂ, 'ಶರಿಯತ್' ಎಂಬ ಮುಸ್ಲಿಂ ಸಾಮಾಜಿಕ ನಿಯಮಗಳು ಕುರಾನ್ ವಾಕ್ಯಗಳಿಗನುಸಾರವಾಗಿ ಮಾತ್ರ ರೂಪಿಸಲ್ಪಡಬೇಕೆಂದೂ ಇವರು ವಾದಿಸುತ್ತಿದ್ದರು. ಮುಸ್ಲಿಂ ಪೌರೋಹಿತ್ಯ ಕುರಾನ್ ಬೋಧನೆಗೆ ವಿರುದ್ಧವಾಗಿ ಸಾಮೂಹಿಕ ಬದುಕು ಮತ್ತು ಮತಾಚಾರಗಳನ್ನು ನೆಲಗೊಳಿಸಿತು ಎಂಬುದು ಇವರ ಆಕ್ಷೇಪವಾಗಿತ್ತು. ನಮಾಜ್ ಮೂರು ಹೊತ್ತು ಮಾತ್ರ ಎಂಬುದೂ ಇವರ ವಾದವಾಗಿತ್ತು. ಇವರ ಇಂತಹ ವಾದಗಳು ಕೇರಳದ ಮುಸ್ಲಿಂ ಸಮಾಜದಲ್ಲಿ ಅಲೆಗಳನ್ನೆಬ್ಬಿಸಿದ್ದವು.

ಇವರು 18 ಕೃತಿಗಳನ್ನು ರಚಿಸಿದ್ದರು. ನಿರೀಕ್ಷಣಂ, ಅಲ್ ಬುರ್‌ಹಾನ್ ಎಂಬ ಮಾಸಪತ್ರಿಕೆಗಳನ್ನೂ ನಡೆಸುತ್ತಿದ್ದರು. ಸುಮಾರು 25 ವರ್ಷಗಳ ವರೆಗೆ ಕುರಾನಿನ ನೈಜ ಬೋಧನೆಗಳನ್ನು ಜನರಿಗೆ ತಿಳಿಯಪಡಿಸುತ್ತಾ ಪ್ರತಿಗಾಮಿ ಧೋರಣೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು.

ಯಾವುದೇ ಸಮಾಜವನ್ನು ಮತಾಂಧತೆಯಿಂದ ಬಿಡಿಸುವುದು ಸುಲಭದ ಕೆಲಸವಲ್ಲ. ಮೂಲಭೂತವಾದಿಗಳ ಮತ್ತು ಪುರೋಹಿತರ ಕೋಪ ಮತ್ತು ಅಸಹನೆಗೆ ಚೇಕನೂರರೂ ತುತ್ತಾಗುವುದು ಸಹಜ ತಾನೇ? ಹಲವಾರು ಹಿರಿಯ, ಹೆಸರುವಾಸಿ ಧರ್ಮಪಂಡಿತರು ಇವರೊಡನೆ ಬಹಿರಂಗ ಚರ್ಚೆಗೆ ಸಿದ್ಧರಾದರೂ ಆ ಚರ್ಚೆಯಲ್ಲಿ ಇವರನ್ನು ಸೋಲಿಸಲು ಆ ಪ್ರಖ್ಯಾತ ಪಂಡಿತರುಗಳಿಗೆ ಸಾಧ್ಯವಾಗಲಿಲ್ಲ. ದಪ್ಪವಾದ ಧಾರ್ಮಿಕ ಗ್ರಂಥಗಳನ್ನು ಮುಂದಿಟ್ಟುಕೊಂಡು ಈ ಜನರು ಚರ್ಚೆಯನ್ನಾರಂಭಿಸಿದರೂ ಚೇಕನೂರರು ದೂರ ಕುಳಿತುಕೊಂಡೇ ಹೇಳುತ್ತಿದ್ದರು:

"ನಿಮ್ಮ ಮುಂದಿರುವ ಆ ನಾಲ್ಕನೇ ಪುಸ್ತಕ ತೆರೆಯಿರಿ. ಅದರ 317 ನೇ ಪುಟದ ಎರಡನೇ ಪ್ಯಾರಾ ಓದಿರಿ. ನಿಮ್ಮ ಪ್ರಶ್ನೆಗೆ ಉತ್ತರ ಅಲ್ಲಿದೆ!"

"ಈತನ ಕೊನೆಗಾಲದ ಜ್ಞಾಪಕ ಶಕ್ತಿ!" ಎಂದು ಈ ಜನರು ಅವರ ಜ್ಞಾಪಕ ಶಕ್ತಿಯನ್ನೇ ಗೊಣಗುತ್ತಾ ಜರೆಯುತ್ತಿದ್ದರು. ಎಂದೂ ಯಾವ ಧಾರ್ಮಿಕ ವಿಷಯಗಳ ಕುರಿತೂ ಯಾವ ಮತ ಪಂಡಿತನಿಗೂ ಚರ್ಚೆಯಲ್ಲಿ ಅವರನ್ನು ಸೋಲಿಸಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟು ಖಚಿತವಾಗಿ, ದೃಢವಾಗಿ ಅವರು ವಾದ ಮಂಡಿಸುತ್ತಿದ್ದರು. ಇಂತಹ ಓರ್ವ ಮತ ಪಂಡಿತನು ತಮ್ಮ ನಡುವಿನಲ್ಲಿದ್ದರೆ ತಾವೆಲ್ಲರೂ ಗಂಟುಮೂಟೆ ಕಟ್ಟಿಕೊಂಡು ಹೊರಡಬೇಕಾಗಬಹುದೆಂಬ ಭಯವೇ ಚೇಕನೂರರನ್ನು ಕೊನೆಗಾಣಿಸಲು ಕಾರಣವಾಗಿರಬಹುದು.

ಪ್ರಾರಂಭದಲ್ಲಿ ಮುಜಾಹಿದ್ ಎಂಬ ಮುಸ್ಲಿಂ ಗುಂಪು ಇವರಿಗೆ ಸಹಕರಿಸುತ್ತಿತ್ತು. ಕಮ್ಯುನಿಸ್ಟರು ಕೂಡಾ ಭಾಷಣ ನೀಡಲು ಇವರಿಗೆ ಅನುವು ಮಾಡಿಕೊಡುತ್ತಿದ್ದರು. ದರ್ಗಾಗಳಲ್ಲಿ ಪ್ರಾರ್ಥಿಸುವುದು, ಮಹಿಳೆಯರಿಗೆ ಶಿಕ್ಷಣ ನೀಡದಿರುವುದು, ಬಹುಪತ್ನಿತ್ವ, ಸುಲಭದ ತಲಾಖ್ ಪದ್ಧತಿ ಮುಂತಾದವುಗಳನ್ನು ಇವರು ವಿರೋಧಿಸುತ್ತಿದ್ದರಲ್ಲದೆ ಮಹಿಳೆಯರು ಮಸೀದಿಗೆ ಹೋಗಲು ಪ್ರೋತ್ಸಾಹಿಸುತ್ತಿದ್ದರು. ಇವೆಲ್ಲವೂ ಮುಸ್ಲಿಮರ 'ಸುನ್ನಿ' ಎಂಬ ಪಂಗಡಕ್ಕೆ ಒಪ್ಪಿಗೆಯ ವಿಷಯವಲ್ಲ. ಚೇಕನೂರರಿಗೆ ಕಮ್ಯುನಿಸ್ಟ್ ಎಂದೊ, ಮುಜಾಹಿದ್ ಎಂದೊ ಜನರು ಹೆಸರಿಟ್ಟರೂ ಇವರು ಅದ್ಯಾವುದೂ ಆಗಿರಲಿಲ್ಲ. ಇಸ್ಲಾಮಿಗೆ ವೇದಗ್ರಂಥ ಕುರಾನ್ ಮಾತ್ರ ಎಂಬುದು ಅವರ ನಿಲುವಾಗಿತ್ತು; ಹಾಗೂ ಅದನ್ನು ಅವರು ಚರ್ಚೆಯಲ್ಲಿ ವಾದ ಮಾಡಿ ಸಾಬೀತುಪಡಿಸುತ್ತಿದ್ದರು. ಇವರ ಈ ಎಲ್ಲಾ ನಿಲುವುಗಳು ಮತ್ತು ವಾದಗಳಿಂದಾಗಿ ಇವರನ್ನೇ ಇಲ್ಲವಾಗಿಸಿದರೆ ಮಾತ್ರ ಇವರ ವಾದವನ್ನು ಕೊನೆಗೊಳಿಸಲು ಸಾಧ್ಯ ಎಂದು ಮನಗಂಡವರು 1993ರ ಜುಲೈ ತಿಂಗಳ 29ರ ರಾತ್ರಿ ಅವರನ್ನು ಭಾಷಣ ಮಾಡಲು ನಂಬರ್ ಪ್ಲೇಟ್ ಇಲ್ಲದ ಜೀಪಿನಲ್ಲಿ ಪಕ್ಕದ ಊರಿಗೆ ಕರೆದೊಯ್ದರು. ಆ ಬಳಿಕ ಇವರನ್ನು ಯಾರೂ ನೋಡಲಿಲ್ಲ.

ಈ ಕೊಲೆ ಬಹುಶಃ ಯಾರ ಗಮನಕ್ಕೂ ಬಾರದೆ ಮುಚ್ಚಿ ಹೋಗಬಹುದೆಂದು ಕೊಲೆಗಾರರು ಅಂದುಕೊಂಡಿರಬಹುದು. ಆದರೆ ಅದಾಗಲೇ ಅವರ ಪ್ರಗತಿಪರ ಚಿಂತನೆಗಳನ್ನು ಮೈಗೂಡಿಸಿಕೊಂಡ ಒಂದು ಮುಸ್ಲಿಂ ಸಂಘಟನೆ ಮೊಳಕೆಯೊಡೆದು ಚಿಗುರಲಾರಂಭಿಸಿತ್ತು. ಈ ಸಂಘಟನೆಯ ಕೆಲವು ಸದಸ್ಯರು ಚೇಕನೂರರ ಕಣ್ಮರೆಯ ಹಿಂದಿರುವ ಕೊಲೆಗಾರರನ್ನು ನ್ಯಾಯಾಲಯದ ಮುಂದೆ ತರಲು ಹಗಲಿರುಳೂ ಶ್ರಮಿಸತೊಡಗಿದರು. ಈ ಶ್ರಮದ ಹಿಂದಿದ್ದ ಪ್ರಧಾನ ವ್ಯಕ್ತಿ ಪ್ರೊ. ಎಂ.ಎನ್. ಕಾರಶ್ಶೇರಿ ಎಂಬುವರು. ಮೊಹಿಯುದ್ದೀನ್ ನೆಡುಕ್ಕಂಡಿಯಿಲ್ ಎಂಬುದು ಇವರ ಪೂರ್ತಿ ಹೆಸರು. ಎಂ.ಎ., ಎಂ.ಫಿಲ್ ಹಾಗೂ ಪಿಎಚ್‌ಡಿ ಪದವಿ ಪಡೆದ ಇವರು 1986ರಿಂದ ಕೋಯಿಕ್ಕೋಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಜಾತೀಯತೆ, ಮೂಲಭೂತವಾದ, ಮಾನವ ಹಕ್ಕುಗಳ ಉಲ್ಲಂಘನೆ ಮುಂತಾದವುಗಳ ವಿರುದ್ಧ ಇವರು ಲೇಖನಗಳು ಹಾಗೂ ಭಾಷಣಗಳ ಮೂಲಕ ಹೋರಾಡುತ್ತಲೇ ಜನರನ್ನು ಚಿಂತನೆಗೆ ಹಚ್ಚುತ್ತಿದ್ದಾರೆ. ಸುಮಾರು 20 ಕ್ಕಿಂತ ಹೆಚ್ಚು ಕೃತಿಗಳನ್ನೂ ಇವರು ರಚಿಸಿದ್ದಾರೆ. ಚೇಕನೂರರ ಕಣ್ಮರೆ ಹಾಗೂ ಈ ಕುರಿತು ಸರ್ಕಾರದ ನಿರ್ಲಕ್ಷ್ಯ ಮುಂತಾದವುಗಳ ಕುರಿತು ಇವರು ಪತ್ರಿಕೆಗಳಲ್ಲಿ ಬರೆದ ಲೇಖನಗಳ ಸಂಗ್ರಹ 'ಚೇಕನೂರರ ರಕ್ತ' ಎಂಬ ಹೆಸರಿನಲ್ಲಿ ಪ್ರಕಟವಾಗಿ ಮೂರು ತಿಂಗಳಲ್ಲಿ ಇದರ ಒಂದು ಸಾವಿರ ಪ್ರತಿಗಳು ಮಾರಾಟವಾಗಿವೆ ಮತ್ತು ಅದೇ ವರ್ಷ (2001) ಮರುಮುದ್ರಣಗೊಂಡಿದೆ.


ಈ ಕೃತಿಯ ಒಂದೆಡೆಯಲ್ಲಿ ಕಾರಶ್ಶೇರಿಯವರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ.

1. ಇಸ್ಲಾಂ ಧರ್ಮದ ಕುರಿತು ಇಷ್ಟು ಆಳವಾಗಿ ಅಧ್ಯಯನ ಮಾಡಿದ ಮತ ಪಂಡಿತರು ಇನ್ನೊಬ್ಬರಿರಲಾರರು. ಆದರೆ ಅವರ ಹೆಸರು ಕೇರಳದಿಂದ ಹೊರಗೆ ಯಾಕೆ ಪ್ರಚಾರಗೊಳ್ಳಲಿಲ್ಲ?

2. ಸಲ್ಮಾನ್ ರಶ್ದಿ ಮತ್ತು ತಸ್ಲೀಮಾ ನಸ್ರೀನರಿಗೆ ಸಮಾಜದ ಕೆಲವು ಧಾರ್ಮಿಕ ಗುರುಗಳು ಗಲ್ಲು ಶಿಕ್ಷೆ ನೀಡಿದ್ದಾರೆ. ಅವರಿಬ್ಬರೂ ಇಂದಿಗೂ ಬದುಕಿದ್ದಾರೆ. ಅವರಿಬ್ಬರಿಗೂ ಜಗತ್ತಿನಾದ್ಯಂತ ಸಾಕಷ್ಟು ಪ್ರಚಾರ ದೊರೆತಿದೆ. ಬುದ್ಧಿಜೀವಿಗಳೆನ್ನಿಸಿಕೊಂಡವರೂ, ಪ್ರಗತಿಪರರೂ ಆ ಫತ್ವಾವನ್ನು ವಿರೋಧಿಸಿ ಸಾಕಷ್ಟು ಲೇಖನಗಳನ್ನೂ ಬರೆದಿದ್ದಾರೆ. ಆದರೆ ಚೇಕನೂರರಿಗೆ ಅವರ ಪಾಂಡಿತ್ಯವೇ ಮುಳುವಾಯಿತು. ಅವರು ಬದುಕಿದ್ದಾಗಲಿ, ಅವರ ಪ್ರಗತಿಪರ ಚಿಂತನೆಗಳಾಗಲಿ, ಅವರ ಅಪಹರಣ ಮತ್ತು ಕೊಲೆಯಾಗಲಿ ಕೇರಳದ ಕೆಲವು ಪತ್ರಿಕೆಗಳನ್ನು ಬಿಟ್ಟು ಇನ್ನೆಲ್ಲೂ ಸುದ್ದಿಯಾಗಲೇ ಇಲ್ಲ. 'ಹಿಂದೂ' ಪತ್ರಿಕೆ ಮಾತ್ರ ಅವರ ಅಪಹರಣದ ಸುದ್ದಿ ಪ್ರಕಟಿಸಿತ್ತು. ಹೀಗಾಗಲು ಕಾರಣವೇನು? ಅವರ ಅಪಹರಣದ ಕುರಿತು ಸಮನಾದ ತನಿಖೆ ನಡೆಸಲು ಆ ಬಳಿಕ ಬಂದ ಎಲ್ಲ ಸರ್ಕಾರಗಳೂ ವಿಫಲವಾಗಿವೆ. ಕೇರಳದ ಓಟ್‌ಬ್ಯಾಂಕ್ ರಾಜಕಾರಣವೇ ಈ ನಿರ್ಲಕ್ಷ್ಯಕ್ಕೆ ಕಾರಣವೆಂಬುದು ಕಾರಶ್ಶೇರಿಯವರ ಅಭಿಪ್ರಾಯ.

ಈಗ ಬದುಕಿದ್ದ ಚೇಕನೂರ್ ಮೌಲವಿಗಿಂತಲೂ ಮೃತರಾದ ಚೇಕನೂರರು ಬಹಳ ಪ್ರಭಾವಶಾಲಿಗಳಾಗಿದ್ದಾರೆ. ಇಂದು ಅವರ ಪುಸ್ತಕಗಳು ಮಾರಾಟವಾಗುತ್ತಿವೆ; ಅವರ ಹಿಂಬಾಲಕರ ಗುಂಪುಗಳೂ ಬೆಳೆಯುತ್ತಿವೆ. ಒಂದು ಪ್ರತಿಭಾವಂತ ಮಹಾಚೇತನದ ಚಿಂತನೆಗಳನ್ನು ಅಷ್ಟು ಸುಲಭದಲ್ಲಿ ಅಳಿಸಿ ಹಾಕಲು ಸಾಧ್ಯವಿಲ್ಲ ಎಂಬುದಕ್ಕೆ ಚೇಕನೂರರು ಉದಾಹರಣೆಯಷ್ಟೇ.

ಮುಸ್ಲಿಂ ವ್ಯಕ್ತಿ ನಿಯಮದ ಬದಲಾವಣೆಗಾಗಿ ಚೇಕನೂರರು ಪ್ರಯತ್ನಿಸಿದ ಒಂದು ಘಟನೆ ಹೀಗಿದೆ. 1970ರಲ್ಲಿ ಸಾಹಿತಿ ಎನ್.ಪಿ. ಮುಹಮ್ಮದ್, ಇ.ಕೆ.ಆರ್.ಇ.ಸಿ. ಪ್ರಿನ್ಸಿಪಾಲ್ ಬಹಾವುದ್ದೀನ್, ಅಧ್ಯಾಪಕ ಮೂಸಾ ಎ. ಬೇಕರ್ ಮುಂತಾದವರು 'ಮೋಡರ್ನ್ ಏಜ್ ಸೊಸೈಟಿ' ಎಂಬ ಸಂಘಟನೆಯನ್ನು ಸ್ಥಾಪಿಸಿದಾಗ ಚೇಕನೂರರು ಅದರ ಮುಂಚೂಣಿಯಲ್ಲಿದ್ದರು. ಇವರ 'ನಿರೀಕ್ಷಣಂ' ಎಂಬ ಮಾಸಪತ್ರಿಕೆ ಈ ಸಂಸ್ಥೆಯ ಮುಖವಾಣಿಯಾಗಿತ್ತು. ಮುಸ್ಲಿಂ ಸಮಾಜದಲ್ಲಿ ಹರಡಿರುವ ಬಾಲ್ಯವಿವಾಹ, ಬಹುಪತ್ನಿತ್ವ, ವರದಕ್ಷಿಣೆ ಪದ್ಧತಿ, ಅನ್ಯಾಯವಾದ ಮೂರು ತಲಾಖ್‌ನ ವಿವಾಹ ವಿಚ್ಛೇದನ, ಮಹಿಳೆಯರ ಆಸ್ತಿಹಕ್ಕು ಮುಂತಾಗಿ ಮಹಿಳೆಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಕುರಿತು ಬಿಸಿಬಿಸಿ ಚರ್ಚೆಯನ್ನು ಈ ಪತ್ರಿಕೆಯ ಮೂಲಕ ಆರಂಭಿಸಿತು. ಆ ಸಂದರ್ಭದಲ್ಲಿ ಕೇರಳಕ್ಕೆ ಭೇಟಿ ನೀಡಿದ ಆಗಿನ ರಾಷ್ಟ್ರಾಧ್ಯಕ್ಷ ವಿ.ವಿ. ಗಿರಿಯವರನ್ನು ಚೇಕನೂರರು ಮತ್ತು ಈ ಸಂಸ್ಥೆಯ ಸದಸ್ಯರು ಭೇಟಿ ಮಾಡಿ, ಮುಸ್ಲಿಂ ಮಹಿಳೆಯರು ಎದುರಿಸುತ್ತಿರುವ ಈ ಶೋಷಣೆಗಳನ್ನು ನಿಲ್ಲಿಸಲು ಹೊಸ ನಿಯಮವೊಂದನ್ನು ರೂಪಿಸಿ ಅನುಷ್ಠಾನಗೊಳಿಸಬೇಕೆಂದು ಮನವಿ ಅರ್ಪಿಸಿದ್ದು ಕೇರಳದಾದ್ಯಂತ ದೊಡ್ಡ ಸುದ್ದಿಯಾಗಿತ್ತು.



* * * * * * *

ಕಾರಶ್ಶೇರಿಯವರ ಇನ್ನೊಂದು ಪುಸ್ತಕ 'ಶರಿಯತ್; ಕೆಲವು ವಿಷಯಗಳು' ಎಂಬುದು. ಇದರಲ್ಲಿ ಇವರು ಶರಿಯತ್ ಮತ್ತು ಮುಸ್ಲಿಂ ವ್ಯಕ್ತಿ ನಿಯಮದ ಕುರಿತು ಕೆಲವು ಲೇಖಕರೊಡನೆ ನಡೆಸಿದ ಸಂದರ್ಶನವನ್ನು ಪ್ರಕಟಿಸಿದ್ದಾರೆ. ಅಸ್ಗರ್ ಅಲಿ ಇಂಜಿನಿಯರ್, ಡಾ. ತಾಹಿರ್ ಮಹಮೂದ್, ವೈಕ್ಕಂ ಮುಹಮ್ಮದ್ ಬಷೀರ್, ಮುಹಮ್ಮದ್ ಮೀರಾನ್, ಎನ್.ಪಿ. ಮುಹಮ್ಮದ್, ನಾನೂ ಸೇರಿದಂತೆ ಹಲವಾರು ಜನರ ಸಂದರ್ಶನಗಳ ಸಂಗ್ರಹವೇ ಈ ಕೃತಿಯಾಗಿದೆ. ಇದರಲ್ಲಿ ಇವರು ಅಸ್ಗರ್ ಅಲಿ ಇಂಜಿನಿಯರ್, ಜಮಾಅತೆ ಇಸ್ಲಾಮಿ ಸಂಘಟನೆಯ ಕುರಿತು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳೆಡೆಗೆ ನಮ್ಮ ಗಮನ ಸೆಳೆದಿದ್ದಾರೆ. ಆ ಪ್ರಶ್ನೋತ್ತರಗಳು ಈ ರೀತಿ ಇವೆ.

ಕಾರಶ್ಶೇರಿ: ಪ್ರಜಾಪ್ರಭುತ್ವ ಮತ್ತು ಮತ ವಿಶ್ವಾಸ ಒಂದುಗೂಡಿ ಮುಂದುವರಿಯದೆಂದು ವಾದಿಸುವ ಕೆಲವು ಮುಸ್ಲಿಮರಿದ್ದಾರಲ್ಲ?

ಅಸ್ಗರ್ ಅಲಿ ಇಂಜಿನಿಯರ್: ಹೌದು. ಜಮಾಅತೆ ಇಸ್ಲಾಮಿಗಳು ಹಾಗನ್ನುತ್ತಾರೆ. ಅವರ ಸಂಘಟನೆಯ ಸ್ಥಾಪಕರಾದ ಅಬುಲ್ ಅಲಾ ಮೌದೂದಿ ಎಂಬುವರು ಬದುಕಿರುವವರೆಗೆ ಹಾಗೆಯೇ ವಾದಿಸುತ್ತಿದ್ದರು. ನಾನು ಅದನ್ನು 100% ರಷ್ಟು ವಿರೋಧಿಸುತ್ತೇನೆ. ದೇಶೀಯತೆ, ಜಾತ್ಯತೀಯತೆ, ಪ್ರಜಾಪ್ರಭುತ್ವ ಎಂಬ ಈ ಮೂರು ಆಶಯಗಳೂ ಇಸ್ಲಾಂ ಧರ್ಮಕ್ಕೆ ವಿರೋಧವಾದುದು ಎಂದು ಸಮರ್ಥಿಸಲು ಶ್ರಮಿಸಿದವರು ಮೌದೂದಿ. ಆಧುನಿಕ ಕಾಲಘಟ್ಟದಲ್ಲಿ ಬಹಳ ಅಪಾಯಕರವಾದ ರಾಷ್ಟ್ರೀಯ ವ್ಯಾಖ್ಯಾನ ನೀಡಿದವರು ಮೌದೂದಿ. ಅದು ಇಸ್ಲಾಂ ಧರ್ಮಕ್ಕೆ ಹಾಗೂ ಇಂಡಿಯಾ ಉಪಖಂಡಕ್ಕೆ ಒಂದೇ ವಿಧದ ಕೆಡುಕನ್ನುಂಟು ಮಾಡಿತು. ಆ ಮತ-ರಾಷ್ಟ್ರೀಯ ಸಂಕಲ್ಪದ ದುರಂತಗಳು ಪಾಕಿಸ್ತಾನದಲ್ಲಿ ಅತಿಯಾಗಿ ಕಾಣಿಸಿಕೊಂಡಿತು.

ಪ್ರಶ್ನೆ: ಹೇಗೆ?

*ನಿಮಗೆ ಗೊತ್ತಲ್ಲ? ಮುಹಮ್ಮದಾಲಿ ಜಿನ್ನಾಗೆ ಬೇಕಾಗಿದ್ದುದು ಒಂದು ಮುಸ್ಲಿಂ ರಾಷ್ಟ್ರವಾಗಿತ್ತು. ಮೌದೂದಿ ಪ್ರಯತ್ನಿಸಿದ್ದು ಒಂದು ಇಸ್ಲಾಂ ರಾಷ್ಟ್ರಕ್ಕಾಗಿ. ಈ ಎರಡು ವಿಭಾಗಗಳ ನಡುವಿನ ಸಂಘರ್ಷ ಅಲ್ಲಿ ಉಂಟುಮಾಡಿದ ತೊಂದರೆಗಳು ಅಷ್ಟಿಷ್ಟಲ್ಲ. ಜಿನ್ನಾ ಅವರಿಗೆ ಪ್ರಜಾಪ್ರಭುತ್ವ ಅರ್ಥವಾಗುತ್ತದೆ. ಜಾತ್ಯತೀತತೆ ಅರ್ಥವಾಗುತ್ತದೆ. ಖಂಡಿತವಾಗಿಯೂ ಅವರ ದ್ವಿರಾಷ್ಟ್ರವಾದ ಅಪಾಯಕರವಾಗಿತ್ತು. ಆದರೂ ವಿಭಿನ್ನ ಧಾರ್ಮಿಕ ಸಮುದಾಯಗಳಿಂದ ಕೂಡಿದ ಒಂದು ಆಧುನಿಕ ರಾಷ್ಟ್ರದ ಕಲ್ಪನೆ ಜಿನ್ನಾ ಅವರಿಗೆ ಜೀರ್ಣವಾಗುವಂತಹುದೇ ಆಗಿತ್ತು. ಮುಸ್ಲಿಂ ಜನತೆಯ ಕ್ಷೇಮದಲ್ಲಿ ಆಸಕ್ತಿ ಇರುವ, ಮುಸ್ಲಿಮರ ಒಂದು ರಾಷ್ಟ್ರವೆಂಬುದು 'ಮುಸ್ಲಿಂ ರಾಷ್ಟ್ರ' ಎಂಬುದರ ಅರ್ಥ. ಮೌದೂದಿಯ ಇಸ್ಲಾಮಿಕ್ ರಾಷ್ಟ್ರ ಇದರಿಂದ ತೀರಾ ಭಿನ್ನವಾಗಿದೆ. ಅಲ್ಲಿ ಪ್ರಜಾಸತ್ತೆ (Democracy) ಇಲ್ಲ; ಸ್ವಾತಂತ್ರ್ಯವಿಲ್ಲ; ನಿಯಮ ರೂಪಿಸಲು ಜನರಿಗೆ ಅಧಿಕಾರವಾಗಲಿ, ಅವಕಾಶವಾಗಲಿ ಇಲ್ಲ. ದೇವರ ನಿಯಮವನ್ನು ಮಾತ್ರ ಅನುಸರಿಸಬೇಕಾದ ಒಂದು ರಾಷ್ಟ್ರ ಅದಾಗಬೇಕು. ಶರಿಯತ್ ಕಾನೂನು ಮಾತ್ರ ಅನುಸರಿಸಬೇಕಾದ ಆಡಳಿತ ವ್ಯವಸ್ಥೆ ಅದಾಗಬೇಕು (ತಾಲಿಬಾನ್ ಆಡಳಿತ!). ಇದನ್ನು ಅವರು 'ಥಿಯೊ ಡೆಮಾಕ್ರಸಿ' ಎಂದು ಕರೆದರು. ಇದು ಇಸ್ಲಾಮಿನ ದುರ್ವ್ಯಾಖ್ಯಾನವಾಗಿದೆ. ಇಂಡಿಯಾಕ್ಕಾಗಲಿ, ಇಸ್ಲಾಮಿಗಾಗಲಿ ಒಪ್ಪಿಗೆಯಾಗದ ಸಿದ್ಧಾಂತ.

ಪ್ರಶ್ನೆ: ಈಗ ಜಮಾತೆ ಇಸ್ಲಾಮಿಗಳು ಜಾತ್ಯತೀತತೆ, ಪ್ರಜಾಪ್ರಭುತ್ವ ಮತ್ತು ದೇಶಿಯತೆ ತಮಗೂ ಇಷ್ಟ ಎನ್ನಲಾರಂಭಿಸಿದ್ದಾರಲ್ಲ?

*ಅದನ್ನು ನಾನು ಗಮನಿಸಿದ್ದೇನೆ. ಅವರು ಪಾಕಿಸ್ತಾನದಲ್ಲಿ ಹಾಗೆ ಹೇಳುತ್ತಿಲ್ಲವಲ್ಲ? ಹೋಗಲಿ, ಕಾಶ್ಮೀರದಲ್ಲಿ ಹೇಳುತ್ತಾರಾ? ಇವೆಲ್ಲ ಜನತೆಯ ಕಣ್ಣಿಗೆ ಮಣ್ಣೆರಚುವಂತಹ ತಂತ್ರಗಳು. ನೆಲೆಯೂರಲು ಬೇಕಾಗಿರುವ ತಂತ್ರಗಳು. ಈಗ ನೆಲೆ ನಿಲ್ಲಲು ಅವರು ಹಾಗೆ ಹೇಳಲೇಬೇಕಾಗಿದೆ ಅಷ್ಟೇ.

ಪ್ರಶ್ನೆ: ಜಿನ್ನಾ ಮೌದೂದಿಯವರ ಆಶಯಗಳನ್ನು ಸ್ವೀಕರಿಸಿದ್ದರೆಂದು ಕೆಲವರು ಹೇಳುತ್ತಾರಲ್ಲ?

* ಶುದ್ಧ ಸುಳ್ಳು! ಅವರಿಬ್ಬರ ತತ್ವಾದರ್ಶಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಉದಾಹರಣೆಗೆ ಜಿನ್ನಾ ಸ್ವಾತಂತ್ರ್ಯ ಸಮರದಲ್ಲಿ ಪಾಲ್ಗೊಂಡವರು. ಮೌದೂದಿ ಯಾವ ನೆಲೆಯಲ್ಲೂ ಬ್ರಿಟಿಷರನ್ನು ಎದುರಿಸಲೂ ಇಲ್ಲ; ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲೂ ಇಲ್ಲ. ಜಿನ್ನಾಗೆ ಮೌದೂದಿಯ ಯಾವ ಆಶಯ ಬೇಕಾಗಿತ್ತೆನ್ನುತ್ತೀರಿ? ಎಲ್ಲವೂ ಸುಳ್ಳು ಪ್ರಚಾರಗಳು. ಮೌದೂದಿ ಎಂದಿಗೂ ಜಿನ್ನಾಗೆ ಬೆಂಬಲ ನೀಡಿದ್ದೇ ಇಲ್ಲ.

ಪ್ರಶ್ನೆ: ಮೌದೂದಿ ಬ್ರಿಟಿಷರ ವಿರುದ್ಧವಾಗಿರಲಿಲ್ಲ ಎನ್ನಲು ಸಾಧ್ಯವೇ? ಆತ ಪಾಶ್ಚಾತ್ಯ ಸಂಸ್ಕೃತಿಯ ಪರಮ ಟೀಕಾಕಾರರಲ್ಲವಾ?

* ಅದು ಹೌದು. ಸ್ವಾತಂತ್ರ್ಯ ಹೋರಾಟದಲ್ಲಿ ಮೌದೂದಿ ಪಾಲ್ಗೊಳ್ಳದಿದ್ದುದು ಬ್ರಿಟಿಷರಿಗೆ ಸಹಕರಿಸಿದಂತಾಯಿತೆಂಬುದನ್ನು ಮರೆಯಬಾರದು. ಇಲ್ಲಿನ ಮುಸ್ಲಿಂ ಧರ್ಮ ಪಂಡಿತರಲ್ಲಿ ಹೆಚ್ಚಿನವರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರೆಂಬುದನ್ನೂ ನೆನಪಿಡಬೇಕು. ಇಂದಿನ ಇಂಡಿಯಾದಲ್ಲಿ ಖಂಡಿತವಾಗಿಯೂ ಇಸ್ಲಾಂ ಧರ್ಮವೆಂಬುದು ಪೊಲಿಟಿಕಲ್ ಐಡಿಯೋಲಜಿ ಅಲ್ಲ. ಅದೊಂದು ವಿಶ್ವಾಸ (faith). ವಿಶ್ವಾಸವನ್ನು ಅಪಾರ್ಥ ಮಾಡಿಕೊಂಡು ರಾಷ್ಟ್ರೀಯ ಸಂವಿಧಾನವಾಗಿಸಲು ಮೌದೂದಿ ಶ್ರಮಿಸಿದರು ಎನ್ನುತ್ತಾರೆ ಅಸ್ಗರ್ ಅಲಿ ಇಂಜಿಯರ್.

ಈಗ ಹೇಳಿ ಆರ್‌ಎಸ್‌ಎಸ್ ಸ್ಥಾಪಕ ಹೆಡಗೇವಾರ್ ಮತ್ತು ಗೋಳ್ವಾಲ್ಕರ್ ಹಾಗೂ ಜಮಾಅತೆ ಇಸ್ಲಾಮಿಯ ಅಬುಲ್ ಅಲಾ ಮೌದೂದಿಯವರ ಚಿಂತನಾ ಕ್ರಮಗಳಲ್ಲಿ ಹೆಚ್ಚಿನ ವ್ಯತ್ಯಾಸವೇನಾದರೂ ಇದೆಯೇ? ■

ದಳದ ಬ್ರಮ್ಮ ಪೆನ್ಸಿಲ್ಲು ರಬ್ಬರು ರೆಡಿ ಮಾಡಿಕತ್ತಾ ಅವ್ರನೆ!

ಜುಮ್ಮಿ ಶೃಂಗರಿಸಿಕೊಂಡು ಬಂದಿದ್ದನ್ನು ನೋಡಿದ ಕಾಳಮಾವ 'ಪಯಣ' ಎಂದ.

"ಪಯಣ ಎಲ್ಲಿಗೂ ಇಲ್ಲ ಕಣ ಮಾವ. ಸ್ತ್ರೀ ಸಗತಿ ತೆಂಗುಸ್ರೆಲ್ಲ ಬೆಂಗಳೂರಿಗೆ ಕರಕಂಡೋಗಿದ್ರು. ಹೋಗಿದ್ದು ಬಂದೆ" ಎಂದಳು.

"ಉಗ್ರಿ ಬಂದಿರಲಿಲ್ವೆ?"

"ಇಲ್ಲ ಬಂದಿರಲಿಲ್ಲ. ಆಗೇನೊ ಸುನಗೇನೂ ಗೊತ್ತಿಲ್ಲ. ಅನ್ನಕಂಡು ಯಲ್ಲಾತ್ಮ ಕರಕಂಡೋಯ್ತಿದ್ದೆ. ಈಗ್ಲೂ ಯಳಕಂಡು ತಿರಗಕ್ಯಾದತೆ?"


"ನೋಡ ಮಾವ ಯಂಗಂತಳೆ. ಹ್ವಳೆ ದಾಟದ ಮ್ಯಾಗಲ ಮಾತಾಡ್ತಳಲ್ಲ ಇವುಳು" ಎಂದ ಉಗ್ರಿ.

"ಇವತ್ತು ದೇಸ ಇರದೆ ಅಂಗಲವೇನ್ಲ?" ಎಂದ ಸೀರ.

"ಅಲ್ಲಾ, ನಾನು ಇವುಳಿಗೆ ರಾಜಕಾರಣ ಕಲುಸ ಕ್ಕೋಗಿ ನನ್ನ ಅಮೂಲ್ಯ ಸಮಯನ್ನೆಲ್ಲ ಹಾಳು ಮಾಡಿ ಕಂಡು ಕುಂತಿದ್ದಿನಿ. ಇವುಳು ನೋಡಿದ್ರೆ ಇವುನಿಲ್ದೆಯಿದ್ರೂ ಆಯ್ತುತ್ತು ಅನ್ನಂಗೆ ಮಾತಾಡ್ತಳೆ" ಎಂದು ಉಗ್ರಿ ಸಿಟ್ಟಾದ.

"ಅಹಹ ಅಮೂಲ ಸಮಯವಂತೆ ಅಮೂಲ ಸಮಯ, ನಾಯಿಗೆ ಕ್ಯಲಸಿಲ್ಲ ಕುಂತಗಳಕ್ಕೆ ಹೊತ್ತಿಲ್ಲ ಅಂತ ತಿರಗತಿದ್ದ. ನೋಡ್ಯಂಗಂತನೆ."

"ಜಗಳಾಡಬ್ಯಾಡಿ ಬುಡಿರ್ಲ ಹೊಗಲತ್ತಗೆ. ಹಿಂಗಾಡಿ ಕಂಡು ಆ ಜಯಲಕುಸ್ಮಿ ಸುರುಮಾಡಿಕಂಡವುಳಲ್ಲ ಅಂಗಾದತು."



"ಅವುಳಂಗೆ ನಾವ್ಯಾಕಾಗ್ಲಿ ಮಾವ ನಾನದಲ್ಲ ಹೇಳಿದ್ದು ಸ್ತ್ರೀ ಸಗತಿಲಿ ಯಂತ್ಯಂತ ಹೆಂಗಸರವುರೆ ಅಂತೀ. ಅವುರು ಇಡೀ ಬೆಂಗಳೂರನೆ ಜಾಲಾಡಿಕಂಡು ಬರೋ ಅಂತೊರವುರೆ ಕಣಮಾವ. ಅವುರುಕುಟ್ರೊದಾಗ ಈ ಉಗ್ರಿ ಯಾಕೆ ಅಂತ ಬುಟ್ರೊದೆ."

"ಹೋಗ್ಲಿ ಬೆಂಗಳೂರಲ್ಲಿ ಏನೇನು ಮಾಡಿಕಂಡು ಬಂದೆ ಅದನ್ನಾರ ಹೇಳ್ಳೆ?"

"ಅದೆ ನಾವ್ವೆಲ್ಲ ದ್ಯಾವೇಗೌಡನ ಮನೆತಕ್ಕೋಗಿದ್ವೊ"

"ಸಿಕ್ಕಿದ್ನೆ?"

"ಸಿಕ್ಕದೇನು, ಮಾತಾಡಿಸಿಗಂಡೇ ಬಂದೊ. ಅಗೋ ನೀನು ಕುಂತಿದ್ದಿಯಲ್ಲಾ ಆಟೇ ದೂರದಲ್ಲಿ ಕುಂತಿದ್ದ. ಕಾಫಿ ತರಿಸಿ ಕೊಟ್ಟ."

"ಗೆಲುವಾಗಿದ್ನ?"

"ಅವುನ್ಯಾವತ್ತು ಗೆಲುವಾಗಿರತನೊ ಮಾವ, ಇದ್ರು ವರಗಡೆ ತೋರಿಸಿಗಳಲ್ಲ. ಅವುಂದ್ಯಲ್ಲ ವಳಗೆ ನ್ಯಡಿತದೆ" ಎಂದ ಉಗ್ರಿ.

"ತಡಿಲ ಅವುಳು ಮಾತಾಡ್ಲಿ, ಹೇಳ್ಳೆ ಜುಮ್ಮಿ...."

"ನನ್ನ ಜ್ವತೆ ರಾಜಮ್ಮ, ಗೌರಮ್ಮ, ತಂಗ್ಯಮ್ಮ, ಗಂಗವ್ವ ಇನ್ನು ಯಾರ್‍ಯಾರೊ ಹತ್ತದುನ್ಯೆದು ಜನ ಬಂದಿದ್ರು. ನಾವು ಕೇಳದೊಂದು ಅವುನು ಮಾತಾಡ ದೊಂದು ಅಂಗಾಯ್ತು ಅತ್ತಗೆ."

"ನೀವೇನಂದ್ರೀ?"

"ಅದೆ ಸ್ತ್ರೀ ಸಗತಿ ಸಭೆ ಮಾಡ್ತಿವಿ, ಬಲ್ಲಿ ಅಪ್ಪಾರೆ ಅಂದೊ. ಅದಕವುನು ನನ್ನ ಜೇವುನದಲ್ಲಿ ದ್ವಡ ತೆಪ್ಪು ಮಾಡಿದೆ ಅಂದ. ಆಟೊತ್ತಿಗೆ ಚನ್ನಮ್ಮನೂ 'ಬಂದ್ಲು. ಪಾಪ ಅವುಳನಂತೂ ನೋಡಕ್ಯಾಗದಿಲ್ಲ ಕಣಮಾವ ಅಂಗಾಗ್ಯವುಳೆ."

"ವಯಿಸಾಯ್ತುಲ್ಲೇ?"

"ವಯಿಸು ಯಲ್ಲಾರಿಗೂ ಆಯ್ತದೆ. ಅದಲ್ಲ ಅವುರ ಮನೆ ಹುಡುಗ ಅಸೆದ್ಯಾಕಿದನಲ್ಲ ಅದ್ಕೆ ತ ಕೂದಲ್ಯಲ್ಲ ಉದಿರೋಗ್ಯವೆ. ಮೈಕೈ ಚರವ್ಮ ಸುಲ್ಕೊಗ್ಯದೆ. ಅವುಳ ನೋಡಿ ನನಿಗೇ ಒಂಥರಾ ಅನ್ನಸ ಕಣಮಾವ."

"ಅಪ್ಪಾದ್ರು ಅವುರು ಮಾಡೊ ಕ್ಯಟ್ಟ ಕ್ಯಲ ಇನ್ನು ಬುಟ್ಟಿಲವಲ್ಲ ಹೇಳು?" ಎಂದ ಉಗ್ರಿ.

"ತಡಿಲ ನೀನು, ಹೇಳ್ಳೆ ಅದೇನು ತೆಪ್ಪ ಮಾಡಿದ್ದ? ಎಂದ ಕಾಳಮಾವ.

"ಚನ್ನಮ್ಮನ ಕಟಿಗಂಡು ತೆಪ್ಪು ಮಾಡಿದೆ ಅಂದನೇ ಜುಮ್ಮಿ?" ಎಂದ ಸೀರ.

"ಏ ಹೇಳಗಂಟ ಇರೊ ಮಾವ, ನಾನು ಆ ಮನೆ ಹಾಳ ಬಜೆಪಿಯೋರ ಜ್ವತೆ ಸೇರಿಕಂಡು ತೆಪ್ಪು ಮಾಡಿದ ಅಂದ ಕಣಮಾವ ದ್ಯಾವೇಗೌಡ" ಎಂದಳು ಜುಮ್ಮಿ

"ಕಡಿಗೂ ಮಾಡಿರೊ ತೆಪ್ಪ ನಮ್ಮ ಜುಮ್ಮಕ್ಕನೆದ್ರಿ ದ್ಯಾವೇಗೌಡ ಒಪ್ಪಿಗಂಡ ಅಂದಂಗಾಯ್ತು" ಎಂದು ಕೊಂಡು ವಾಟಿಸ್ಸೆ ಬಂದ.

"ಏ ಹೇಳಗಂಟ ಸಸ್ತು ಕುತಗಳ್ಳ. ಅಮ್ಯಾಲೆ ಮಾವ ನನ್ನ ಉಳಿದಿರ್‍ಕೊ ಆಯಿಸಲ್ಲಿ ಆ ಬಜೆಪಿಗಳಿಂದ ಬುಡಿಸ ಗಂಡು ಜಂತಾದಳ ಸ್ವತಂತ್ರವಾಗಿ ಪವರ್‍ರಿಗೆ ಬರಂಗ ಮಾಡ್ತಿನಿ ಅಂದ ಕಣಮಾವ. ಅವುನ್ನ ನೋಡಿದ್ರೆ ಏನೊ ಕ್ವರಗಚಗಂಡಿರಂಗೆ ಕಾಣ್ತನೆ ಕಣಮಾವ."

"ಕ್ವರಗಿನ್ನೇನಕ್ಯ ಗೋವಾದಲ್ಲಿ ಹಿಡಕಂಡು ಮರಳಲ್ಲಿ ಉಳ್ಳಾಡಿಸಿ ಕಳಿಸ್ಯವುರೆ. ಇನ್ನು ಉಳ್ಳಾಲದಲ್ಲಿ ಹೋಗಿದ್ದೊ

'ಮೂರ್ತಿ' ಎಸ್‌ಎಂಎಸ್, ವೆಬ್‌ಸೈಟ್ ರಾಷ್ಟ್ರಾಧ್ಯಕ್ಷರಂತೆ!

ಅನಾಥ ಶಿಶು

ಅಂಬರೀಷ್ ರಾಜೀನಾಮೆ ಕೊಟ್ಟಿದ್ದಾರೆ!

ಸಂಶಯ ಬೇಕಿಲ್ಲ. ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ದೇವರ ಮೇಲೆ ಆಣೆ ಇಟ್ಟು ಇದನ್ನು ದೃಢೀಕರಿಸಿದ್ದಾರೆ! ಬೇರೆ ಏನಾದರೂ ಹೇಳಿದ್ದರೆ ನಂಬಿಕೆ ಬರುತ್ತಿರಲಿಲ್ಲವೇನೋ.... ಆದರೆ ದೇವರ ಮೇಲೆ ಆಣೆ ಇಟ್ಟರೆ... ನಂಬಲಿರಲಾದೀತೆ.

ಆದರೆ... ರಾಜೀನಾಮೆ ಇನ್ನೂ ಅಂಗೀಕಾರ ಆಗಿಲ್ಲ!

ಅದು ಅವರ ತಪ್ಪಲ್ಲ. ಕಾನೂನಿನ ಮಿಸ್ಟೇಕು!

ಆದಕ್ಕೇನು ಮಾಡುತ್ತದೆ ಈ ಮಂಡ್ಯದ ಗಂಡು?

ದೆಹಲಿಗೆ ಪಾದ ಬೆಳೆಸುತ್ತದೆ. ಸರಿಯಾದ ಕ್ರಮದಲ್ಲಿ ಸಲ್ಲಿಸುತ್ತದೆ! ಇದು ಅವರ ಬಾಯಿಯಿಂದಲೇ ಉದುರಿದ ಭರವಸೆ.

ಮತ್ತೆ ಅಧಿಕಾರ?

ಆ ಪ್ರಶ್ನೆಯೇ ಇಲ್ಲ.

ಅಂದರೆ ರಾಜಕೀಯ ನಿವೃತ್ತಿಯೆ?

ಛೆಛೆ ಹಾಗಲ್ಲ, ಈ ಸಲ ಸಂಸದ, ಮಂತ್ರಿ ಆಗುವುದಿಲ್ಲ.

ಮುಂದೆ? ಏನಾದರೂ ಆಗಬಹುದು!

ಇದು ಹಾಗಿರಲಿ. ಅವರು ದೆಹಲಿಗೆ ಹೋದರೋ ಬಿಟ್ಟರೋ ಗೊತ್ತಿಲ್ಲ, ಸಂಸದ, ಮಂತ್ರಿ ಪದವಿಯಿಂದ ಕಳಿಚಿಕೊಂಡಿಲ್ಲ!

ಸಂಸದರ ಸ್ಥಾನ ತೆರವು ಆಗಿದ್ದರೆ ಆರು ತಿಂಗಳ ಒಳಗಾಗಿ ಚುನಾವಣೆ ನಡೆಯಬೇಕಾಗಿತ್ತು, ಮಂಡ್ಯ ಕ್ಷೇತ್ರಕ್ಕೆ ಓರ್ವ ಸಂಸದ ಸಿಗಬೇಕಾಗಿತ್ತು, ಈಗ ನೋಡಿದರೆ ಅಂಬರೀಷ್ ಸಂಸದರ ಕಾರ್ಯ ನಿರ್ವಹಿಸುತ್ತಿಲ್ಲ, ಇತರರು ಆ ಸ್ಥಾನಕ್ಕೆ ಬರಲೂ ಅವಕಾಶ ನೀಡುತ್ತಿಲ್ಲ!


ಇದು ಮತದಾರರಿಗೆ ಬಗೆದ ದ್ರೋಹ. ಏನು ಮಾಡುತ್ತಿದೆ ಮಹಾಜನತೆ?

ಸಾಮಾನ್ಯ ಮತದಾರನಿಗೆ ಚುನಾವಣೆ ಎಂದರೆ ಹಣ, ಹೆಂಡ, ಕಂಡ ಪಡೆಯಲು ಒಂದು ಅವಕಾಶ. ಅವನ್ನು ಪಡೆದು ಮತ ನೀಡಿದರೆ ಅಲ್ಲಿಗೆ ಅವನ ಸಂಬಂಧ ಕಡಿತ. ರಾಜಕೀಯವನ್ನೇ ವೃತ್ತಿ ಮಾಡಿಕೊಂಡಿರುವವರ ಪ್ರತಿಕ್ರಿಯೆ ಏನು?

ಅಂಬರೀಷ್ ಅಭಿಮಾನಿಗಳು?

ಹುಟ್ಟುಹಬ್ಬ ಆಚರಿಸಿ ರೋಗಿಗಳಿಗೆ ಹಣ್ಣು ಹಂಚುವುದಕ್ಕೆ ಅವರ ಅಭಿಮಾನ ಸೀಮಿತ. ಟಿವಿಯಲ್ಲಿ ಮುಖ ಕಾಣಿಸಿದರೆ ಸಾಕು. ಅವರ ಜನ್ಮ ಸಾರ್ಥಕ!

ಯಾರದೇ ಅಭಿಮಾನಿಗಳಾದರೂ ಇದೇ ರೋಗ. ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ. ಹುಟ್ಟುಹಬ್ಬದ ಪರಿಷೆಯೇ ಪರಮೋಚ್ಛ ಗುರಿ.



ಇತರೆ ರಾಜಕಾರಣಿಗಳು?

ಕಾಂಗ್ರೆಸ್‌ನವರಿಗೆ ಒಂದು ತಲೆ ಸಂಸತ್ತಿನಲ್ಲಿ ಕಡಿಮೆಯಾದರೇನು ಗತಿ ಎಂಬ ಚಿಂತೆ.

ಕುಂಟನೋ ಕುರುಡನೋ, ನಮ್ಮಲ್ಲೂ ಒಂದು ಗಂಡಸದೆ ಅನ್ನೋ ಸಮಾಧಾನ-

ಭಾರತೀಯ ಜನತಾಪಕ್ಷ?

ಈ ಶತಮಾನದಲ್ಲಿ ಇಲ್ಲಿ ತಳವೂರುವ ಸಂಭವ ಇಲ್ಲ ಎಂಬ ನಂಬಿಕೆ. ವ್ಯರ್ಥ ಕಸರತ್ತೇಕೆ ಎಂಬ ಆಲೋಚನೆ.

ಜಾತ್ಯತೀತ ಜನತಾದಳ?

ಇವರಿಗೆ ಅಭ್ಯರ್ಥಿಯದ್ದೇ ಕೊರತೆ.

ಅಭ್ಯರ್ಥಿ ಸಿಕ್ಕಿಲ್ಲ, ಚುನಾವಣೆ ಬೇಕಿಲ್ಲ!

ರಾಜಕೀಯ ಪ್ರಜ್ಞೆ ಇರುವ ಜನ ಎನ್ನುವ ಹುಂಬತನದಲ್ಲಿ ಬೀಗುತ್ತಿದೆ ಮಂಡ್ಯ ಜನತೆ!

ಈ ಪ್ರಜ್ಞೆ ಇರುವ ಜನ ದೆಹಲಿಯಲ್ಲಿ 'ಅನಾಥ ಶಿಶು'!

ಯಾರ ಕೊಡುಗೆ?

ಬೆಂಗಳೂರು ಅಗಾಧವಾಗಿ ಬೆಳೆದಿದೆ.

ಇದು ಯಾರ ಕೊಡುಗೆ?

ಐಟಿ, ಬಿಟಿಗಳದ್ದು!

ಇದನ್ನು ನಾನು ಹೇಳುತ್ತಿಲ್ಲ. (ಕು)ಪ್ರಖ್ಯಾತ ಬಯೋಕಾನ್ ಪಟು ಕಿರಣ್ ಮಜುಂದಾರ್ ಅವರ ನುಡಿ ಇದು.

ಇನ್ಫೋಸಿಸ್ ನಾರಾಯಣಮೂರ್ತಿ! ಬಯೋಕಾನ್ ಮಜುಂದಾರ್ ಇಲ್ಲದಿದ್ದರೆ ಇದೇನಾಗುತ್ತಿತ್ತು?

ಅನಾಗರಿಕರ ಕೊಂಪೆ!

ಐಟಿ, ಬಿಟಿಗಳು ಬೆಂಗಳೂರಿನ ಹೆಸರನ್ನು ವಿಶ್ವಮಟ್ಟಕ್ಕೆ ಏರಿಸಿವೆ. ವಿದೇಶಿ ವಿನಿಮಯವನ್ನು ತರುತ್ತಿವೆ. ತೆರಿಗೆ ಪಾವತಿಸಿ ರಾಜ್ಯದ ಆರ್ಥಿಕ ಸಂಪನ್ಮೂಲ ಹೆಚ್ಚಿಸಿವೆ. ಪರಿಸ್ಥಿತಿ ಹೀಗಿರುವಾಗ ಈ ನಾಡಿನ ಜನರ ಆರಾಧ್ಯದೈವಗಳು ಆಗಬಾರದೆ ಅವರು? ಆದರೇನು ನಡೆಯುತ್ತಿದೆ ಈ ನಾಡಿನಲ್ಲಿ? ಅವರನ್ನೇ ಟೀಕಿಸಲಾಗುತ್ತಿದೆ! ಜ್ಞಾನಪೀಠಿ ಅನಂತಮೂರ್ತಿಯವರೂ ಈ ಗುಂಪಿಗೆ ಸೇರಿದರೆ ಬಾರದೆ ಕೋಪ? ಕಿರಣ್ ಕೆಂಡ ಆದರು. 'ಯಾರು ಈ ಅನಂತಮೂರ್ತಿ?' ಎಂದು ಪ್ರಶ್ನಿಸಿದರು. ಒಂದೆರಡು ಪುಸ್ತಕ ಬರೆದರೆ ಆತ ಮಹಾನ್ ವ್ಯಕ್ತಿಯೇನು? ಈತನಿಂದ ರಾಜ್ಯದ ಆರ್ಥಿಕ ಸಂಪನ್ಮೂಲ ಹೆಚ್ಚುತ್ತದೆಯೆ? ಆದುದರಿಂದ ಮಹಾಜನಗಳೇ ಇಂತಹವರ ಮಾತಿಗೆ ಮರುಳಾಗಬೇಡಿ. ನಾರಾಯಣಮೂರ್ತಿಯವರನ್ನು ರಾಷ್ಟ್ರಾಧ್ಯಕ್ಷರ ಸ್ಥಾನಕ್ಕೆ ಬೆಂಬಲಿಸಿ! ಇದು ಕಿರಣ್ ಅವರ ಮಾತಿನ ಸಾರಾಂಶ.

ಈಕೆ ಒಬ್ಬರೇ ಅಲ್ಲ ನಾರಾಯಣಮೂರ್ತಿ ಅಧ್ಯಕ್ಷರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವವರು. ಎಸ್‌ಎಂಎಸ್ಸು, ವೆಬ್‌ಸೈಟು ಅನ್ನುವ ಹೆಸರಿನಲ್ಲಿ ರಾಷ್ಟ್ರೀಯ ಪತ್ರಿಕೆಗಳೂ ಸಮೀಕ್ಷೆ ನಡೆಸುತ್ತಿವೆ. ಇವು ಮಾಡಿದ ಚುನಾವಣಾ ಸಮೀಕ್ಷೆಗಳು ಅವರ ಮುಖಕ್ಕೆ ಹಳೆ ಚಪ್ಪಲಿಯಲ್ಲಿ ಹೊಡೆದಂತಹ ಫಲಿತಾಂಶ ನೀಡಿದ್ದು ಒಂದು ಬದಿಗಿರಲಿ. ಈ ಸಮೀಕ್ಷೆ ನಡೆಸುತ್ತಿರುವವರು ಯಾರು? ಉತ್ತರಿಸುವವರು ಯಾರು? ಎಂಬುದು ಇಲ್ಲಿ ಅಪ್ರಸ್ತುತ. ಮೂರ್ತಿಯವರಿಗೇ ಅತ್ಯಧಿಕ ಮತ ಬಂದಿವೆಯಂತೆ! ಅಂದಮೇಲೆ ಇವರು ವೆಬ್‌ಸೈಟ್ ಅಧ್ಯಕ್ಷರು ಅಂದ ಹಾಗಾಯಿತು!

ಅಣಕ

ಎಚ್.ಎಲ್. ಕೇಶವಮೂರ್ತಿ

ಈ ಎಸ್‌ಎಂಎಸ್ಸು, ವೆಬ್‌ಸೈಟು ಇಂತಹವೆಲ್ಲ ಕಲಿತವರ ಮೋಸಗಾರಿಕೆಯ ತಂತ್ರ ಅಂತ ಜನ ಅಂದುಕೊಂಡಾರು ಎಂದೋ ಏನೋ ಅವರ ಕೆಲವು ಚೇಲಾಗಳು ಪತ್ರಿಕಾಗೋಷ್ಠಿ ನಡೆಸುತ್ತಿವೆ. ಇವು ಬಹಳ ಮಜ ಕೊಡುತ್ತವೆ. ಪತ್ರಿಕಾ ವರದಿಗಾರರು ಅಂದರೆ ಏನೆಂದುಕೊಂಡಿದ್ದೀರಿ? ತ್ರಿಕಾಲಜ್ಞಾನಿಗಳು! ಗೋಷ್ಠಿಯಲ್ಲಿ ನಡೆದದ್ದೇ ಒಂದಾದರೆ ಇವರು ವರದಿ ಮಾಡುವುದೇ ಮತ್ತೊಂದು. ಮೈಸೂರಿನಲ್ಲಿ ನಡೆದ ಗೋಷ್ಠಿಯ ವರದಿಯನ್ನು ಪತ್ರಿಕೆಗಳು ಹೇಗೆ ವರದಿ ಮಾಡಿವೆ? ಉದಾಹರಣೆಗೆ ಇವು:

ದಿನಾಂಕ **30.5.2007** ರ ಪ್ರಜಾವಾಣಿ ಪತ್ರಿಕೆಯ ವರದಿ ಹೀಗಿದೆ:

ಮೈಸೂರು: ಪತ್ರಕರ್ತರ ಸಂಘದಲ್ಲಿ 'ಮೂರ್ತಿ ಗದ್ದಲ'

'ಕನ್ನಡಿಗರಾದ ನಾರಾಯಣಮೂರ್ತಿ ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ತರಬೇಕು. ಅದಕ್ಕೆ ಕನ್ನಡಿಗರೆಲ್ಲರು ಬೆಂಬಲ ನೀಡಬೇಕಿದೆ' ಎಂದು ಅವರು (ಡಿ.ವಿ. ಹರೀಶ್ ಮತ್ತು ಜೆ. ಉಮಾಶಂಕರ್) ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

ಮಕಯುಲ್ಲ ಉಚ್ಚೊಯ್ತು ಅತ್ತಗೆ. ಅದೇ ಕ್ಷರಗಳ್ಲಿರುವಾಗ ಹೋಗಿದ್ದಿರಿ ನೀವು" ಎಂದ ವಾಟಿಷ್ಟ.

"ಹೋಗ್ಲಿ ಬತ್ತಿನಿ ಅಂದನೆ?"

"ಬರದೇನು. ಮುಂದ್ನು ವಾರದಿಂದ ಇಡೀ ಕರನಾಟಗನೆ ತಿರುಗ್ತನಂತೆ. ಆಗ ಇಲ್ಲಿಗೂ ಬಂದನಂತೆ."

"ಹೋಗ್ಲಿ ಬುಡು ನೀವು ಕರದುದ್ಮ ಬೈಲೆ ಬಂತಲ್ಲ"

"ಅಲ್ಲಾ ಸ್ತೀ ಸಗತಿ ಹೆಂಗಸರೆದ್ರಿಕೆ ಕಷ್ಟ ಹೇಳಿಕಳಂಗೆ ಆಗ್ಯವುನಲ್ಲಾ ಇನ್ನೇನೇಳನ?" ಎಂದ ಸೀರ.

"ಅದು ಉಳ್ಳಾದ ವಡತ ಚಿಗಪ್ಪ, ಆರು ಕೋಟಿ ಕರ್ಚು ಮಾಡಿ ಆರು ಸವುರ ಓಟು ತಗಂಡ್ರು ಅಂದ್ರೆ ನೀನೆ ಲೆಕ್ಕ ಹಾಕು."

"ಅಲ್ಲಿಗೆ ಒಂದು ಕೋಟಿಗೆ ಒಂದು ಸವುರೋಟು ಅನ್ನೊ ಲೆಕ್ಕ ಬತ್ತದಲ್ಲ."

"ಎಜ್ಞಾಕ್ಟ್ಲಿ ಕಟರ್ ಚಿಗಪ್ಪ, ಎನಿ ಹೌ ಅಂತೂ ನಮ್ಮ ಕುಮಾರಣ್ಣ ಇಂತ ಕ್ಯಲಸ ಮಾಡಿ ಕಾಂಗ್ರೆಸ್ಸಿಗೆ ಹೆಲ್ಪ್ ಮಾಡ್ಯವುನೆ ಥ್ಯಾಂಕ್."

"ಅಂಗಂತಿಯಾ?"

"ಊ ಚಿಗಪ್ಪ ಕಾಂಗ್ರೆಸ್ಸಿಗೆ ಹೆಲ್ಪಾಯ್ತು. ಬಿಜೆಪಿ ದೂರಾಯ್ತು. ಅದ್ಕೆ ಎಡೂರಪ್ಪ ಹಣೆಬರ ಇದ್ದಂಗಾಯ್ತದೆ ಅಂತಾ ಅವುನೆ. ಕುಮಾರಣ್ಣನೂ ನನ್ನ ಹಣೆಲಿ ಮುಕ್ಯಮಂತ್ರಿಯಾಗಿ ಮುಂದುವರಿಯದು ಬರೆದಿದ್ರೆ ಯಾರೂ ತೆಪ್ಪಸಕ್ಕಾಗದಿಲ್ಲ ಅಂದವುನೆ."

"ಒಟ್ಟನಲ್ಲಿ ಇಬ್ರು ಹಣೆಬರ ನಚಿಗಂಡವುರೆ ಅನ್ನು?" ಎಂದ ಉಗ್ರಿ.

"ಊ ಕಣೊ, ಉಗ್ರಿ, ಪದ್ಮನಾಭನಗರದಲ್ಲಿರೊ ಬ್ರಹ್ಮ ಪೆನ್ಸಿಲ್ನರಕಂಡು ರಬ್ಬರ ತಗಂಡು ರೆಡಿಯಾಯ್ತಾ ಅವುನೆ. ಯಾವು ಟೈಮಲಿ ಕೈಗೆ ಹತಾರ ತಗತನೊ ಏನೊ?"

"!?"

ತರಾಟೆಗೆ: ಆದರೆ ಪತ್ರಿಕಾಗೋಷ್ಠಿಯಲ್ಲಿ ನಾರಾಯಣಮೂರ್ತಿ ನಡವಳಿಕೆಯನ್ನು ಪತ್ರಕರ್ತರೇ ಖಂಡಿಸಿದಾಗ ಗೋಷ್ಠಿ ಕರೆದವರು ತಬ್ಬಿಬ್ಬಾದರು. 'ನಾರಾಯಣಮೂರ್ತಿ ಅವರು ರಾಷ್ಟ್ರಗೀತೆಗೆ ಅವಮಾನ ಮಾಡಿದ ಘಟನೆಯನ್ನು' ಪತ್ರಕರ್ತರು ಪ್ರಸ್ತಾಪಿಸಿ 'ಇಂತಹವರು ರಾಷ್ಟ್ರಪತಿ ಆಗಬೇಕೆ?' ಎಂದು ಮರುಪ್ರಶ್ನೆ ಹಾಕಿದರು.

ಕೊನೆಗೆ ಗೋಷ್ಠಿ ಕರೆದವರೂ ಆ ಘಟನೆಯನ್ನು ಖಂಡಿಸಿದರು. ಹೀಗೆ ಮೂರ್ತಿ ಪರ ಕರೆದಿದ್ದ ಪತ್ರಿಕಾಗೋಷ್ಠಿ ಅವರ ವಿರುದ್ಧದ ಗೋಷ್ಠಿಯಾಗಿ ಪರಿವರ್ತನೆಗೊಂಡಿತು!

ಅದೇ ದಿನ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರುವ ವರದಿ ಹೀಗಿದೆ:

People urged to support Murthy for Prez post


Speaking to media men here on Tuesday, he urged the industrialists across the state to support Murthy for the post of President. Narayanamurthy should be made President as he can lead the country with his vision, full of corporate ideas that the present world requires' he felt.

He also opined that the corporate style of administration can transform the lives of people and condemned protests against Murthy taken out in the recent past.

ಇವೆರಡು ವರದಿಗಳಲ್ಲಿ ಯಾವುದು ಸತ್ಯ?

ವರದಿಗಾರರ ವೈಯಕ್ತಿಕ ಅಭಿಪ್ರಾಯಗಳು, ...ವಲುಗಳು ಏನೇ ಇರಬಹುದು. ಹಣತೆತ್ತು ಪತ್ರಿಕೆ ...ದುವವರಿಗೆ ನಿಜ ಸಂಗತಿ ತಿಳಿಯುವ ಅಧಿಕಾರ ...ಲ್ಲವೆ?

ಹೀಗೇ ಮುಂದುವರೆದರೆ ಸುದ್ದಿ ಮಾಧ್ಯಮಗಳ ...ರದಿಗಳನ್ನು ಓದುಗರು ತಿರಸ್ಕರಿಸುವ ದಿವಸ ದೂರ ...ರಲಾರದು. ಟಿವಿಗಳಿಂದ ವೃತ್ತಪತ್ರಿಕೆಗಳ ಪ್ರಸಾರ ...ಖ್ಯೆ ಕಡಿಮೆ ಆಗುತ್ತಿದೆ ಎಂದು ಹುಯಿಲೆಬ್ಬಿಸು...ರುವವರು 'ಹೀಗೆ ಕಡಿಮೆ ಆಗಬೇಕಾದರೆ ಕಾರಣ ...ಿಗಳಲ್ಲಿ ಇಂತಹ ಸುಳ್ಳು ವರದಿಗಳು' ಎಂಬುದನ್ನು ...ರಿತರೆ ಒಳಿತು.



ಮೇಳ

ಒಂದು ಪೂರ್ಣ ದಿನ. ಅಂದರೆ ನಿಮಿಷವೂ ಬಿಡುವಿಲ್ಲದ ದಿನ. ಕೆಲವರಿಗೆ ಇಂಥದು ಕಂಡು ಭಯವಾಗುತ್ತದೆ. ಎರಡು ಸಭೆ. ಒಂದು ಭೇಟಿ, ಒಂದು ಸಂದರ್ಶನ, ಭೋಜನಕೂಟ, ಒಂದು ಸಿನಿಮಾ. ಅಂದು ಬುಧವಾರ, ಡಿಸೆಂಬರ್ 21 ಹಿಂದಿನ ರಾತ್ರಿ ಎಲ್ಲವನ್ನೂ ನೆನೆದುಕೊಂಡು ಮಲಗಿದ್ದೆ. ಬೆಂಗಳೂರಿನ ವೈಶಿಷ್ಟ್ಯಗಳಲ್ಲಿ ಒಂದು ರಾತ್ರಿಯೇ ಹೆಚ್ಚು ಚಳಿ. ಕಚೇರಿಯಿಂದ ಉಣ್ಣೆಯ ಟೋಪಿ ಹಾಕಿ, ಸ್ವೆಟರ್ ಎಳೆದುಕೊಂಡು ಹೊರಟಿದ್ದೆ. ಡಿಸೆಂಬರ್‌ನ ಅಂತ್ಯ. ಕ್ರಿಸ್‌ಮಸ್ ಆಗಮಿಸುತ್ತಿರುವ ಕಾಲ. ಕ್ರಿಶ್ಚಿಯನ್ನರ ಮನೆಗಳಲ್ಲಿ ಮನಸ್ಸುಗಳಲ್ಲಿ ಕ್ರಿಸ್ತ ಜನಿಸಿದ ಹಬ್ಬ ಚಳಿಗಾಲದಲ್ಲೂ ಬೆಚ್ಚನೆಯ ನಿರೀಕ್ಷೆ ಮೂಡಿಸುತ್ತಿದೆ; ನಡುರಾತ್ರಿ ಕೂಡ ಅಯ್ಯಪ್ಪನ ಭಕ್ತರು ಅರಚಿಕೊಳ್ಳುತ್ತಿದ್ದಾರೆ. ನಾಳೆಯ ಕೆಲಸಗಳನ್ನು ಲೆಕ್ಕ ಹಾಕಿ ಮಲಗುತ್ತೇನೆ. ಐದಕ್ಕೇ ಎಚ್ಚರ. ಐದೂವರೆವರೆಗೆ ಸಿಗರೇಟ್ ಸೇದುತ್ತಾ, ವಾಕ್‌ಗೆ ಸಿದ್ಧವಾಗುತ್ತ, ತುಂಬು ಬೆಳದಿಂಗಳು ಹಗಲಿನ ಬೆಳಕಿನೊಂದಿಗೆ ಮಿಶ್ರಣಗೊಳ್ಳುವುದನ್ನು ನೋಡುತ್ತೇನೆ. ಚಳಿಯಲ್ಲಿ ನಕ್ಷತ್ರಗಳು ತಣ್ಣಗೆ ಮಿನುಗುತ್ತಿವೆ. ಇಷ್ಟಗಲ ಚಂದ್ರ. ಮೆಲ್ಲಗೆ ಕೆಂಪಾಗುತ್ತಿರುವ ಚಂದ್ರ. ನಡೆಯತೊಡಗಿದರೆ ಹತ್ತು ನಿಮಿಷ ಕಾಲು ಸಲೀಸಾಗಿ ಚಲಿಸುವುದಿಲ್ಲ. ಕ್ರಮೇಣ ಪೂರ್ವಕ್ಕೆ, ನನ್ನ ದೇಹಕ್ಕೆ ಜೀವರಸ ಹರಿಯತೊಡಗುತ್ತದೆ. ಚಳಿಯಲ್ಲೇ ದೇಹ ತೆಳ್ಳಗೆ ಬೆವರುತ್ತದೆ.

ಮರೆಯುವ ಮುನ್ನ




ಪಿ. ಲಂಕೇಶ್ ಜನವರಿ 1, 1989

ಹತ್ತಕ್ಕೇ ಕಲಾಮೇಳದಲ್ಲಿ ಕರ್ನಾಟಕದ ಎಲ್ಲೆಡೆಯಿಂದ, ಭಾರತ ಹಲವು ಕಡೆಯಿಂದ ಬಂದಿರುವ ಚಿತ್ರಕಾರರು. ಎಸ್.ಜಿ. ವಾಸುದೇವ್ ಉದ್ಘಾಟಿಸಬೇಕಾದ ಕಲಾಮೇಳ, ನಾನು ಮಾತಾಡಬೇಕು. ವಾಸು ನನ್ನ ಹಳೆಯ ಗೆಳೆಯ. ಅತ್ಯಂತ ಸೂಕ್ಷ್ಮಮತಿಯ ಚಿತ್ರಕಾರ. ಈಚೆಗೆ ವಾಸು ಪತ್ನಿ ಶಾನವಾಜ್ (ಈಕೆಯೂ ಚಿತ್ರಗಾರ್ತಿ) ಕ್ಯಾನ್ಸರ್‌ನಿಂದ ತೀರಿಕೊಂಡರು. ಈ ಬಗ್ಗೆ ಕೇಳಿದರೆ ಅಸೂಕ್ಷ್ಮ ಅನ್ನಿಸಬಹುದೆಂದು ಆ ಬಗ್ಗೆ ನಾನು ಮೌನ. ವಾಸು ಕಲಾಮೇಳವನ್ನು ಉದ್ಘಾಟಿಸಲು ಭಾಷಣ ಮಾಡುವುದಿಲ್ಲ, ರೇಖಾಚಿತ್ರ ಬರೆದು ಉದ್ಘಾಟಿಸಿದರು. ಗಣೇಶನ ಚಿತ್ರ. ನಿಜಕ್ಕೂ ಚಿತ್ರಕಾರರ ಶಿಬಿರವನ್ನು ಉದ್ಘಾಟಿಸಬಹುದಾದ ಅರ್ಥಪೂರ್ಣ ರೀತಿ. ಹಾಗಾದರೆ ನಾನು ಚಿತ್ರಕಾರರಿಗೆ ಏಕೆ ಭಾಷಣ ಕೊಡಬೇಕು? ನಾನು ಸಾಹಿತಿಯಾಗಿದ್ದರೆ, ಪತ್ರಕರ್ತನಾಗಿದ್ದರೆ... ಇವೆರಡೂ ಭಾಷಣಗಳಲ್ಲ, ಭಾಷಣ ನವಿರಾದದ್ದನ್ನು ವಿವರಿಸಿ ಜಡಗೊಳಿಸುತ್ತದೆ! ಸಾಹಿತಿ ಭಾವನೆಗಳನ್ನು (ಚಿತ್ರಕಾರನಂತೆಯೇ) ನುಡಿಗಳಲ್ಲಿ ರೂಪಿಸುತ್ತಾನೆ; ಆದ್ದರಿಂದ ನಾನು ಭಾಷಣಕ್ಕೆ ಬದಲು ಪದ್ಯ ಓದಿದ್ದರೆ? ಆದರೆ ನನ್ನಲ್ಲಿ ಪದ್ಯ ಇರಲಿಲ್ಲ. ಹೇಳಿದೆ ನಿಮ್ಮ ಚಿತ್ರಗಳು ನಿಮ್ಮ ಆಳದ ನೋವಿನಿಂದ, ನೈತಿಕಪ್ರಜ್ಞೆಯಿಂದ, ಯಾವನೊಬ್ಬ ಅಧಿಕಾರಸ್ಥನ ಮರ್ಜಿಯನ್ನು ಅನುಸರಿಸದೆ ಹೊರಬರಲಿ. ನಿಮ್ಮ ರೇಖೆಗಳು ನಿಮ್ಮ ಕಾಣ್ಕೆಯ ಬಿಸಿಯಲ್ಲಿ ಅರ್ಥಪೂರ್ಣವಾಗಲಿ.'

'ಕಡ್ಡಿಯ ಕ್ರಾಂತಿ'

ನಾನು ಈ ಜಪಾನೀ ಕೃಷಿಕ ಮತ್ತು ಸಂತನ ಬಗ್ಗೆ ಬಹಳ ಕೇಳಿದ್ದೆ. ತೇಜಸ್ವಿ ಈಚೆಗೆ ಒಂದು ಕಾಗದ ಬರೆದು, "ನಾನು ಸಾಮಾನ್ಯವಾಗಿ ನಿಮಗೆ ಇಂಥದನ್ನು ಓದಲೇಬೇಕೆಂದು ಹೇಳುವುದಿಲ್ಲ, ಈಗ ಹೇಳುತ್ತಿದ್ದೇನೆ. ಈ ಜಪಾನಿ ಕೃಷಿಕ ಫುಕುವೋಕಾನ ಪುಸ್ತಕ 'ಒನ್ ಸ್ಟ್ರಾ ರೆವಲೂಶನ್' ತುಂಬ ಚೆನ್ನಾಗಿದೆ. ನೀವು ಓದಲೇಬೇಕು. ನನಗೆ ಯಾರೋ ಕಳಿಸಿದ್ದರು. ಓದಿ ಹಿಂದಿರುಗಿಸಿದೆ. ಬೆಂಗಳೂರಲ್ಲಿ ಈ ಪುಸ್ತಕ ಸಿಗುತ್ತೆ ನೋಡಿ" ಅಂದಿದ್ದರು. ಅಷ್ಟೇ ಅಲ್ಲ, ಮೊನ್ನೆ ನಾನು, ತೇಜಸ್ವಿ ಶಿವಮೊಗ್ಗೆಯ ಹಳ್ಳಿಗಳಲ್ಲಿ ಸುತ್ತುತ್ತಿದ್ದಾಗ ಈ ಪುಸ್ತಕ ಕುರಿತು ಕೊರೆದಿದ್ದರು. ಕೃಷಿಯನ್ನು ತತ್ವ, ಜೀವನಸಾರ್ಥಕ್ಯದ ಮಟ್ಟಕ್ಕೆ ಒಯ್ದಿರುವ ಬಗ್ಗೆ ಹೇಳಿದ್ದರು. ನಾನು ಬೆಂಗಳೂರಿಗೆ ಬಂದು ಈ ಪುಸ್ತಕಕ್ಕಾಗಿ ಹುಡುಕಿದೆ. ಯಾವ ಅಂಗಡಿಯಲ್ಲೂ, ಗೆಳೆಯರಲ್ಲೂ ಇರಲಿಲ್ಲ. 'ಸ್ಟಾಕ್ ಇಲ್ಲ' ಎಂಬ ಉತ್ತರ. ಹಲವು ದಿನ ಕಳೆದವು. ಈ ವಿಚಾರವನ್ನು ನನ್ನ ಗೆಳೆಯ ಮತ್ತು ನಮ್ಮ ಬರಹಗಾರ ಬಿ.ಎ. ಶ್ರೀಧರ್ ಅವರಲ್ಲಿ ತಿಳಿಸಿದೆ. ಅವರಲ್ಲಿ ಈ ಪುಸ್ತಕ ಇತ್ತು, ಥ್ರಿಲ್ ಆಯಿತು. "ಒಂದು ಶರತ್ತು, ನೀವು ನಮ್ಮ ಮನೆಗೆ ಬಂದು ಬಹಳ ದಿನವಾಯಿತು. ವಿರಾಮವೇ ಇಲ್ಲದೆ ಒದ್ದಾಡುತ್ತೀರಿ. ಈ ಸಂಜೆ ಬಂದರೆ ಮಾತ್ರ ಪುಸ್ತಕ" ಎಂದು ತಮಾಷೆ ಮಾಡಿದರು. ಒಪ್ಪಿಕೊಂಡೆ. 'ಒಂದು ಕಡ್ಡಿಯ ಕ್ರಾಂತಿ' ಸಿಕ್ಕಿತು.

ರಾತ್ರಿಯೇ ಓದಬೇಕೆಂದುಕೊಂಡೆ. ಆಗಲಿಲ್ಲ. ಅವತ್ತು ನಾನು ಬಹಳ ದಿನದಿಂದ ನೋಡಬೇಕೆಂದಿದ್ದ ಚಲನಚಿತ್ರವೊಂದು ಟಿ.ವಿ.ಯಲ್ಲಿ ಇತ್ತು.



ಘಟಕ್

ಈತನ ಬಗ್ಗೆ ನಮ್ಮ ನಿರ್ದೇಶಕ ಕೆ.ಎಂ. ಶಂಕರಪ್ಪ ಬಹಳ ಹೇಳಿದ್ದರು. ನಾನೂ ಬಹಳ ಕೇಳಿದ್ದೆ. ರುತ್ವಿಕ ಘಟಕ್ ಎಂಬ ನಿರ್ದೇಶಕ ಹೇಗೆ ಸತ್ಯಜಿತ್ ರಾಯ್‌ಗಿಂತ ಮೇಲು, ಈತನ ಅಭಿರುಚಿ ಹೇಗೆ ವಾಸ್ತವತೆಯಿಂದ ಕೂಡಿದೆ ಎಂದೆಲ್ಲ ಹೇಳಿದ್ದರು. ಆದ್ದರಿಂದ ಬುಧವಾರ ಸಂಜೆ (ಘಟಕ್‌ರ ಅತ್ಯಂತ ಯಶಸ್ವೀ ಚಿತ್ರ) 'ಮೇಘ ಡಾಕಾ ತಾರಾ' ಚಿತ್ರವನ್ನ ನೋಡಲೇಬೇಕಿತ್ತು. ರಾತ್ರಿ 10-50 ನಾನು ನಿದ್ರೆಯಲ್ಲಿರುವ ಕಾಲ. ಆದರೂ ಸ್ವಲ್ಪ ಹೊತ್ತಾದರೂ ನೋಡಬಹುದೆಂದು ಕೂತೆ. ಇದೊಂದು ಅದ್ಭುತ ಚಿತ್ರ. ಸಾಮಾನ್ಯ ಕಲಾವಿದನಿಗೂ ಪ್ರತಿಭಾನ್ವಿತ ಕಲಾವಿದನಿಗೂ ಒಂದು ಮುಖ್ಯ ವ್ಯತ್ಯಾಸವಿರುತ್ತದೆ. ಪ್ರತಿಭಾವಂತ ದೇಶಾವರಿಗೆ ಇಳಿಯುವುದಿಲ್ಲ; ಈತನ ಘೋರ ಅನುಭವ, ತಮಾಷೆಯ ಅನುಭವ ಕೂಡ ವಜ್ರದ ಕಠೋರತೆ, ಕುಸುಮದ ಸ್ವಚ್ಛತೆ ಮತ್ತು ಕೋಮಲತೆ ಪಡೆದಿರುತ್ತದೆ. ಅಂಥ ಕಲಾವಿದ ಘಟಕ್. ಕತೆ ಮೇಲುನೋಟಕ್ಕೆ ಸಾಮಾನ್ಯ; ತನ್ನ ಕುಟುಂಬ ಒಂದು ಹಂತಕ್ಕೆ ಬರುವುದಕ್ಕಾಗಿ ಸರ್ವತ್ಯಾಗವನ್ನು ಮಾಡಿ ಕೊನೆಯಲ್ಲಿ 'ನಾನು ಪ್ರತಿಭಟಿಸಬೇಕಿತ್ತು, ಸ್ವಲ್ಪವಾದರೂ ಸ್ವಾರ್ಥಿಯಾಗಬೇಕಿತ್ತು' ಎಂದು ಕಂಡುಕೊಳ್ಳುವ ಹುಡುಗಿಯ ಕತೆ. ಆದರೆ ಘಟಕ್ ಇದನ್ನು ಸಿನಿಮಾ ಮಾಧ್ಯಮದಲ್ಲಿ ಹಿಡಿದಿರುವ ರೀತಿ ಅದ್ಭುತ. ರೈಲು, ಅಡುಗೆ ಮನೆಯ ಗದ್ದಲ, ಪ್ರಕೃತಿಯ ಶಬ್ದಗಳೆಲ್ಲ ಇಲ್ಲಿ ನೆರವಾಗುತ್ತದೆ; ಸಂಗೀತ ಕತೆಯ ಹಂದರವಾಗಿ ಕುಮ್ಮಕ್ಕು ಕೊಡುತ್ತವೆ; ಜನ ಒಳ್ಳೆಯವರು, ಕೆಟ್ಟವರು ಎಂಬ ಸರಳತೆಯನ್ನು ಮೀರಿ ಜೀವನದ ಜಟಿಲತೆ ವ್ಯಕ್ತವಾಗುತ್ತದೆ. ಸಿನಿಮಾ ಕೇವಲ ಕತೆಯಲ್ಲ, ಕೇವಲ ಹಾಡಲ್ಲ, ಕೇವಲ ಮಾತಲ್ಲ- ಒಂದು ಗ್ರಹಿಕೆಯ ವಿಶಿಷ್ಟ ಕ್ರಮ ಎಂಬುದು ತಿಳಿಯುತ್ತದೆ.



ಆಮೇಲೆ ಈ ಮಹತ್ವದ ನಿರ್ದೇಶಕ ಘಟಕ್ ಇದಕ್ಕಿಂಥ ಸಂಕೀರ್ಣವಾದದ್ದು ಹೇಳಲು ಪ್ರಯತ್ನಿಸಿದರು. ಜನಕ್ಕೆ ಅರ್ಥವಾಗಲಿಲ್ಲ. ಘಟಕ್‌ಗೆ ಸಿನಿಮಾದ ಆರ್ಥಿಕ ಮುಖ, ಮೂಲಭೂತ 'ಚಿಲ್ಲರೆ' ಗುಣ ಗೊತ್ತಿರಲಿಲ್ಲ. ಒಬ್ಬ ಬರ್ಗ್‌ಮನ್, ಒಬ್ಬ ಫೆಲಿನಿಯಂತೆ ಸದಾ ಇದ್ದು ಬಿಡದೆ ಒಬ್ಬ ಹಿಚ್‌ಕಾಕ್‌ನಂತೆ ಕೂಡ ಚಿತ್ರ ಮಾಡಬೇಕಾಗುತ್ತದೆ ಎಂಬುದು ಗೊತ್ತಿರಲಿಲ್ಲ. ಜನರ ಜಡತ್ವದಿಂದ ಘಟಕ್ ಬೇಸರಗೊಂಡರು. ಮದ್ಯಪಾನದಲ್ಲಿ ಮುಳುಗಿದರು. ಪಾಠ ಹೇಳುತ್ತಾ ಮದ್ಯ ಕುಡಿಯುತ್ತ ಸಿಟ್ಟು ಮಾಡುತ್ತಾ ಪ್ರೀತಿಯನ್ನು ತೋರುತ್ತಾ ತೀರಿಕೊಂಡರು.

*****

ಈ ಚಿತ್ರ ಟಿ.ವಿ.ಯಲ್ಲಿ ಮುಗಿದಾಗ ರಾತ್ರಿ ಒಂದಕ್ಕೆ ಹತ್ತಿರ. ಬುಧವಾರ ಪೂರ್ಣಗೊಂಡಿತ್ತು. 'ಒನ್ ಸ್ಟ್ರಾ ರೆವಲೂಶನ್' (ಒಂದು ಕಡ್ಡಿಯ ಕ್ರಾಂತಿ) ಪುಸ್ತಕವನ್ನು ಹತ್ತಿರದಲ್ಲೇ ಇಟ್ಟುಕೊಂಡು ಮಲಗಿದೆ.

ಭೈರಪ್ಪ, ಅನಂತಮೂರ್ತಿ, ಚಂಪಾ-ಯಾರು ಹಿತವರು ಈ ಮೂವರೊಳಗೆ?

ಮಂಜಾಲಿ ಗುರುರಾಜಚಾರು, ಬಳ್ಳಾರಿ
ರಾಜಕೀಯದಲ್ಲಿ ಹುಲಿ ಹಿಂಡುವುದು ಅಂದರೆ ಏನು?
◆ ಪದ್ಮನಾಭನಗರದ ಹುಳಿ ಹೆಂಡ ಕೇಳಿದರೆ ವಾಸಿ.

ಡಿ.ಎಲ್.ನಾಗರಾಜ್, ಹರಪನಹಳ್ಳಿ
ಸಿದ್ದು ಕಾಂಗ್ರೆಸ್ ಸೇರಿ ಪೆದ್ದನಾಗುವ ಬದಲು ಬಿಎಸ್‌ಪಿ ಸಂಘಟಿಸಿದ್ದರೆ?
◆ಬಹುಜನಕ್ಕೆ ಭೋಜನವಾದರೂ ಸಿಗುತ್ತಿತ್ತು.

ಪಿ.ಎಸ್.ಶ್ರೀವತ್ಸ, ಬೆಂಗಳೂರು
ರೇಣುಕಾಚಾರ್ಯನನ್ನು ಸಸ್ಪೆಂಡ್ ಮಾಡಿದ್ರೆ ಆದರೆ ಮತ್ತಿನ್ನೆಷ್ಟು ಚೆಡ್ಡಿಗಳು ಸಿಕ್ಕಿಬಿದ್ದಾರೆಂಬ ಭೀತಿ?
◆ ಚೆಡ್ಡಿಗಳ ಲಾಡಿ ಗುಟ್ಟು ಈಗಲಾದರೂ ತಿಳಿಯಿತೆ.

ಕೆ. ಕೊಟ್ರೇಶ, ಹರಪನಹಳ್ಳಿ
ಕುಮಾರಸ್ವಾಮಿ-ರಾಧಿಕಾ ಸಂಗ, ಯಡ್ಡಿ-ಕರಂದ್ಲಾಜೆ ಸಂಗ, ರೇಣುಕಾಚಾರ್ಯ-ಜಯಲಕ್ಷ್ಮಿ ಸಂಗ, ದೇವ್ರು?
◆ ನಾದಿನಿ ಸೇವೆ.

ಎಂ. ಶಿವಸ್ವಾಮಿ, ಬೆಂಗಳೂರು
ಜೆಡಿಎಸ್ ತಂತ್ರಕ್ಕೆ, ಬಿಜೆಪಿಯ ಮಂತ್ರ ಫಲಕಾರಿಯಾಗುವುದೆ?
◆ರಾಮಚಂದ್ರಾಪುರದಲ್ಲಿ ಫಲಕೊಟ್ಟಿದೆಯಂತೆ.

ರವೀಂದ್ರನಾಥ ಶಿ.ಯಡಹಳ್ಳಿ, ಇಲಕಲ್ಲ
ನಮ್ಮ ಮುಖ್ಯಮಂತ್ರಿಗಳು ಅಬ್ಬರದ ಪ್ರಚಾರ ನೀಡಿ ಗ್ರಾಮಗಳಿಗೆ ತೆರಳುವ ಬದಲು ಮಿಂಚಿನ ಸಂಚಾರ ಮಾಡಿದರೆ ಹೇಗಿರುತ್ತೆ?
◆ ಬರುವ ಮಳೆಯೂ ಹೋಗುತ್ತಂತೆ.

ಮಂಚಾಲಿ ವಾಗೀಶಚಾರು, ಬಿಜಾಪುರ
ಸನ್ಯಾಸಿ ಸನ್ಯಾಸಿ ಸೇರಿದರೆ ಬೂದಿ, ಮಂತ್ರಿ ಮಂತ್ರಿ ಸೇರಿದರೆ ಖಾದಿ, ಹೆಣ್ಣು ಹೆಣ್ಣು ಸೇರಿದರೆ ?
◆ ಫೈರ್.

ಕಣ್ಣಾ ಮುಚ್ಚಾಲೆ

ಕಾಳೀಹುಂಡಿ ಶಿವಕುಮಾರ್, ಮೈಸೂರು
ಸುಂಟರಗಾಳಿಗೂ ಬಿರುಗಾಳಿಗೂ ವ್ಯತ್ಯಾಸವೇನು?
◆ ಸುಂಟರಗಾಳಿ ಸುತ್ತುತ್ತೆ ಬಿರುಗಾಳಿ ಬೀಳಿಸುತ್ತೆ.

ಡಿ.ಎಲ್. ಸುರೇಶ್, ಹರಪನಹಳ್ಳಿ
ಎಸ್. ಎಲ್. ಭೈರಿ ಆವರಣದಿಂದ ಬೆತ್ತಲೆಯಾಗಿದ್ದಾರಲ್ಲಾ?
◆ ಅನಂತಮೂರ್ತಿ ಚೆಡ್ಡಿ ಕಿತ್ತಿದ್ದರಿಂದ.

ಅಕ್ಕಿ ಕೊಟ್ರೇಶ, ಉಪನಾಯಕನಹಳ್ಳಿ
ಬೆಳಿಗ್ಗೆ ಎದ್ದು ಬೇವಿನಮರ ನೋಡಿದರೆ ಒಳ್ಳೆದಾಗುತ್ತದಂತೆ ನಿಜವೆ?
◆ ಹುಣಸೆಮರ ನೋಡಿದರೆ ಇನ್ನೂ ಒಳ್ಳೆಯ ದಂತೆ.

ಅಕ್ಕಿ ಬಸವೇಶ, ಉಪನಾಯಕನಹಳ್ಳಿ
ಬಸವಣ್ಣನ ಜಾತಿಯನ್ನು ಕೆದಕುತ್ತಿರುವುದು ಯಾಕೆ?
◆ ಉಗ್ರ ಜಾತಿವಾದಿಗಳನ್ನು ಪತ್ತೆ ಹಚ್ಚಲಿಕ್ಕೆ.

ಸತ್ಯ, ಬೆಂಗಳೂರು
ಉತ್ತರ ಪ್ರದೇಶದಲ್ಲಿ ಮಾಯಾವತಿಯ ಕೃಪಾಕಟಾಕ್ಷದಿಂದ ಬ್ರಾಹ್ಮಣರು ಗೆದ್ದು ಬಂದಂತೆ ಇಲ್ಲಿಯೂ ಆದರೆ ಗೌಡರ ಮತ್ತು ಲಿಂಗಾಯತರ ಗತಿ?
◆ ಇಲ್ಲಿನ ಬ್ರಾಗಳು ಥೇಟ್ ಲಿಂಗಾಯತ ಒಕ್ಕಲಿಗರಂತಿವೆ.

ಶಿವಕುಮಾರ್, ಸುರಪೂರ
ರಾಜ್ಯದ ಸಮಸ್ಯೆಗಳನ್ನು ಪರಿಹರಿಸಲು ಇಪ್ಪತ್ತು ತಿಂಗಳು ಸಾಲದಂತೆ ಕುಮಾರಸ್ವಾಮಿಗೆ?
◆ ಅದಕ್ಕೆ ಇನ್ನಿಷ್ಟತ್ತು ಕೇಳುತ್ತಿರುವುದು.

ಕೆ.ಸಿ. ರತೀಶ್, ಬೆಂಗಳೂರು
ಮಂತ್ರಕ್ಕೆ ಮಾವಿನಕಾಯಿ ಉದುರಲ್ಲ, ತಂತ್ರಕ್ಕೆ?
◆ ಪದ್ಮನಾಭನಗರದ ಮಾಂತ್ರಿಕನ ತಂತ್ರಕ್ಕೆ ಸರಕಾರಗಳೇ ಉರುಳುತ್ತವೆ.



ಬಹುಮಾನಿತ ಪ್ರಶ್ನೆ

ಅಳ್ಳಿಮಾರನಹಳ್ಳಿ ಹರೀಶ್, ಗಾಣಾಳು
ಭೈರಪ್ಪ, ಅನಂತಮೂರ್ತಿ, ಚಂಪಾ-ಯಾರು ಹಿತವರು ಈ ಮೂವರೊಳಗೆ?
◆ ಚೆಡ್ಡಿ, ಪಂಚೆ, ಕಚ್ಚೆ ಇವುಗಳಲ್ಲಿ ನಿಮಗೆ ಯಾವುದು ಇಷ್ಟ?

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಅಂದು ಕಾವೇರಿದ ಕಾವೇರಿ, ಇಂದು?
◆ ಕಾಲುಮುರಿದ ಕಾರ್ಯಕರ್ತರು.

ಅಬ್ದುಲ್ ರಜಾಕ್, ದೇವದುರ್ಗ
ಮಳೆ ಆದರೆ ಬೆಳೆ ಆಗುತ್ತೆ, ಮದುವೆ ಆದರೆ?
◆ ಬೆಳೆ ನಾಶ.

ಅಮರಯ್ಯಾ, ಶೋರಾಪೂರ
ಯಡಿಯೂರಪ್ಪ ಹೇಳಿದ್ದಾರೆ ಹಣೆಬರಹ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವಂತೆ?
◆ ಶೋಭಾ ವಿಷಯದಲ್ಲೂ ಹಾಗೆ ಹೇಳುತ್ತಿದ್ದಾರೆ.

ಕೆ.ಶ್ರೀನಿವಾಸ್, ಮಂಡ್ಯ
ಕುಮಾರಸ್ವಾಮಿ ಇಂಗ್ಲಿಷ್ ಕಲಿಯುತ್ತಿದ್ದಾರಂತೆ, ನಿಜವೇ?
◆ ದಿಕೆಶಿ ಸಂಸ್ಕೃತ ಕಲಿಯುವ ಸುದ್ದಿ ಕೇಳಿ.

ತೂರಗಲ್ಲ ಉಮೇಶ್, ರಾಮದುರ್ಗ
ಮಣ್ಣಿನ ಮಗ ಗೋವಾದಲ್ಲಿ ಗೆದ್ದಿದ್ದರೆ ಏನಾಗುತ್ತಿತ್ತು?
◆ ಕುಮಾರಣ್ಣ ರೆಸಾರ್ಟ್ ಕೊಳ್ಳುತ್ತಿದ್ದ.

ವಾರದ ಪ್ರಶ್ನೆ:
ಬಸವಣ್ಣ ಮಾದಿಗನೆಂದರೆ ವಿರಕ್ತಸ್ವಾಮಿಗಳಿಗೆ ಉರಿ ಹತ್ತಿರುವುದೇಕೆ?

ಜೂನ್ 6ರ ಸಂಚಿಕೆಯ ನಮ್ಮ ಪ್ರಶ್ನೆ: ರೇಣುಕಾಚಾರ್ಯನನ್ನು ಚೆಡ್ಡಿಗಳು ಯಾಕೆ ಇನ್ನೂ ಸಸ್ಪೆಂಡ್ ಮಾಡಿಲ್ಲ?
ನಿಮ್ಮ ಉತ್ತರ: ಯಡ್ಡಿಯ ಚೆಡ್ಡಿ ಉದುರುತ್ತೆ ಎಂಬ ಭಯ!


ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕುಂತೂರು ಚಂದ್ರಪ್ಪ, ಮಾಲೂರು

ಸಮಾಜದ ಸ್ವಾಸ್ಥ ಕೆಡಿಸುವ 'ಆವರಣ'

ಕಾದಂಬರಿಕಾರ ಎಸ್.ಎಲ್. ಭೈರಪ್ಪನವರ 'ಆವರಣ' ಕೃತಿಯನ್ನು ಕುರಿತು ಸಂಶೋಧಕ ಡಾ. ಚಿದಾನಂದಮೂರ್ತಿ ಅವರು "ಇಡೀ ಭಾರತದ ಜನರನ್ನು ಎಚ್ಚರಿಸಿ ಸತ್ಯದ ಅರಿವು ಮೂಡಿಸುವ ಕೃತಿ ಇದಾಗಿದೆ" ಎಂದು ಹೇಳಿದ್ದಾರೆ. ಅವರ ಹೇಳಿಕೆಗೆ ಇದು ಒಂದು ಪ್ರತಿಕ್ರಿಯೆ.

ಇತಿಹಾಸಕಾರರ ವೈಯಕ್ತಿಕ ದೃಷ್ಟಿಕೋನಕ್ಕೆ ತಕ್ಕಂತೆ ಅರ್ಧಸತ್ಯದಿಂದ ರಚನೆಯಾಗಿರುವ ಭರತಖಂಡದ ಚರಿತ್ರೆಯಲ್ಲಿ ಭೈರಪ್ಪನವರು ತಮಗೆ ಆಪ್ಯಾಯಮಾನವಾಗಿ ಕಂಡುಬಂದ ಕೆಲವು ಸಂಗತಿಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿರುವ ಈ ಕೃತಿಯು ಕನ್ನಡ ಸಾಹಿತ್ಯ ಪರಂಪರೆಗೆ ದೊಡ್ಡ ಹಾನಿಯನ್ನುಂಟು ಮಾಡಿದೆ.



ಕನ್ನಡದ ಮೊದಲ ಕೃತಿ 'ಕವಿರಾಜ ಮಾರ್ಗ'ದಲ್ಲಿ "ಮಾನವ ಜೀವನದಲ್ಲಿ ಶ್ರೇಷ್ಠವಾದ ಸಂಪತ್ತು ಯಾವುದು?" ಎಂಬ ಪ್ರಶ್ನೆಗೆ "ಅನ್ಯ ಧರ್ಮದವರೊಡನೆ ಸಹನೆಯಿಂದ ಜೊತೆಗೂಡಿ ಬಾಳುವುದು" ಎಂಬ ಉತ್ತರವಿದೆ. ಜೈನ ಧರ್ಮದ ನೆಲೆಯಲ್ಲಿ ನಿಂತು 'ಆದಿಪುರಾಣ'ವನ್ನು ರಚಿಸಿದ ಕನ್ನಡದ ಆದಿಕವಿ ಮತ್ತು ಮಹಾಕವಿ ಪಂಪನು "ಮಾನವ ಜಾತಿ ತಾನೊಂದೆ ವಲಂ" ಎಂದು ಸಾರಿದ್ದಾನೆ. ಸಮಾಜ ಸುಧಾರಕ ಬಸವಣ್ಣನವರು "ನೆಲನೊಂದೇ ಹೊಲಗೇರಿ-ಶಿವಾಲಯಕ್ಕೆ" ಮತ್ತು ಜನಪದರ ಪ್ರತಿನಿಧಿ ಸರ್ವಜ್ಞನು "ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ" ಎಂಬ ನುಡಿಗಳ ಮೂಲಕ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿರುವ ಜಾತಿಗಳ ಮೇಲು-ಕೀಳಿನ ಭಾವನೆಗಳನ್ನು ಪ್ರಶ್ನಿಸುತ್ತಾ, ಜನಮನದಲ್ಲಿ ಸಮಾನತೆಯ ಅರಿವನ್ನು ಮೂಡಿಸಲು ಪ್ರಯತ್ನಿಸಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ಕುವೆಂಪು ಅವರ ವಿಶ್ವಮಾನವ ಪರಿಕಲ್ಪನೆಯು ಸಾಮಾಜಿಕ ಸಂಸ್ಥೆಗಳಾದ ಜಾತಿ-ಮತ-ಭಾಷೆ-ಪ್ರಾಂತ್ಯಗಳಿಂದ ಉಂಟಾಗುವ ಭ್ರಮೆ ಮತ್ತು ವ್ಯಾಮೋಹಗಳನ್ನು ನಿವಾರಿಸಿಕೊಂಡು, ಎಲ್ಲರೂ ಕೇವಲ ಮನುಷ್ಯರಾಗಿ ಬಾಳಬೇಕಾದ ಆದರ್ಶದ ಕಡೆಗೆ ಬೆರಳು ಮಾಡಿ ತೋರಿಸುತ್ತದೆ.

ಹೀಗೆ ಒಂದೂವರೆ ಸಾವಿರ ವರ್ಷದ ಇತಿಹಾಸವುಳ್ಳ ಕನ್ನಡ ಸಾಹಿತ್ಯ ಪರಂಪರೆಯಲ್ಲಿ "ಹತ್ತಾರು ಬಗೆಯ ಧರ್ಮಗಳಿಂದ ಮತ್ತು ನೂರೆಂಟು ಬಗೆಯ ಜಾತಿಗಳಿಂದ ಒಡೆದುಹೋಗಿರುವ ಜನರ ಮನಸ್ಸನ್ನು ಪರಸ್ಪರ ಪ್ರೀತಿ, ಗೌರವ ಮತ್ತು ಸಮಾನತೆಯ ನೆಲೆಯಲ್ಲಿ ಮತ್ತೆ ಒಂದುಗೂಡಿಸುವ ಆಶಯ" ನಿರಂತರವಾಗಿ ಕಂಡುಬರುತ್ತಿದೆ.

ಎಸ್.ಎಲ್. ಭೈರಪ್ಪನವರ 'ಆವರಣ' ಕಾದಂಬರಿಯು ಇಂತಹ ಒಳ್ಳೆಯ ಪರಂಪರೆಗೆ ತೀವ್ರವಾದ ಹಾನಿಯನ್ನು ಉಂಟು ಮಾಡುವ ರೀತಿಯಲ್ಲಿ ರಚನೆಗೊಂಡಿದೆ. ಈ ಕಾದಂಬರಿಯನ್ನು ಓದುವ ಯಾವುದೇ ಭಾರತೀಯನ ಮನದಲ್ಲಿ ಅನ್ಯ ಧರ್ಮದವರ ಬಗ್ಗೆ ಅನುಮಾನ, ಆತಂಕ ಮತ್ತು ಆಕ್ರೋಶದ ಭಾವನೆಗಳು ಕೆರಳುತ್ತವೆಯೇ ಹೊರತು ಖಂಡಿತವಾಗಿಯೂ ಯಾವುದೇ ವಿಧದಲ್ಲಿಯೂ ಸತ್ಯದ ಅರಿವಾಗುವುದಿಲ್ಲ.

-ಸಿ.ಪಿ. ನಾಗರಾಜ,
ಬೆಂಗಳೂರು

ಹೊಗಳಿಕೆ ತೆಗಳಿಕೆ

ಜೂನ್ 6ರ 'ಲಂಕೇಶ್'ನಲ್ಲಿ ನೈತಿಕತೆ, ಸಾಮಾಜಿಕ ಪ್ರಜ್ಞೆ ಇಲ್ಲದ ಹೊನ್ನಾಳಿ ಶಾಸಕರ 'ಸೆಕ್ಸ್ ಹಗರಣ' ವರದಿ ಮಾಡಿ, ಕ್ಷೇತ್ರದ ಅಭಿವೃದ್ಧಿ ಬಗ್ಗೆ ಯೋಚಿಸದೆ ಹಣ-ಅಧಿಕಾರ ಮದದಿಂದ ಕೊಬ್ಬಿದ ಚೆಡ್ಡಿಗಳಿಗೆ ಒಳ್ಳೆಯ ಹೊಡೆತವನ್ನೇ ನೀಡಿದೆ.

ಇಲ್ಲಿ ಯೋಚಿಸಬೇಕಾದ ವಿಚಾರ ತನ್ನ ಹುಟ್ಟುಹಬ್ಬವನ್ನು ನೂರಾರು ಕುರಿ-ಕೋಳಿ ಬಲಿಕೊಟ್ಟು, ಜನಜಾತ್ರೆಯೊಂದಿಗೆ ಆಚರಿಸುವ ಕೂಡ್ಲಿಗೆ ಶಾಸಕ ಅನಿಲ್‌ಲಾಡ್‌ರಂತಹ ಧ(ಗ)ಣಿಗಳ ಹಣ ಇಂತಹ ಹಗರಣಗಳಲ್ಲಿ ಚಲಾವಣೆಯಾಗುವುದರ ಬಗ್ಗೆ. ಹಿಂದೆಲ್ಲಾ ಶಾಸಕರ ಟೂರ್‌ಗೆ, ದೊರೆಯ ಪ್ರೇಯಸಿಗೆ-ಹೀಗೆ ಹಲವು ಕಡೆ ಗಣಿದಾರರ, ಉದ್ಯಮಿಗಳ ಹಣ ಚಲಾವಣೆಯಾಗಿದೆ. ಲಾಭವಿಲ್ಲದೆ ಯಾರೋ ಲಕ್ಷಾಂತರ ಹಣ ವ್ಯಯಿಸಲ್ಲ. ಹೀಗಾಗಿ ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಸರ್ಕಾರಗಳು ಗಣಿ ಉದ್ಯಮಕ್ಕೆ ನೆರವಾಗುವುದರ ಬಗ್ಗೆ ತನಿಖೆಯಾಗಲಿ.


-ದಿ.ಎಲ್. ಮಂಜು,
ಕೇರಳ

'ರೇಣುಕಾ ಮಹಾತ್ಮೆ'ಯನ್ನು ಚೆನ್ನಾಗಿ ಚಿತ್ರಿಸಿದ್ದೀರಿ (ಬರೆದಿದ್ದೀರಿ). ಬಹಳಷ್ಟು ವಾರಪತ್ರಿಕೆಗಳಲ್ಲಿ ರೇಣುಕಾ-ಜಯಲಕ್ಷ್ಮಿ ಫೋಟೋಗಳನ್ನು ಮುಖಪುಟದಲ್ಲಿ ಚಿತ್ರಿಸಿಕೊಂಡು ಒಳ್ಳೆ ಜಾಹೀರಾತು ಗಿಟ್ಟಿಸಿಕೊಂಡು ಜನರನ್ನು ಆ ಪತ್ರಿಕೆಯತ್ತ ಮುಖ ಮಾಡುವಂತೆ ಮಾಡಿ ತಮ್ಮ ನಗ್ನತೆಯನ್ನು ಪ್ರದರ್ಶಿಸಿವೆ.

ಆದರೆ ತಮ್ಮ ಪತ್ರಿಕೆಯಲ್ಲಿ ಮುಖಪುಟದಲ್ಲಿ ಆ ತರಹ ಅಶ್ಲೀಲ ಫೋಟೋಗಳು ಇಲ್ಲ. (ಒಳಪುಟ 10ರಲ್ಲಿ ಎರಡು ಫೋಟೋಗಳನ್ನು ಬಿಟ್ಟು). ಇದರಿಂದ ಅರ್ಥವಾಗುವುದೆಂದರೆ, ತಮ್ಮ ಪತ್ರಿಕೆಯ ಆದರ್ಶ, ಓದುಗರ ನಂಬಿಕೆ ಸಮಾಜಕ್ಕೆ ಹಿಡಿದ ಕನ್ನಡಿಯಂತಿದೆ. ಬಹುಶಃ ಇಂತಹ ಆದರ್ಶವಾದಿ, ಮಾನವತಾವಾದಿತನವೇ ನಮ್ಮನ್ನು ನಿಮ್ಮ ಪತ್ರಿಕೆ ಸೆರೆ ಹಿಡಿದಿದೆ.

ತಮ್ಮ ಪತ್ರಿಕೆ ಕೇವಲ ದುಡ್ಡಿಗಾಗಿ ಅಲ್ಲ, ಆದರ್ಶ ಸಮಾಜದ ಆಗುಹೋಗುಗಳನ್ನು ಸರಿಯಾಗಿ ವಿಶ್ಲೇಷಿಸಿ ಜನರ ಕಣ್ಣನ್ನು ತೆರೆಸುವಲ್ಲಿ ಪಾತ್ರರಾಗುತ್ತಿದ್ದೀರಿ, ತಮ್ಮ ಸಿಬ್ಬಂದಿ ವರ್ಗಕ್ಕೆ ನಮ್ಮೆಲ್ಲರ ಕುಟುಂಬ ಸದಸ್ಯರ ಧನ್ಯವಾದಗಳು.

-ದಿ.ಎಲ್. ನಾಗರಾಜ್,
ಹರಪನಹಳ್ಳಿ



ಕಳೆದ ವಾರ ಪ್ರಕಟವಾದ 'ಮುಸ್ಲಿಮರನ್ನು ಮುಗಿಸಲು ಕೋ-ಜಾ ಸಂಚು!' ಲೇಖನವು ಉತ್ತಮವಾಗಿ ಮೂಡಿಬಂದಿದೆ. ಅಧಿಕಾರವನ್ನು ಉಳಿಸಿಕೊಳ್ಳಲು ಎಂತಹ ಕೆಲಸಕ್ಕೂ ಕೈ ಹಾಕುತ್ತಾರೆ ಎಂಬುದನ್ನು ಲೇಖನದಲ್ಲಿ ತಿಳಿಸಿರುವಂತೆ ನಾವು ಕಾಣಬಹುದು.

ಜಾತ್ಯತೀತ ಭಾರತ ದೇಶದಲ್ಲಿ ಜಾತ್ಯತೀತ ಎಂಬ ಹೆಸರನ್ನು ಇಟ್ಟುಕೊಂಡ ಈ ರೀತಿಯಾದ ಕೆಟ್ಟ ಕೆಲಸಕ್ಕೆ (ಮುಸ್ಲಿಮರನ್ನು ಕಡೆಗಣಿಸುವ ಮೂಲಕ) ತೊಡಗಿರುವುದು ನಿಜವಾಗಲೂ ಖಂಡನಾರ್ಹ.

ತಮ್ಮ ಸ್ವಾರ್ಥಕ್ಕಾಗಿ ಬಳಸಲ್ಪಡುವ ಇಂತಹ ತಂತ್ರಗಳು ಯಾರ ಹಿತಾಸಕ್ತಿಗಾಗಿ? ಎಂಬುವಂತಹ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಉಳ್ಳಾಲದಲ್ಲಿ ನಡೆದ ಚುನಾವಣೆಯ ಫಲಿತಾಂಶ ತಂತ್ರ-ಕುತಂತ್ರಗಳನ್ನು ತಲೆಕಳಗೆ ಮಾಡಿರುವುದು ಮತದಾರಲ್ಲಿರುವ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತದೆ.

-ನವೀನ್ ಕುಮಾರ್,
ಉಳ್ಳಾಲ



ಕರ್ನಾಟಕದ 'ಮಹಾತ್ಮ' ಆಗಿದ್ದ ಅಪ್ಪಾಜಿ

ಅಪ್ಪಾಜಿ ಬರೀ ನಟನಲ್ಲ, ಸಾಂಸ್ಕೃತಿಕ ರಾಯಭಾರಿಯಲ್ಲ. ಅವರು ಈ ಸಮಾಜದ ಅನೇಕಾನೇಕ ಜನರಿಗೆ ಒಬ್ಬ ಆದರ್ಶ ಪುರುಷನಾಗಿ ಕಂಡಿದ್ದಾರೆಂಬ ಕಾರಣಕ್ಕಾಗಿ ನಾನು ಅಪ್ಪಾಜಿಯನ್ನು 'ಕರ್ನಾಟಕದ ಮಹಾತ್ಮ' ಎಂದು ಹೇಳಲು ಸಂಕೋಚಪಟ್ಟರೂ ಮೊದಲ ಬಾರಿಗೆ ಈ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ನಾನು ಕಂಠೀರವ ಸ್ಟೇಡಿಯಂಗೆ ಅಪ್ಪಾಜಿಯ ಪಾರ್ಥಿವ ಶರೀರವನ್ನು ನೋಡಲು ಹೋದಾಗ ಪೊಲೀಸ್ ವ್ಯಾನ್‌ನಲ್ಲಿ ಕದ್ದುಮುಚ್ಚಿ ಕುಳಿತು, ಆನಂತರ ಕಂಠೀರವ ಸ್ಟೇಡಿಯಂನಿಂದ ಕಂಠೀರವ ಸ್ಟುಡಿಯೋಗೆ ಅಪ್ಪಾಜಿಯ ಅಂತಿಮಯಾತ್ರೆಯೊಂದಿಗೆ ಸಾಗಿದಾಗ ತೆರೆದ ಜೀಪಿನ ಮೇಲೆ ನಿಂತು ಅವರ ಅಭಿಮಾನಿಗಳ ದುಃಖ ಮತ್ತು ಹುಚ್ಚು ಪ್ರೀತಿಯನ್ನು ಕಣ್ಣಾರೆ ನೋಡಿ ಭಾವುಕನಾದೆ.

ಅದನ್ನೆಲ್ಲ ನೋಡಿದಾಗ ನನಗೆ ಅನ್ನಿಸಿದ್ದು ಇಷ್ಟೇ: ನಾವು ನಮ್ಮ ಕುಟುಂಬದ ಮುಖ್ಯಸ್ಥನನ್ನು ಕಳೆದುಕೊಂಡಿಲ್ಲ, ಆದರ ಬದಲಿಗೆ ಜನ 'ಕರ್ನಾಟಕದ ಮುತ್ತನ್ನು' ಕಳೆದುಕೊಂಡಿದ್ದಾರೆ ಎಂದು. ಒಬ್ಬ ವ್ಯಕ್ತಿಯ ಅಗಲಿಕೆಯಿಂದ ಅಷ್ಟೊಂದು ಜನ ಕಣ್ಣೀರು ಸುರಿಸಿದ್ದನ್ನು ನಾನು ನೋಡಿದ್ದು ಅದೇ ಮೊದಲ ಬಾರಿ.

ಹಿಂದಿನ ದಿನ ಬೆಂಗಳೂರಿನಾದ್ಯಂತ ಗಲಭೆಗಳು ನಡೆದಿದ್ದವು. ಟಿ.ವಿ ಮತ್ತು ಪತ್ರಿಕೆಗಳು ಅವುಗಳ ಬಗ್ಗೆ ವಿವರವಾಗಿ ವರದಿ ಮಾಡಿದ್ದವು. ಆದರೂ ಅಷ್ಟೊಂದು ಜನ ತಮ್ಮ ಭದ್ರತೆಯನ್ನು ನಿರ್ಲಕ್ಷಿಸಿ ಅಪ್ಪಾಜಿಯ ಅಂತಿಮಯಾತ್ರೆಯಲ್ಲಿ ಭಾಗವಹಿಸಲು ಬಂದದ್ದನ್ನು, ಮೆರವಣಿಗೆಯ ದಾರಿಯುದ್ದಕ್ಕೂ ಪೊಲೀಸರ ಲಾಠಿ ಏಟಿಗೂ ಹೆದರದೇ ಅವರೆಲ್ಲ ನಮ್ಮನ್ನು ಹಿಂಬಾಲಿಸಿದ್ದನ್ನು ನೋಡಿ ನನ್ನ ಕಣ್ಣುಗಳು ತೇವಗೊಂಡವು.


ಅಂದಹಾಗೆ ಅವತ್ತು ನನಗೆ ದಿಢೀರನೆ ನೆನಪಾಗಿದ್ದು ಮಹಾತ್ಮ ಗಾಂಧಿ. ನಾನು ಅಪ್ಪಾಜಿಯನ್ನು ಮತ್ತೊಬ್ಬ ಮಹಾತ್ಮ ಎಂದು ಕರೆಯಲು ಇಚ್ಛಿಸುತ್ತೇನೆ. ನಾನು ಹೀಗೆ ಹೇಳಿದಾಕ್ಷಣ ಅಪ್ಪಾಜಿ ಯಾವ ಸೀಮೆಯ ಮಹಾತ್ಮ? ರಾಜ್‌ಕುಮಾರ್ ಕರ್ನಾಟಕಕ್ಕೆ ಏನು ಮಾಡಿದ್ದಾರೆ? ಇತ್ಯಾದಿ ಪ್ರಶ್ನೆಗಳನ್ನು ಕೆಲವರಾದರೂ ಕೇಳಬಹುದು. ಈ ಶಿವಣ್ಣನಿಗೆ ಬೇರೆ ಕೆಲಸ ಇಲ್ಲ ಅದಕ್ಕೆ ತನ್ನ ಅಪ್ಪಾಜಿಯನ್ನು ಮಹಾತ್ಮನಿಗೆ ಹೋಲಿಸುತ್ತಿದ್ದಾರೆ ಎಂದೂ ಹಲವರಿಗೆ ಅನ್ನಿಸಬಹುದು.

ಆದರೆ ನಾನು ಯಾಕೆ ಹೀಗೆ ಹೇಳುತ್ತಿದ್ದೇನೆ ಎಂದು ನಿಮ್ಮೊಂದಿಗೆ ಮುಕ್ತವಾಗಿ ಹಂಚಿಕೊಳ್ಳುತ್ತೇನೆ. ಇದನ್ನು ನೀವು ಒಪ್ಪುತ್ತೀರೋ ಇಲ್ಲವೋ ಅದು ನಿಮಗೇ ಬಿಟ್ಟದ್ದು. ಆ ಮಹಾತ್ಮ ತುಂಡು ಬಟ್ಟೆ ಧರಿಸಿ ಇಡೀ ದೇಶದ ಜನರಲ್ಲಿ ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಆಶಯಗಳನ್ನು ಬಿತ್ತಿದರು. ಇಲ್ಲಿ ನಮ್ಮ ಅಪ್ಪಾಜಿ ಒಂದು ಬಿಳಿ ಪಂಚೆ ಮತ್ತು ಬಿಳಿ ಶರ್ಟು ಧರಿಸಿ ಕನ್ನಡಿಗರಲ್ಲಿ ತಮ್ಮ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಜಾಗೃತಿ ಮೂಡಿಸಿದರು. ಗಾಂಧೀಜಿ ಹೇಗೆ ನಮಗೆ ಆದರ್ಶ ಪುರುಷರೋ ಹಾಗೆಯೇ ಅಪ್ಪಾಜಿಯೂ ಕೂಡ ಹಲವಾರು ತಲೆಮಾರಿನ ಕನ್ನಡಿಗರಿಗೆ ಆದರ್ಶ ವ್ಯಕ್ತಿಯಾಗಿದ್ದಾರೆ.

ಒಬ್ಬ ಕಲಾವಿದ ಬರೀ ನಟನೆಯಿಂದ ಇಷ್ಟೆಲ್ಲಾ ಮಾಡಲು ಸಾಧ್ಯವೇ? ಎಂದು ನನಗೇ ಎಷ್ಟೋ ಬಾರಿ ಅನ್ನಿಸಿದ್ದುಂಟು. ಆಗೆಲ್ಲಾ ನನಗೆ ನೆನಪಾಗಿದ್ದು ಎಂಜಿಆರ್ ಮತ್ತು ಎನ್.ಟಿ. ರಾಮರಾವ್. ನಿಜ, ಆ ಮಹಾನ್ ಕಲಾವಿದರು ನಿಧನ ಹೊಂದಿದಾಗಲೂ ಅವರ ನಾಡಿನಲ್ಲಿ ಅಭೂತಪೂರ್ವ ಜನಸಮೂಹ ಸೇರಿತ್ತು. ಆದರೆ ಅವರಿಬ್ಬರೂ ರಾಜಕೀಯ ನಾಯಕರೂ, ಅವರ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳೂ ಆಗಿದ್ದವರು. ಆದರೆ ಅಪ್ಪಾಜಿ ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲ, ಈ ರಾಜ್ಯವನ್ನು ಆಳಿದವರಂತೂ ಅಲ್ಲವೇ ಅಲ್ಲ. ಅಷ್ಟೇ ಅಲ್ಲ, ಅವರು ಎಲ್ಲ ಜಾತಿಗಳ ವರ್ಗಗಳ ಜನರಿಗೆ ಇಷ್ಟವಾಗಿದ್ದವರು. ಹೀಗೆ ಜಾತಿ ಮತ್ತು ರಾಜಕಾರಣದಿಂದ ದೂರವಿದ್ದ ಅಪ್ಪಾಜಿ ಜನರಿಗೆ ಹತ್ತಿರವಾಗಿದ್ದು ಅವರ ಸರಳ ವ್ಯಕ್ತಿತ್ವ, ಪ್ರತಿಭೆ ಮತ್ತು ಜನಾನುರಾಗಿ ನಡತೆಗಳಿಂದ ಎಂದು ನಂಬಿದ್ದೇನೆ.

ತಮ್ಮ ನಟನೆಯಿಂದ ಮಾತ್ರವಲ್ಲ, ತಮ್ಮ ಹಾಡುಗಾರಿಕೆಯಿಂದಲೂ ಜನರಿಗೆ ಹತ್ತಿರವಾದವರು ಅಪ್ಪಾಜಿ. ರಾಜ್ಯದಲ್ಲಿ ಕ್ಷಾಮ ಅಥವಾ ಪ್ರವಾಹಗಳು ಉಂಟಾದಾಗಲೆಲ್ಲ ಅಪ್ಪಾಜಿ ನೇತೃತ್ವದಲ್ಲಿ ನೂರಾರು ರಸಮಂಜರಿ ಕಾರ್ಯಕ್ರಮಗಳು ನಡೆದವು. ಎಷ್ಟೋ ಜಿಲ್ಲೆಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆಂದು ಅಪ್ಪಾಜಿ ರಸಮಂಜರಿ ಕಾರ್ಯಕ್ರಮ ನಡೆಸಿಕೊಟ್ಟಿದ್ದು ಉಂಟು. ಇನ್ನು ಕಾರ್ಗಿಲ್ ಯುದ್ಧದ ಸಮಯದಲ್ಲೂ ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ಅಪ್ಪಾಜಿ ಬೀದಿ ಬೀದಿಗಳಲ್ಲಿ ಸಂಚರಿಸಿ ಜನರಿಂದ ಹಣ ಸಂಗ್ರಹಣೆ ಮಾಡಿದರು.

ಇವೆಲ್ಲಕ್ಕಿಂತ ನನ್ನನ್ನು ಆಶ್ಚರ್ಯಗೊಳಿಸುತ್ತಿದ್ದದ್ದು ಅಪ್ಪಾಜಿಯ ಸ್ಫಟಿಕದಂತಹ ಸ್ಪಷ್ಟವಾದ ಕನ್ನಡ ಉಚ್ಚಾರಣೆ. ಅಪ್ಪಾಜಿಯ ಮಾತುಗಳಿಂದಾಗಿಯೇ ಕನ್ನಡ ಭಾಷೆ ಇನ್ನಷ್ಟು ಸುಂದರ ಮತ್ತು ಆಕರ್ಷಣೀಯವಾಯಿತು ಎಂದು ಅನೇಕ ಸಾಹಿತಿಗಳೇ ಹೇಳಿದ್ದು ನನಗಿನ್ನೂ ನೆನಪಿದೆ. ಭಾಷೆಯಲ್ಲಿನ ಪ್ರಬುದ್ಧತೆ ಮತ್ತು ಪ್ರೀತಿಯಿಂದ ತಾನೆ ಈ ಅವಿದ್ಯಾವಂತ ಮನುಷ್ಯನನ್ನು ಜನರು ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಕುವೆಂಪು, ಕಾರಂತರ ಸಾಲಿನಲ್ಲಿ ಸೇರಿಸುವಂತಾಗಿದ್ದು! ಹೀಗಾಗಿ ಅಪ್ಪಾಜಿ ಬರೀ ನಟನಲ್ಲ, ಸಾಂಸ್ಕೃತಿಕ ರಾಯಭಾರಿಯಲ್ಲ. ಅವರು ಈ ಸಮಾಜದ ಅನೇಕಾನೇಕ ಜನರಿಗೆ ಒಬ್ಬ ಆದರ್ಶ ಪುರುಷನಾಗಿ ಕಂಡಿದ್ದಾರೆಂಬ ಕಾರಣಕ್ಕಾಗಿ ನಾನು ಅಪ್ಪಾಜಿಯನ್ನು 'ಕರ್ನಾಟಕದ ಮಹಾತ್ಮ' ಎಂದು ಹೇಳಲು ಸಂಕೋಚಪಟ್ಟರೂ ಮೊದಲ ಬಾರಿಗೆ ಈ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಾನು ಇನ್ನೊಂದು ಮಾತು ಹೇಳುತ್ತೇನೆ.



ಇಲ್ಲದಿದ್ದರೆ ಒಬ್ಬ ವ್ಯಕ್ತಿಯ ಅಗಲಿಕೆಯ ಸಮಯದಲ್ಲಿ ಇಷ್ಟೊಂದು ಜನಸಾಗರ ಹರಿದುಬರಲು ಸಾಧ್ಯವೇ? ಗಲಭೆ, ನೂಕುನುಗ್ಗಲು, ಕಲ್ಲು ತೂರಾಟ, ಪೊಲೀಸರ ಆರ್ಭಟ ಇವೆಲ್ಲವನ್ನೂ ಮರೆತು ನಮ್ಮೊಂದಿಗೆ ಮೆರವಣಿಗೆಯಲ್ಲಿ ಬಂದ ಕನ್ನಡದ ಆ ಸಮಸ್ತ ಜನರನ್ನು ನಾನು ಈ ಸಂದರ್ಭದಲ್ಲಿ ಹೃದಯಪೂರ್ವಕವಾಗಿ ಸ್ಮರಿಸುತ್ತೇನೆ. ಅದರಲ್ಲೂ ಮುಖ್ಯವಾಗಿ ಈ ಸಂದರ್ಭದಲ್ಲಿ ನಿಧನ ಹೊಂದಿದ ಅಪ್ಪಾಜಿಯ ಅಭಿಮಾನಿ ದೇವರುಗಳಿಗೆ ಕೂಡಾ ನಾನು ನನ್ನ ಹೃದಯಾಂತರಾಳದ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದೇನೆ.

ಅಂದು ನನಗಿನ್ನೂ ನೆನಪಿದೆ. ನಾನು, ರಾಘು, ರಾಕ್‌ಲೈನ್ ಮೊದಲಾದವರು ಅಪ್ಪಾಜಿಯ ಪಾರ್ಥೀವ ಶರೀರವನ್ನು ಹೊತ್ತು ಸಾಗುತ್ತಿದ್ದ ವಾಹನದ ಮೇಲೆ ಕುಳಿತುಕೊಂಡಿದ್ದೆವು. ಕಂಠೀರವದಿಂದಲೇ ಜನಸಾಗರ ನಮ್ಮನ್ನು ಮುತ್ತಿದ್ದರೂ ಮೆರವಣಿಗೆ ಮುಂದೆ ಸಾಗಲು ತುಂಬ ಕಷ್ಟವಾಗಿರಲಿಲ್ಲ. ಆದರೆ ಯಾವಾಗ ನಾವು ಯಶವಂತಪುರ ತಲುಪಿದೆವೋ ನನ್ನ ಕಣ್ಣುಗಳನ್ನೇ ನಾನು ನಂಬಲಾಗಲಿಲ್ಲ. ಅಲ್ಲಿ ನಾಲ್ಕೂ ದಿಕ್ಕಿನಿಂದ ಹುಚ್ಚೆದ್ದ ಜನರು ನುಗ್ಗುತ್ತಿದ್ದರು. ಪೊಲೀಸರಿಂದ ಅವರನ್ನು ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ. ಅದೇ ಹೊತ್ತಿಗೆ ಕಿಡಿಗೇಡಿಗಳ ಗುಂಪೊಂದು ಅಲ್ಲಿದ್ದ ಪೆಟ್ರೋಲ್ ಬಂಕ್‌ಗೆ ಬೆಂಕಿ ಹೊತ್ತಿಸುತ್ತಿದ್ದುದನ್ನು ನಾನು ಕಂಡೆ. ಅದನ್ನು ನೋಡಿ, ನಾವಿದ್ದ ವಾಹನದ ಮೇಲಿನಿಂದಲೇ ನಾನು ಮತ್ತು ರಾಘು 'ದಯವಿಟ್ಟು ಬೆಂಕಿಯಿಡಬೇಡಿ' ಎಂದು ಕೈಮುಗಿದು ಅಂಗಲಾಚಿದೆವು. ಆಗ ದೂರದಲ್ಲಿದ್ದ ಪೊಲೀಸರು ಅಲ್ಲಿಂದಲೇ ಗುಂಪಿನತ್ತ ಗುಂಡು ಹಾರಿಸಲಾರಂಭಿಸಿದರು. ಪೊಲೀಸರ ಬುಲೆಟ್ಟುಗಳು ನಮ್ಮ ಕಿವಿಯ ಹತ್ತಿರವೇ ಸೊಯ್ಯನೆ ಸಾಗಿಹೋದವು. ಆ ಸಂದರ್ಭದಲ್ಲಿ ಏನಾಗುತ್ತಿದೆ ಎಂದು ಅರ್ಥೈಸಲು ನಮ್ಮಿಂದ ಸಾಧ್ಯವಾಗಲಿಲ್ಲ. ಪೊಲೀಸರ ಗುಂಡು ಆ ಗುಂಪಿನಲ್ಲಿದ್ದವನೊಬ್ಬನಿಗೆ ತಗುಲಿದಾಗ ಆತ ಅಲ್ಲೇ ಕುಸಿದುಬಿದ್ದ. ಇನ್ಯಾರೋ ನಾಲ್ಕು ಜನ ಆತನನ್ನು ದರದರನೇ ಎಳೆದು ಹೊತ್ತೊಯ್ದರು. ಇವೆಲ್ಲವನ್ನೂ ನೋಡಿದ ನಮ್ಮ ಸಹಾಯಕರಾದ ಚೆನ್ನ, ರವಿ, ಗೋವಿಂದು ಮೊದಲಾದವರು ನಮಗೆ ರಕ್ಷಣೆಯ ರೂಪದಲ್ಲಿ ನಮ್ಮ ಸುತ್ತಲೂ ಗೋಡೆಯ ರೀತಿ ಅಡ್ಡ ನಿಂತರು. ಆಗ ನನ್ನ ಕಿರಿಯ ಸಹೋದರ ಪುನೀತ್ ಮುಂದೆ ಬಂದು "ಇಂತಹ ರಕ್ಷಣೆ ನಮಗೀಗ ಅಗತ್ಯವಿಲ್ಲ" ಎಂದು ಅಬ್ಬರಿಸಿದ್ದು ನನಗಿನ್ನೂ ನೆನಪಿದೆ.

ಯಶವಂತಪುರದಿಂದ ಅಪ್ಪಾಜಿಯ ಅಂತಿಮ ಯಾತ್ರೆ ಫಯರ್ ಬಾಂಬ್ ಮತ್ತು ಪೊಲೀಸರ ಲಾಠಿ ಪ್ರಹಾರಗಳ ನಡುವೆಯೇ ಸಾಗುತ್ತಾಹೋಯಿತು. ನಾವಿದ್ದ ವಾಹನ ಹತ್ತಿ ಉರಿಯುತ್ತಿದ್ದ ಪೆಟ್ರೋಲ್ ಬಂಕ್‌ನ್ನು ಸಮೀಪಿಸಿತು. ನಾಲ್ಕೂ ದಿಕ್ಕುಗಳಲ್ಲಿ ಜನರ ನೂಕುನುಗ್ಗಲು. ಪೊಲೀಸರು ಅವರನ್ನೆಲ್ಲ ಹಿಂದೆ ತಳ್ಳುತ್ತಿದ್ದರು. ಆದರೆ ಜನರಿಗೆ ಹಿಂದೆ ಸರಿಯಲು ಸ್ಥಳವಿರಲಿಲ್ಲ, ಮುಂದೆ ಬರಲು ಪೊಲೀಸರು ಬಿಡುತ್ತಿರಲಿಲ್ಲ. ಆಗ ನಾವು ಮೂವರು ಸಹೋದರರು ಕಣ್ಣೀರು ಹಾಕುತ್ತಾ ಕೈ ಮುಗಿಯುತ್ತಾ ಅಭಿಮಾನಿಗಳಲ್ಲಿ ಮುಂದೆ ಹೋಗಲು ದಾರಿ ಬಿಟ್ಟುಕೊಡಿ ಎಂದು ಬೇಡಿಕೊಂಡೆವು. ಪೊಲೀಸರು ಕೊಟ್ಟ ಮೈಕಿನ ಮೂಲಕವೂ ಮನವಿ ಮಾಡಿಕೊಂಡೆವು. ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ನಾವೆಲ್ಲಾ ದಾರಿ ಮಧ್ಯದಲ್ಲೇ ಸಿಕ್ಕಿಹಾಕಿಕೊಂಡಿದ್ದೆವು. ಪಕ್ಕದಲ್ಲಿದ್ದ ಪೆಟ್ರೋಲ್ ಬಂಕ್ ಹತ್ತಿ ಧಗಧಗನೆ ಉರಿಯುತ್ತಿತ್ತು. ಅಲ್ಲಿ ಮಾತ್ರ ಜನ ಇಲ್ಲದ್ದನ್ನು ಗಮನಿಸಿದೆ. "ದೇವರೇ ನೀನೇ ನಮ್ಮನ್ನು ಕಾಪಾಡು" ಎಂದು ಪ್ರಾರ್ಥಿಸಿ ರಾಘು ಮತ್ತು ಪುನೀತ್‌ಗೆ ನನ್ನ ಮನಸ್ಸಿನಲ್ಲಿದ್ದುದನ್ನು ಹೇಳಿದೆ. ಅವರ ಪ್ರತಿಕ್ರಿಯೆಗೂ ಕಾಯದೆ ವಾಹನದ ಚಾಲಕನಿಗೆ ಪೆಟ್ರೋಲ್ ಬಂಕಿನ ಬೆಂಕಿಯ ಮಧ್ಯೆಯೇ ಗಾಡಿಯನ್ನು ತೂರಿಸು ಎಂದು ಜೋರಾಗಿ ಕಿರುಚಿದೆ.

ನನ್ನ ಮಾತನ್ನು ಚಾಚೂತಪ್ಪದೆ ಪಾಲಿಸಿದ ಆ ಚಾಲಕ ನೇರವಾಗಿ ಬೆಂಕಿಯ ಜ್ವಾಲೆಯನ್ನು ಲೆಕ್ಕಿಸದೇ ಧೈರ್ಯದಿಂದ ಆ ವಾಹನವನ್ನು ನುಗ್ಗಿಸಿದ. ಕೆಲವೇ ಸೆಕೆಂಡುಗಳಲ್ಲಿ ನಾವು ಬೆಂಕಿಯ ಜ್ವಾಲೆಯ ನಡುವಿನಿಂದ ಹಾದುಹೋದೆವು. ಹೊರಗೆ ಬಂದಾಕ್ಷಣ ದೇವರನ್ನು ಮತ್ತೆ ಸ್ಮರಿಸಿದೆ. ಅಷ್ಟೊತ್ತಿಗೆ ನಮ್ಮ ಬಳಿ ಬಂದ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರು "ಸಾರ್ ಅಲ್ಲಿ ಗ್ಯಾಸ್ ಲೀಕಾಗಿದೆ. ಸ್ವಲ್ಪ ಹೆಚ್ಚು ಕಮ್ಮಿಯಾಗಿದ್ದರೂ ನೀವೆಲ್ಲರೂ ಬೆಂಕಿಯ ಜ್ವಾಲೆಗೆ ಆಹುತಿಯಾಗುತ್ತಿದ್ದರಲ್ಲಾ?" ಎಂದು ದಬಾಯಿಸಿದರು.

ಅಪ್ಪಾಜಿಯ ಜೊತೆಜೊತೆಗೆ ನಾವು ಮೂವರೂ ಬೆಂಕಿಗೆ ಆಹುತಿಯಾಗಬಹುದಾಗಿದ್ದ ಈ ಕ್ಷಣವನ್ನು ನೆನೆಸಿಕೊಂಡು ಮೂಕನಾಗಿಬಿಟ್ಟೆ!

(ಮುಂದುವರೆಯುತ್ತದೆ)







ಅಪ್ಪಾಜಿಯ ಅಂತಿಮಯಾತ್ರೆಯ ಸಂದರ್ಭದಲ್ಲಿ ನಡೆದ ಗಲಭೆ ಮತ್ತು ಫಯರ್ ಬಾಂಬುಗಳನ್ನು ಸಿಡಿಸುತ್ತಿರುವ ಪೊಲೀಸ್

R.B.P. LANKESH, Kannada Weekly Price Rs. 10/- 20-6-2007 RNI No. KARKAN2005/14648 Regd.No.KA/BG(S)/2036/2005-

ಮುಗ್ಗರಿಸಿದ ಗಣೇಶನ 'ಹುಡುಗಾಟ'



ಈ ವಾರ ಬಿಡುಗಡೆಗೊಂಡಿರುವ 'ಹುಡುಗಾಟ' ಚಿತ್ರದ ಬಗ್ಗೆ ಗಣೇಶ್ ಅಭಿಮಾನಿಗಳಿಗೆ ಮಾತ್ರವಲ್ಲ, ಗಾಂಧಿನಗರದ ಜನರಿಗೆ ಕೂಡಾ ಭಾರೀ ನಿರೀಕ್ಷೆಯಿತ್ತು. ಇದಕ್ಕೆ ಕಾರಣ ಇಷ್ಟೇ; ಗಣೇಶ್ ನಟಿಸಿದ ಮೊದಲ ಚಿತ್ರ 'ಚೆಲ್ಲಾಟ' ಕುಂಟುತ್ತಾ ತೆವಳುತ್ತಾ ಒಂದೇ ಒಂದು ಚಿತ್ರಮಂದಿರದಲ್ಲಿ ಶತದಿನೋತ್ಸವ ಆಚರಿಸಿತ್ತು. ಆನಂತರ ಈತ ನಟಿಸಿದ 'ಮುಂಗಾರು ಮಳೆ' ಚಿತ್ರರಂಗದ ಇತಿಹಾಸದಲ್ಲೇ ಅಭೂತಪೂರ್ವ ಯಶಸ್ಸು ಕಂಡಿತು. ಮೊದಲನೆಯದು ಅದೃಷ್ಟ, ಎರಡನೆಯದು ಅದ್ಭುತ. ಹೀಗಾಗಿ ಗಣೇಶನಲ್ಲಿ ನಿಜವಾದ ಪ್ರತಿಭೆ ಇದೆಯೇ ಎಂಬುದನ್ನು 'ಹುಡುಗಾಟ' ಚಿತ್ರ ನೋಡಿ ನಿರ್ಧರಿಸೋಣ ಎಂಬುದು ಗಾಂಧಿನಗರದವರ ಲೆಕ್ಕಾಚಾರವಾಗಿತ್ತು.

ಅಂದವಾಗಿ ಆಕಸ್ಮಾತ್ 'ಹುಡುಗಾಟ' ನೂರುದಿನದ ಪ್ರದರ್ಶನ ಕಂಡರೆ ಗಣೇಶ್ ಹ್ಯಾಟ್ರಿಕ್ ಹೀರೋ ಎನಿಸಿಕೊಳ್ಳುವ ಸಾಧ್ಯತೆಯೂ ಇತ್ತು. ಇತ್ತೀಚೆಗೆ ಮುತ್ತೋರ್ವ ಯುವ ನಟ ಪ್ರೇಮ್‌ನ ಮೂರನೇ ಚಿತ್ರ 'ಪಲ್ಲಕ್ಕಿ' ಮುಗ್ಗರಿಸಿ ಹ್ಯಾಟ್ರಿಕ್ ವಂಚಿತನಾಗಿದ್ದರಿಂದ, ಪ್ರೇಮ್ ಸಾಧಿಸಲಾಗದ್ದನ್ನು ಗಣೇಶ್ ಸಾಧಿಸಿಯಾನೆ ಎಂಬ ಕುತೂಹಲವೂ ಗಾಂಧಿನಗರದ ಜನರಲ್ಲಿತ್ತು.

'ಹುಡುಗಾಟ' ಚಿತ್ರವು ಹಿಂದಿಯಲ್ಲಿ ಅಮೀರ್ ಖಾನ್ ನಟಿಸಿದ್ದ 'ದಿಲ್ ಹೇ ಕಿ ಮಾನ್ತಾ ನಹೀ' ಚಿತ್ರದ ಜೆರಾಕ್ಸ್ ಕಾಪಿ. ಈ ಚಿತ್ರದಲ್ಲಿ ಗಣೇಶ್ ಚೆನ್ನಾಗಿ ನಟಿಸಿದ್ದರೂ, ಆ ಪಾತ್ರ ಆತನ ಸದ್ಯದ ಇಮೇಜಿಗೆ ಹೊಂದುವಂತಿಲ್ಲ. ಬಹುತೇಕ ಹಾಡುಗಳನ್ನು 'ಮುಂಗಾರು ಮಳೆ' ಶೈಲಿಯಲ್ಲೇ ಚಿತ್ರೀಕರಿಸಿದ್ದರೂ ಎಲ್ಲೂ ಅದು ಮನಸ್ಸಿಗೆ ನಾಟುವುದಿಲ್ಲ. ನಾಯಕಿ ರೇಖಾ ಈಗ ತಾನೇ ನಿದ್ದೆಯಿಂದ ಎದ್ದುಬಂದವಳಂತೆ ಮಂಪರು ಕಣ್ಣಿನಲ್ಲೇ ಚಿತ್ರದುದ್ದಕ್ಕೂ ಕಾಣಿಸಿಕೊಂಡಿದ್ದಾಳೆ. ಚಿತ್ರದ ಹಾಡುಗಳು ಮತ್ತು ಹಿನ್ನೆಲೆ ಸಂಗೀತ ಕರ್ಣ ಕಠೋರವಾಗಿವೆ. ಒಟ್ಟಾರೆಯಾಗಿ 'ಹುಡುಗಾಟ' ಜೊಳ್ಳು ಜೊಳ್ಳಾಗಿದೆ. 'ಮುಂಗಾರು ಮಳೆ'ಯ ನಂತರ ಗಣೇಶನ ಪಾಲಿಗೆ 'ಹುಡುಗಾಟ' ಬರೀ ಕ್ಷಾಮ ಎಂದರೆ ತಪ್ಪಾಗದು!

ಮೀನಿನ ಹೆಜ್ಜೆಯೂ, ರಮ್ಯಳ ಗೆಜ್ಜೆಯೂ



"ಮೀನಿನ ಹೆಜ್ಜೆಯನ್ನಾದರೂ ಗುರುತಿಸಬಹುದು ಆದರೆ ರಮ್ಯಾಳ ಗೆಜ್ಜೆಯನ್ನು ತಿಳಿಯಲು ಸಾಧ್ಯವಿಲ್ಲ" ಎಂಬ ಹೊಸ ಗಾದೆ ಗಾಂಧಿನಗರದಲ್ಲಿ ಹುಟ್ಟಿಕೊಂಡಿದೆ. ಇದಕ್ಕೆ ಕಾರಣವಿಷ್ಟೇ: ಮೊನ್ನೆ ಮೊನ್ನೆ ಪ್ರಾರಂಭವಾದ ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರದಲ್ಲಿ ನಟಿಸಲು ಆಕೆ ಒಪ್ಪಿಕೊಂಡಿದ್ದೇ ಆ ಚಿತ್ರದ ಆಹ್ವಾನ ಪತ್ರಿಕೆ ಆಕೆಯ ಕೈ ಸೇರಿದ ನಂತರ!


"ಬಾಬು ಅವರು ಫೋನ್ ಮಾಡಿ ನನಗೆ ನಾಯಕಿಯಾಗಿ ನಟಿಸಲು ಕೇಳಿದ್ದರು. ಆದರೆ ನಾನು ಕೆಲಸದ ಒತ್ತಡದ ನಿಮಿತ್ತ ಅದನ್ನು ಮರೆತಿದ್ದೆ. ಆಹ್ವಾನ ಪತ್ರಿಕೆ ನೋಡಿದ ನಂತರ ನನಗೆ ಈ ಚಿತ್ರದಲ್ಲಿ ನಟಿಸಬೇಕು ಎಂದು ಮನಸ್ಸಾಯಿತು. ಆದಕ್ಕೆ ನಾನೇ ನಿರ್ದೇಶಕ ಬಾಬು ಅವರಿಗೆ ಫೋನ್ ಮಾಡಿ ನಾನು ಈ ಚಿತ್ರದಲ್ಲಿ ನಟಿಸಲು ತಯಾರಿದ್ದೇನೆ" ಎಂದು ಹೇಳುತ್ತಾ ಕಣ್ಣರಳಿಸುತ್ತಾಳೆ ಈ ಮೋಹಕ ನಟಿ.

ಸದ್ಯಕ್ಕೆ ಈಕೆ ಕನ್ನಡ ಚಿತ್ರರಂಗಕ್ಕೊಬ್ಬಳೇ ಪದ್ಮಾವತಿ ಎಂಬಂತಾಗಿರುವುದು ಎಲ್ಲರಿಗೂ ಗೊತ್ತು. ಈಕೆಯ ಕಾಲ್‌ಶೀಟ್ ಪಡೆಯಲು ಹತ್ತಾರು ನಿರ್ದೇಶಕರು ಪ್ರಯತ್ನಿಸುತ್ತಲೇ ಇದ್ದರೂ ಆಕೆ ತುಂಬಾ ಜಾಗರೂಕತೆಯಿಂದ ಒಂದೊಂದೇ ಚಿತ್ರವನ್ನು ಒಪ್ಪುತ್ತಿದ್ದಾಳೆ. ಶೀಘ್ರದಲ್ಲೇ ಬರಲಿರುವ ಟಿ.ಎನ್. ಸೀತಾರಾಮ್ ನಿರ್ದೇಶನದ 'ಮೀರಾ ಮಾಧವ ರಾಘವ' ಚಿತ್ರ ಈಕೆಯ ವೃತ್ತಿ ಜೀವನದಲ್ಲಿ ಪ್ರಮುಖ ತಿರುವೊಂದನ್ನು ನೀಡಿದರೂ ಆಶ್ಚರ್ಯವಿಲ್ಲ.

ಗಿಮಿಕ್ ಕುವರ ಕಿಶನ್



ಮಾಸ್ಟರ್ ಕಿಶನ್ ಎಂಬ ಬಾಲಕ ಮತ್ತೊಂದು ಗಿಮಿಕ್ ಶುರುಹಚ್ಚಿಕೊಂಡಿದ್ದಾನೆ. ಆತ ಸದ್ಯದಲ್ಲೇ ನಿರ್ದೇಶಿಸಲಿರುವ 'ಎಕ್ಸ್‌ಟ್ರಾ ಪ್ಲೇಯರ್' ಎಂಬ ಚಿತ್ರದ ಸಂಕಲನವನ್ನೂ ಆತನೇ ಮಾಡುತ್ತಾನಂತೆ. ಇದನ್ನೆಲ್ಲ ನೋಡಿದರೆ, ಕಿಶನ್‌ನನ್ನು ಹೆತ್ತವರಿಗೆ ಆತ ಆರೋಗ್ಯಕರವಾದ ಹುಡುಗನಾಗಿ ಬೆಳೆಯುವುದಕ್ಕಿಂತ ಆತ ದಾಖಲೆಗಳನ್ನು ಸ್ಥಾಪಿಸುವುದರಲ್ಲೇ ಹೆಚ್ಚು ಆಸಕ್ತಿ ಇದೆ ಎಂದು ಭಾಸವಾಗುತ್ತದೆ. ಈ ಮಾತಿಗೆ ಇಂಬು ಕೊಡುವಂತೆ ಕಿಶನ್ ಓದುತ್ತಿರುವ ಆರ್.ಪಿ.ಸಿ. ಲೇಔಟ್‌ನ ಶಾಲೆಯ ಮುಂದೆ ಆತನ ದೊಡ್ಡ ದೊಡ್ಡ ಕಟೌಟುಗಳು, ಬ್ಯಾನರುಗಳು ರಾರಾಜಿಸುತ್ತಿರುವ ಸುದ್ದಿಗಳೂ ಕೇಳಿಬರುತ್ತಿವೆ. ಇದೆಲ್ಲವೂ ಖಂಡಿತವಾಗಿಯೂ ಯಾರೂ ಮೆಚ್ಚುವಂತಹ ವಿಷಯವಲ್ಲ. ಆತನ ಪ್ರತಿಭೆಯನ್ನು ಹೆತ್ತವರು ಸದುಪಯೋಗಪಡಿಸಿಕೊಳ್ಳಲಿ, ಆದರೆ ಈ ರೀತಿ ಕೀಳು ದರ್ಜೆಯಲ್ಲಿ ವೈಭವೀಕರಿಸುವುದನ್ನು ಇನ್ನಾದರೂ ನಿಲ್ಲಿಸಲಿ ಎಂಬುದಷ್ಟೇ ನಮ್ಮ ಕಿವಿಮಾತು.



ಪ್ರಸಾದರ ಮತ್ತೊಂದು ಪ್ರಯತ್ನ

ಮೊನ್ನೆ ಮೊನ್ನೆಯಷ್ಟೇ ಹಂಸಲೇಖಾ ಅವರಿಂದ ಅವಮಾನಕ್ಕೆ ಗುರಿಯಾಗಿದ್ದ ಯುವಕವಿ ನಾಗೇಂದ್ರ ಪ್ರಸಾದ್ ಅದನ್ನೇ ಸವಾಲಾಗಿ ಸ್ವೀಕರಿಸಿ ಈಗ ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಲು ಹೊರಟಿದ್ದಾರೆ. ಅವರ ನಿರ್ದೇಶನದ ಮೂರನೇ ಚಿತ್ರ ಸದ್ಯದಲ್ಲೇ ಸೆಟ್ಟೇರುವುದು ಶತಸಿದ್ಧ. ಚಿತ್ರದ ಹೆಸರು ಇನ್ನೂ ಗೊತ್ತಾಗಿಲ್ಲ, ಆದರೆ ಈ ಚಿತ್ರದ ನಾಯಕಿಯಾಗಿ 'ಲಗಾನ್' ಮತ್ತು 'ಮುನ್ನಾಬಾಯಿ ಎಂಬಿಬಿಎಸ್' ಚಿತ್ರಗಳಲ್ಲಿ ನಟಿಸಿದ್ದ ಗ್ರೇಸಿ ಸಿಂಗ್‌ಳನ್ನು ಆಯ್ಕೆ ಮಾಡಿರುವ ಬಿಸಿಬಿಸಿ ಸುದ್ದಿ ಬಂದಿದೆ.


ಬಾಲಿವುಡ್ ಬೆಡಗಿ ಗ್ರೇಸಿ ಸಿಂಗ್ ಜೊತೆಜೊತೆಗೆ ಮಾಜಿ ಡ್ರೀಮ್ ಗರ್ಲ್, ಬಿಜೆಪಿಪಕ್ಷದ ಹಾಲಿ ಎಂಪಿ ಹೇಮಾಮಾಲಿನಿಯನ್ನು ಕೂಡಾ ಈ ಚಿತ್ರಕ್ಕೆ ಎಳೆತರಲು ನಾಗೇಂದ್ರ ಪ್ರಸಾದ್ ಭಗೀರಥ ಪ್ರಯತ್ನದಲ್ಲಿದ್ದಾರೆ. ಈಗಾಗಲೇ ನಿರ್ದೇಶಕರಾಗಿ ಸೋತಿರುವ ನಾಗೇಂದ್ರ ಪ್ರಸಾದ್‌ಗೆ ಈ ಹಿಂದಿ ಚಿತ್ರರಂಗದ ಮಹಿಳೆಯರಿಂದಾದರೂ ಬ್ರೇಕ್ ಸಿಗುತ್ತದೆಯೇ?

ಇದು ರತ್ನಜಾ ಕನಸು

'ನೆನಪಿರಲಿ' ಮೂಲಕ ಕನ್ನಡದಲ್ಲಿ ಹೊಸ ಅಲೆಗೆ ನಾಂದಿ ಹಾಡಿದ ಹಂಸ್-ರತ್ನಜಾ-ಪ್ರೇಂ ಜೋಡಿ ಎರಡು ವರ್ಷಗಳ ಗ್ಯಾಪ್ ನಂತರ ಮತ್ತೆ 'ಹೊಂಗನಸು'ನ್ನು ಕಟ್ಟಿಕೊಡಲು ಅಣಿಯಾಗಿದ್ದಾರೆ.

'ನೆನಪಿರಲಿ' ಚಿತ್ರ ಕನ್ನಡಕ್ಕೆ ರತ್ನಜರಂತಹ ಹೊಸ ನಿರ್ದೇಶಕನನ್ನು ನೀಡಿತಲ್ಲದೇ, ಯುವ ನಾಯಕ ಪ್ರೇಂಗೆ ಕನ್ನಡದಲ್ಲಿ ಗಟ್ಟಿಯಾದ ತಳಹದಿಯೊಂದನ್ನು ಹಾಕಿಕೊಟ್ಟಿತು. ಜೊತೆಗೆ ಅವಕಾಶಗಳೇ ಇಲ್ಲದೆ ಸೊರಗಿ ಕುಳಿತಿದ್ದ ಹಂಸಲೇಖಾ ಮತ್ತೆ ಲೈಮ್ ಲೈಟಿಗೆ ಬರುವಂತಾಯಿತು. ಈ ಮೂವರ ತ್ರಿವೇಣಿಸಂಗಮದಲ್ಲಿ 'ಹೊಂಗನಸು' ಹೇಗೆ ಮೂಡುತ್ತದೋ ಕಾದುನೋಡಬೇಕು. ಒಟ್ಟಿನಲ್ಲಿ 'ಹೊಂಗನಸು' ಕನ್ನಡ ಚಿತ್ರರಂಗಕ್ಕೆ ಹೊಸ ಕನಸೊಂದನ್ನು ನೀಡುವಂತಾಗಲಿ...

ಭಟ್ಟರಿಗೆ 'ನೋ' ಎಂದ ಪುನೀತ್




ಪುನೀತ್ ರಾಜ್‌ಕುಮಾರ್ ಅಮೋಘ ಎರಡನೇ ಬಾರಿ ನಿರ್ದೇಶಕ ಯೋಗರಾಜ್ ಭಟ್ ಅವರ ಆಫರ್‌ಅನ್ನು ತಿರಸ್ಕರಿಸಿದ್ದಾರೆ. ನಿಮಗಿದು ಗೊತ್ತಿರಬೇಕು. ಕನ್ನಡ ಚಿತ್ರರಂಗದಲ್ಲಿ ಇತಿಹಾಸ ಸೃಷ್ಟಿಸಿರುವ 'ಮುಂಗಾರು ಮಳೆ' ಚಿತ್ರದ ಕತೆಯನ್ನು ಮೊದಲು ಯೋಗರಾಜ್ ಭಟ್ ಹೇಳಿದ್ದು ಪುನೀತ್‌ಗೆ. ಆತ ಅದನ್ನು ತಿರಸ್ಕರಿಸಿದ ನಂತರ ಆ ಚಿತ್ರ ಗಣೇಶನ ಪಾಲಾಯಿತು. ಈಗ 'ಮುಂಗಾರು ಮಳೆ' ಭರ್ಜರಿ ಯಶಸ್ಸು ಕಂಡ ನಂತರ ಯೋಗರಾಜ್ ಭಟ್ ಮತ್ತೊಮ್ಮೆ ಪುನೀತ್ ಬಳಿ ಹೋಗಿ 'ಗಾಳಿಪಟ' ಹಾರಿಸಿದ್ದಾರೆ. ಪುನೀತ್‌ಗೆ ಕತೆ ಇಷ್ಟವಾಯಿತಂತೆ. ಆದರೆ ಜುಲೈ ತಿಂಗಳಲ್ಲೇ ಕಾಲ್‌ಶೀಟ್ ಬೇಕು ಎಂದು ಯೋಗರಾಜ ಭಟ್ ಕೇಳಿದಾಕ್ಷಣ ಪುನೀತ್ ಅಸಹಾಯಕರಾಗಿದ್ದಾರೆ. ಏಕೆಂದರೆ ಪುನೀತ್ ಈಗಾಗಲೇ ತಮ್ಮ ಕಾಲ್ ಶೀಟನ್ನು ಡಿ. ರಾಜೇಂದ್ರ ಬಾಬುಗೆ ನೀಡಿದ್ದಾರೆ. ಬೇರೆಯವರು ಪುನೀತ್ ಜಾಗದಲ್ಲಿದ್ದಿದ್ದರೆ ಕೂಡಲೇ ಬಾಬುಗೆ ಕೈಕೊಟ್ಟು ಯೋಗರಾಜ್ ಭಟ್ಟರಿಗೆ 'ಎಸ್' ಅನ್ನುತ್ತಿದ್ದರು. ಆದರೆ ವಜ್ರೇಶ್ವರಿ ಕಂಬೈನ್ಸ್‌ನವರ ಜಾಯಮಾನ ಅಂತಹದ್ದಲ್ಲ, ಈಗಾಗಲೇ ಬಾಬುಗೆ ಮಾತು ಕೊಟ್ಟಿರುವುದರಿಂದ ಆ ಚಿತ್ರಕ್ಕೇ ತಮ್ಮ ಆದ್ಯತೆ ಎಂದು ಯೋಗರಾಜ್ ಭಟ್ಟರಿಗೆ ಹೇಳಿದ್ದಾರೆ.

ಹಾಗಾಗಿ ಪುನೀತ್‌ರನ್ನು ಹಾಕಿ ಚಿತ್ರ ಮಾಡುವ ಯೋಗರಾಜರ ಪ್ರಯತ್ನಕ್ಕೆ ಯೋಗ ಕೂಡಿಬಂದಿಲ್ಲ. ಅಂತೂ ಸ್ಟಾರ್ ಡೈರೆಕ್ಟರ್ ಯೋಗರಾಜ್ ಭಟ್ ಮತ್ತು ಪವರ್ ಸ್ಟಾರ್ ಪುನೀತ್ ಸಮಾಗಮದ ಚಿತ್ರ ಮತ್ತೊಮ್ಮೆ ಪ್ರೇಕ್ಷಕರ ಪಾಲಿಗೆ ಮರೀಚಿಕೆಯಾಗಿದೆ.

↑ 'ಸ್ನೇಹಾನಾ ಪ್ರೀತೀನಾ' ಚಿತ್ರದಲ್ಲಿ ಲಕ್ಷ್ಮಿ ರೈ

ಹೀಗೊಂದಿಷ್ಟು ಲವ್ ಸ್ಟೋರಿಗಳು



ಹಿಂದಿ ಚಿತ್ರರಂಗದ ಚಿರ ಯುವಕ 82ರ ಹರೆಯದ ದೇವ್ ಆನಂದ್‌ರವರ ಆತ್ಮಚರಿತ್ರೆ 'ರೊಮ್ಯಾನ್ಸ್ ವಿತ್ ದ ಲೈಫ್' ಸದ್ಯದಲ್ಲೇ ಬಿಡುಗಡೆಗೊಳ್ಳಲಿದೆ. ಆತ ಯೌವನದ ಪರಾಕಾಷ್ಠೆಯ ದಿನಗಳಲ್ಲಿ ತನ್ನ ನಾಯಕ ನಟಿ ಸುರಯ್ಯಾಳನ್ನು ಮನಸಾರೆ ಪ್ರೀತಿಸಿದ್ದನ್ನು ಒಂದು ಅಧ್ಯಾಯದಲ್ಲಿ ಸವಿವರವಾಗಿ ಬರೆದಿದ್ದಾರಂತೆ. ಒಮ್ಮೆ ಶೂಟಿಂಗ್ ಸಮಯದಲ್ಲಿ ದೋಣಿ ಮಗುಚಿದಾಗ ಆಕೆಯನ್ನು ರಕ್ಷಿಸಿದ ಸಂದರ್ಭದಲ್ಲಿ ಇವರಿಬ್ಬರ ನಡುವೆ ಪ್ರೇಮಾಂಕುರ



ವಾಯಿತಂತೆ. ಆದರೆ ಆಕೆಯ ತಾತ ಒಪ್ಪದ ಕಾರಣ ಅವರಿಬ್ಬರ ಮದುವೆ ನಡೆಯಲಿಲ್ಲವಂತೆ. ಹೀಗೆ ಭಗ್ನ ಪ್ರೇಮಿಯಾದ ಸುರಯ್ಯಾ ಕೊನೆಯ ತನಕ ಮದುವೆ ಯಾಗದೇ ಏಕಾಂಗಿ ಯಾಗಿ ಉಳಿದಿದ್ದರು.

ನಾಯಕ-ನಾಯಕಿಯರ ಅಮರ, ಮಧುರ, ಪ್ರೇಮ ಅಂದರೆ ಹೇಗಿರುತ್ತದೆ ಎಂಬುದಕ್ಕೆ ಇದೊಂದು ಪುಟ್ಟ ಉದಾಹರಣೆ.

ಈ ಹಿಂದೆ 'ಮದರ್ ಇಂಡಿಯಾ' ಚಿತ್ರೀಕರಣದ ಸಂದರ್ಭ ದಲ್ಲಿ ಬೆಂಕಿಯ ಜ್ವಾಲೆಯಲ್ಲಿ ನಾಯಕಿ ನರ್ಗೀಸ್ ಸಿಲುಕಿಕೊಂಡಾಗ ಆ ಚಿತ್ರದಲ್ಲಿ ಆಕೆಯ ಮಗನ ಪಾತ್ರ ನಿರ್ವಹಿಸುತ್ತಿದ್ದ ನಟ ಸುನಿಲ್‌ದತ್ ಅವರನ್ನು ಅಪಾಯದಿಂದ ಪಾರು ಮಾಡಿದ್ದರು. ಅಲ್ಲಿಂದ ಇವರಿಬ್ಬರ ನಡುವೆ ಶುರುವಾದ ಪ್ರೇಮ ಮದುವೆ, ಮಕ್ಕಳು, ಸಂಸಾರ, ಮಗ ಸಂಜಯ್ ದತ್‌ನ ಮಾದಕ ವ್ಯಸನದ ಸಮಸ್ಯೆಗಳೆಲ್ಲವನ್ನು ದಾಟಿ ಕೊನೆಗೆ ನರ್ಗೀಸರಿಗೆ ಕ್ಯಾನ್ಸರ್ ಬಂದು ಅವರನ್ನು ಬಲಿತೆಗೆದು ಕೊಳ್ಳುವವರೆಗೂ ನಡೆದಿತ್ತು. ಇವತ್ತಿಗೂ ನರ್ಗೀಸ್ ಮತ್ತು ಸುನಿಲ್‌ದತ್ ಎಂದರೆ ಹಿಂದಿ ಚಿತ್ರರಂಗದ ಆದರ್ಶ ದಂಪತಿಗಳು ಎಂದೇ ಜನ ಭಾವಿಸಿದ್ದಾರೆ.

ದೇವ್ ಆನಂದ್ ಮತ್ತು ಸುನೀಲ್ ದತ್‌ರಂತೆ ಕನ್ನಡ ಚಿತ್ರರಂಗದಲ್ಲಿ ಇಲ್ಲಿಯತನಕ ನಾಯಕ ನಟಿಯನ್ನು ಅಪಾಯದಿಂದ ಪಾರು ಮಾಡಿ, ಆಕೆಯನ್ನು ಪ್ರೇಮಿಸಿದ ಖ್ಯಾತಿ ಯಾವ ನಾಯಕ ನಟನಿಗೂ ಸಿಕ್ಕಿಲ್ಲ. ಅದರ ಬದಲಿಗೆ ಆ ಕೆಲಸವನ್ನು ಛಾಯಾಗ್ರಾಹಕ ರೊಬ್ಬರು ಮಾಡಿದ ಉದಾಹರಣೆಯಿದೆ. 'ತಾಯಿ ಸಾಹೇಬ' ಚಿತ್ರೀ ಕರಣ ಸಂದರ್ಭದಲ್ಲಿ ನಾಯಕಿ ಜಯಮಾಲಾ ತಲೆಸುತ್ತಿ ಬಿದ್ದಾಗ ಆಕೆಯ ಸಹಾಯಕ್ಕೆ ಮೊದಲು ಧಾವಿಸಿದವರೆಂದರೆ ಛಾಯಾಗ್ರಾಹಕ ರಾಮಚಂದ್ರ. ಈ ಚಿತ್ರದಲ್ಲಿ ನಾಯಕನಟನೇ ಇರಲಿಲ್ಲವಾದ್ದರಿಂದ ಛಾಯಾಗ್ರಾಹಕರಿಗೆ ಅಂತಹ ಅವಕಾಶ ಸಿಕ್ಕಿತೋ ಏನೋ?!

ಈಗ ರಾಮಚಂದ್ರ ಮತ್ತು ಜಯಮಾಲಾ ಸಂತೃಪ್ತಿಯ ದಾಂಪತ್ಯ ನಡೆಸುತ್ತಿದ್ದಾರೆ. ಸಿನಿಮಾ ಲೋಕದಲ್ಲಿ ಪ್ರೀತಿ, ಪ್ರೇಮ ಹುಟ್ಟುವುದು ಅವರ ಸೌಂದರ್ಯ ನೋಡಿ ಅಲ್ಲ ಎಂಬುದು ನಿಮಗೆ ಈಗಲಾದರೂ ಗೊತ್ತಾಯಿಯೇ?



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44